ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ

ಸಂಶೋಧಕ

ವೇದಮೂರ್ತಿ ಪಿ. ಪಾಲಯ್ಯ

ಮಾರ್ಗದರ್ಶಕರು

ರಮೇಶ ನಾಯಕ

ಆಯ್ಕೆ ಶ್ರೇಣಿ ಅಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ವಿದ್ಯಾರಣ್ಯ-೫೮೩ ೨೭೬

೨೦೦೯

ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ

ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ

ಸಂಶೋಧಕ
ವೇದಮೂರ್ತಿ ಪಿ. ಪಾಲಯ್ಯ

ಮಾರ್ಗದರ್ಶಕರು
ರಮೇಶ ನಾಯಕ
ಆಯ್ಕೆ ಶ್ರೇಣಿ ಅಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.
ವಿದ್ಯಾರಣ್ಯ-೫೮೩ ೨೭೬

೨೦೦೯

ಪ್ರಮಾಣ ಪತ್ರ

ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ರಮೇಶ ನಾಯಕ ಅವರ ಸಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: ೧೬-೧೦-೨೦೦೫

(signature)
(ವೇದಮೂರ್ತಿ ಪಿ. ಪಾಲಯ್ಯ)
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ವೇದಮೂರ್ತಿ ಪಿ. ಪಾಲಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ: ೦೭/೧೦/೨೦೦೮

ರಮೇಶ ನಾಯಕ
ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ಪರಿವಿಡಿ

ಅಧ್ಯಾಯ : ಒಂದು

ಪ್ರಸ್ತಾವನೆ

೧.೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೨ ಅಧ್ಯಯನದ ವಿಧಾನ ಮತ್ತು ಸ್ವರೂಪ

೧.೩ ಸಂಬಂಧಿಸಿದ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಸ್ವರೂಪ

ಪ್ರಸ್ತಾವನೆ

ಪ್ರಮುಖ ರಾಜಮನೆತನಗಳ ಹಾಗೂ ಸಾಮಂತರ ಕುರಿತಾಗಿರುವ ಹೆಚ್ಚಿನ ಸಂಗತಿಗಳನ್ನು ಮಾತ್ರ ಇತಿಹಾಸದಲ್ಲಿ ದಾಖಲಿಸಲಾಗಿದೆ. ಆದರೆ ವಿಶಾಲ ಅರ್ಥದಲ್ಲಿ ವಿಸ್ತಾರ ಹಾಗೂ ಬಹು ಭಿನ್ನತೆಯನ್ನು ಹೊಂದಿರುವ ಒಂದು ಅಧ್ಯಯನ ಶಿಸ್ತು. ಇದು ಮಾನವನ ಹುಟ್ಟಿನಿಂದ ಅವನ ಸರ್ವ ವಿಕಾಸಗಳ ವೈಶಿಷ್ಟ್ಯ ಮತ್ತು ಸತ್ಯಾಸತ್ಯತೆಯಿಂದ ಕೂಡಿದ ಘಟನಾವಳಿಗಳನ್ನು ವಾಸ್ತವಕ್ಕೆ ಹತ್ತಿರವಾಗಿ ನಿರೂಪಿಸುವ ಒಂದು ಪ್ರಮಾಣಬದ್ಧ ದಾಖಲೆಯಾಗಿದೆ ಎಂದು ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಆದ್ದರಿಂದ ಚರಿತ್ರೆಯು ಒಂದು ಪ್ರದೇಶದ ಮತ್ತು ಮಾನವನ ಕುರಿತಿರುವ ಸಮಷ್ಟಿಯ ಚರಿತ್ರೆಯಾಗಿದೆ. ಅಂದರೆ ಎಲ್ಲ ಕಾಲದ ಹಾಗೂ ಎಲ್ಲಾ ವರ್ಗದವರ ಜೀವನ ಸ್ಥಿತಿಗಳು, ಅವರ ಪರಂಪರೆ, ಅವರು ಬಾಳಿ ಬದುಕಿದ ಮೌಲ್ಯಗಳನ್ನು ಪರಿಚಯಿಸುವ ಮಾರ್ಗವಾಗಿದೆ. ಆದರೆ ವಾಸ್ತವದಲ್ಲಿ ಈ ನಿಟ್ಟಿನ ಉದ್ದೇಶಗಳನ್ನಿಟ್ಟುಕೊಂಡು ರಚನೆಯಾಗಿರುವ ಇತಿಹಾಸ ಅಧ್ಯಯನಗಳು ಕಡಿಮೆಯಾಗಿ ಕೇಂದ್ರವಾಗಿರುವ ಸಂಗತಿಗಳನ್ನು ಮಾತ್ರ ವಿವರಿಸಲು ಸಫಲವಾಗಿದೆ. ಇಂಥ ಬಹುಮುಖ್ಯ ತೊಡರುಗಳನ್ನು ನಿವಾರಿಸಲು ಇತ್ತೀಚಿನ ದಿನಗಳಲ್ಲಿ ಇತಿಹಾಸದ ಅಧ್ಯಯನದ ಕ್ರಮಗಳು ಬದಲಾಗುತ್ತಿವೆ. ಕೇಂದ್ರದಷ್ಟೇ ಅಂಚಿನ ಸಂಸ್ಕೃತಿಯ ವಿಚಾರಗಳು ಮುಖ್ಯವಾಗಿ ಪರಿಗಣಿತವಾಗಿವೆ. ಈ ಹಿನ್ನೆಲೆಯಲ್ಲಿ ಇತಿಹಾಸ ಸಮಗ್ರತೆಯನ್ನು ಪಡೆಯುವಲ್ಲಿ ಎಲ್ಲಾ ಬಗೆಯ ಆಕರಗಳು ಅವಶ್ಯಕವಾಗಿ ಪ್ರತಿಬಿಂಬಿತವಾಗಿವೆ.

ಬೇರೆ ಬೇರೆ ಕಾಲಘಟ್ಟಗಳಲ್ಲಿ ಯಾವುದೋ ಕಾರಣಗಳಿಂದ ಮೇಲೆದ್ದು ಬಂದ ಧರ್ಮಗಳನ್ನು, ಜನವರ್ಗಗಳನ್ನು, ಅವರ ಸಾಧನೆಗಳನ್ನು ಉಜ್ವಲೀಕರಿಸಿ ಅವುಗಳೇ ನಮ್ಮ ಪ್ರಾಂತ್ಯದ, ರಾಷ್ಟ್ರದ ಘಟನೆಗಳೆಂಬಂತೆ ಮತ್ತು ಸರ್ವಕಾಲಿಕ ಸತ್ಯಗಳೆಂಬಂತೆ ಚರಿತ್ರೆಯಲ್ಲಿ ನಿರೂಪಿಸಲಾಗಿದೆ. ಬಹಳ ಮಟ್ಟಿಗೆ ಸಾಮಾನ್ಯರ ಮತ್ತು ಸ್ಥಳೀಯವಾದ ಎಲ್ಲಾ ರೀತಿಯ ಆಲೋಚನೆಗಳು, ಕ್ರಿಯೆಗಳು ದಾಖಲಾಗದೆ ಗುಪ್ತಗಾಮಿನಿಯಾಗಿ ಉಳಿದುಕೊಂಡು ಬಂದಿವೆ. ಆದ್ದರಿಂದ ಸದ್ಯ ನಿರೂಪಿತವಾಗುತ್ತಿರುವ ಚರಿತ್ರೆಗಳು ಹೆಚ್ಚಿನ ಸಮಗ್ರತೆಯನ್ನು ಪಡೆಯಲು ವಿಫಲವಾಗಿದೆ. ಮೇಲಸ್ತರದ ಸಂಸ್ಕೃತಿಗಳ ಕುರಿತಿರುವ ಬರವಣಿಗೆಗಳ ನಡುವೆ ಕರಗಿಹೋಗಿರುವ ಸ್ಥಳೀಯ ಸಂಸ್ಕೃತಿಯ,

ಚರಿತ್ರೆಯ ಸೂಕ್ಷ್ಮತೆಗಳು ಮತ್ತು ಅಜ್ಞಾತವಾಗಿರುವ ಘಟನೆಗಳನ್ನು, ಇತಿಹಾಸ ಅಧ್ಯಯನದ ಚೌಕಟ್ಟಿನೊಳಗೆ ಸಂಗ್ರಹಿಸುವ ಆ ಮೂಲಕ ವಿವಿಧ ಘಟಕಗಳ ಚರಿತ್ರೆಗಳನ್ನು ಕಟ್ಟಿಕೊಡುವುದರ ಮೂಲಕ ಸಮಗ್ರ ಚರಿತ್ರೆಯ ಜೀವಂತಿಕೆಯನ್ನು ವಿಶ್ವಾಸಾರ್ಹತೆಯನ್ನು ಹೆಚ್ಚಿಸುವ ಜವಾಬ್ದಾರಿ ಚರಿತ್ರೆಕಾರರ ಮೇಲಿದೆ.

ಯಾವುದೇ ಒಂದು ನಿರ್ದಿಷ್ಟ ಪ್ರದೇಶದ ಸಾಂಸ್ಕೃತಿಕ ಅಧ್ಯಯನವು ಅಲ್ಲಿನ ಭೌಗೋಳಿಕ ಪರಿಸರ ಆಯಾ ಕಾಲದಲ್ಲಿ ಬಿಟ್ಟು ಹೋಗಿರುವ ಪ್ರಾಚೀನ ಅವಶೇಷಗಳು ಮತ್ತು ಅಲ್ಲಿ ನೆಲೆಸಿರುವ ಜನರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಕೊಡುಕೊಳ್ಳುವಿಕೆಗಳಿಂದ ಪ್ರಭಾವಿತವಾಗಿರುತ್ತವೆ. ಒಂದು ಪ್ರದೇಶದ ಸಾಂಸ್ಕೃತಿಕ ಮಹತ್ವವನ್ನು ತಿಳಿಯಬೇಕಾದರೆ ಅಲ್ಲಿ ದೊರೆಯುವ ಪುರಾತತ್ವ ಅವಶೇಷಗಳು ಹಾಗೂ ಎಲ್ಲ ಕಾಲಾವಧಿಯಲ್ಲಿದ್ದ ಸಾಮಾಜದಲ್ಲಿನ ಪ್ರಚಲಿತವಿರುವ ಐತಿಹ್ಯಗಳು, ಮೌಖಿಕ ಕಥನಗಳು ಹಾಗೂ ಸಾಹಿತ್ಯಿಕ ಆಕರಗಳು ಚರಿತ್ರೆ ಕಟ್ಟಿಕೊಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಚಿತ್ರದುರ್ಗ ಜಿಲ್ಲೆಯು ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿದ್ದು, ಇದು ಐತಿಹಾಸಿಕ ಮಹತ್ವವನ್ನು ಪಡೆದಿದೆ. ಈ ಜಿಲ್ಲೆಯಲ್ಲಿ ಬರುವ ಚಳ್ಳಕೆರೆ ತಾಲೂಕು ಪರಿಸರವು ಸಹ ಇತಿಹಾಸದಲ್ಲಿ ವಿಶೇಷ ಮಹತ್ವವನ್ನು ಹೊಂದಿದ್ದು, ವಿಭಿನ್ನ ಕಾಲಘಟ್ಟಗಳಲ್ಲಿ ತನ್ನದೇ ಆದ ಪಾತ್ರವನ್ನು ನಿರ್ವಹಿಸಿದೆ. ಆದ್ದರಿಂದ ಈ ತಾಲೂಕು ಪರಿಸರದ ಕುರಿತು ವಿಶೇಷ ಅಧ್ಯಯನ ಕೈಗೊಳ್ಳುವ ಯೋಜನೆ ಹೊಂದಲಾಗಿದೆ. "ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದ ಅಡಿಯಲ್ಲಿ ಸ್ಥಳೀಯವಾಗಿ ಲಭ್ಯವಿರುವ ಇತಿಹಾಸ ಮತ್ತು ಪುರಾತತ್ವ ಆಕರಗಳನ್ನು ವಿಶ್ಲೇಷಿಸಲಾಗಿದೆ. ಚಳ್ಳಕೆರೆಯು ಚಿತ್ರದುರ್ಗದಿಂದ ಪೂರ್ವಕ್ಕೆ ೧೯ ಮೈಲಿ ದೂರದಲ್ಲಿದ್ದು, ತಾಲ್ಲೂಕಿನ ಪೂರ್ವದಲ್ಲಿ ಆಂಧ್ರಪ್ರದೇಶ ರಾಜ್ಯದ ಗಡಿಗಳು ಮತ್ತು ಪಾವಗಡ ತಾಲ್ಲೂಕು (ತುಮಕೂರು ಜಿಲ್ಲೆ) ಪಶ್ಚಿಮಕ್ಕೆ ಜಗಳೂರು ಮತ್ತು ಚಿತ್ರದುರ್ಗ ತಾಲೂಕು, ಉತ್ತರದಲ್ಲಿ ಮೊಳಕಾಲ್ಮೂರು ತಾಲೂಕು ಹಾಗೂ ಬಳ್ಳಾರಿ ಜಿಲ್ಲೆಯ ಪ್ರದೇಶಗಳು ವಿಸ್ತರಿಸಿಕೊಂಡಿವೆ. ಅಲ್ಲದೇ ದಕ್ಷಿಣಕ್ಕೆ ಹಿರಿಯೂರು ತಾಲೂಕು ಹೊಂದಿಕೊಂಡಿದೆ. ಚಳ್ಳಕೆರೆ ತಾಲೂಕು ಆಡಳಿತಾತ್ಮಕವಾಗಿ ಚಿತ್ರದುರ್ಗ ಜಿಲ್ಲೆಯ ಉಪವಿಭಾಗಕ್ಕೆ ಸೇರಿಕೊಂಡಿದೆ.

ಕ್ರಿ.ಶ. ೧೮೮೨ರವರೆಗೆ ಈ ತಾಲೂಕು ಪ್ರದೇಶವನ್ನು "ದೊಡ್ಡೇರಿ ತಾಲ್ಲೂಕು" ಎಂದೇ ಕರೆಯಲಾಗುತ್ತಿತ್ತು. ನಂತರ ದೊಡ್ಡೇರಿಯಿಂದ ಚಳ್ಳಕೆರೆಗೆ ತಾಲ್ಲೂಕು ಪ್ರದೇಶವಾಗಿ ಬದಲಾವಣೆ ಮಾಡಲಾಯಿತು. ಈಗ ಈ ತಾಲೂಕು ಚಳ್ಳಕೆರೆ, ನಾಯಕನಹಟ್ಟಿ, ತಳಕು ಮತ್ತು ಪರುಶರಾಮಪುರ ಎಂಬ ನಾಲ್ಕು ಹೋಬಳಿಗಳನ್ನು ಹೊಂದಿದೆ ಹಾಗೂ ಈ ತಾಲೂಕು ೧೯೫ ಹಳ್ಳಿಗಳನ್ನು ಒಳಗೊಂಡಿದೆ. ಇದರ ಒಟ್ಟು ವಿಸ್ತೀರ್ಣ ೨.೦೫೯.೮೦ ಚ.ಕೀ.ಮೀ. ಭೌಗೋಳಿಕವಾಗಿ ಚದುರಿದಂತೆ ಕಾಣುವ ಕೆಲವು ಕಣಶಿಲೆಯ ಬೆಟ್ಟಗಳು ಈ ಪ್ರದೇಶದಲ್ಲಿದ್ದು, ಉಳಿದ ಭಾಗ ಏರು-ತಗ್ಗಿನ ಮೈದಾನ ಭಾಗವಾಗಿದೆ. ಹೆಚ್ಚು ಭಾಗ ಕಲ್ಲು ಮಿಶ್ರಿತ ಕೆಂಪು ಭೂಮಿಯಿಂದ ಕೂಡಿದೆ. ಚಿತ್ರದುರ್ಗ

ಜಿಲ್ಲೆಯಲ್ಲೇ ಕಡಿಮೆ ಮಳೆ ಪ್ರಮಾಣ ಹೊಂದಿರುವ ಪ್ರದೇಶವು ಚಳ್ಳಕೆರೆ ತಾಲೂಕಿನ ಭೂಭಾಗವಾಗಿದೆ. ದಕ್ಷಿಣ ಭಾಗದಲ್ಲಿ ವೇದಾವತಿ ನದಿಯು ಹರಿಯುತ್ತಿದೆ. ಇಂಥ ನದಿ ಪರಿಸರವನ್ನು ಹೊಂದಿರುವ ಈ ಪ್ರದೇಶವು ಹಲವು ಪ್ರಾಗಿತಿಹಾಸ ನೆಲೆಗಳನ್ನು ಹೊಂದಿದೆ. ಅಲ್ಲದೇ ಐತಿಹಾಸಿಕ ಕಾಲಘಟ್ಟಗಳಲ್ಲಿ ಬೇರೆ ಬೇರೆ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿರುವುದು ನಮಗೆ ಸ್ಥಳೀಯವಾಗಿ ಸಿಕ್ಕಿರುವ ಶಾಸನಾಧಾರಗಳಿಂದ ತಿಳಿದುಬರುತ್ತದೆ.

ಅಧ್ಯಯನದ ಉದ್ದೇಶ

ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶ ಈ ಪರಿಸರದ ಒಟ್ಟಾರೆ ಸಾಂಸ್ಕೃತಿಕ ಸಂಗತಿಗಳನ್ನು ವ್ಯವಸ್ಥಿತವಾಗಿ ಕಟ್ಟಿಕೊಡುವ ಹಾಗೂ ಲಭ್ಯವಿರುವ ಆಧಾರಗಳ ಹಿನ್ನೆಲೆಯಲ್ಲಿ ಮರು ವಿಮರ್ಶಿಸುವುದಾಗಿದೆ. ಈ ವಿಷಯಕ್ಕೆ ಪೂರಕವಾಗಿ ಈ ಪರಿಸರದಲ್ಲಿ ದೊರೆಯುವ ಪುರಾತತ್ವ ಆಕರಗಳನ್ನು ಸಂಗ್ರಹಿಸುವ ಹಾಗೂ ವಿಶ್ಲೇಷಣೆಯ ಮೂಲಕ ಸ್ಥಳೀಯ ಚರಿತ್ರೆ ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ಪ್ರಾಗಿತಿಹಾಸ ಕಾಲದಿಂದಲೂ ಈ ಪ್ರದೇಶವು ಜನವಸತಿಯ ನೆಲೆಯಾಗಿದ್ದು, ಇದಕ್ಕೆ ಪುರಾವೆಯಾಗಿ ಇಲ್ಲಿ ಹಲವು ಪ್ರಾಚ್ಯಾವಶೇಷಗಳು ದೊರೆತಿವೆ. ಈ ಹಿನ್ನೆಲೆಯಲ್ಲಿ ಮತ್ತೆ ಮತ್ತೆ ಹೊಸ ಹೊಸ ಪ್ರಾಗಿತಿಹಾಸದ ನೆಲೆಗಳ ಶೋಧನಾ ಕಾರ್ಯವನ್ನು ಕೈಗೊಳ್ಳಲಾಗಿದೆ. ಚಳ್ಳಕೆರೆ ಪರಿಸರದ ಇತಿಹಾಸ ತಿಳಿಯಲು ಈವರೆಗೆ ದೊರೆತಿರುವ ಶಾಸನಗಳು ನಮಗೆ ಹೆಚ್ಚಿನ ಸಹಾಯಕಾರಿಯಾಗಿವೆ. ಇವುಗಳಲ್ಲದೆ ಅಧ್ಯಯನಕ್ಕೆ ಬೇಕಾದ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಿ ಚರಿತ್ರೆಯನ್ನು ವಸ್ತುನಿಷ್ಠವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಈ ಪ್ರದೇಶದಲ್ಲಿ ಈವರೆಗೆ ಲಭ್ಯವಿರುವ ಪ್ರಾಚ್ಯಾವಶೇಷಗಳ ಅಧ್ಯಯನದ ಜೊತೆಗೆ ಕ್ಷೇತ್ರಕಾರ್ಯ ಕೈಗೊಂಡು, ಸಂದರ್ಶನಗಳ ಮೂಲಕ ಪ್ರಚಲಿತವಾಗಿರುವ ಐತಿಹ್ಯ ಮತ್ತು ಮೌಖಿಕ ಕಥನಗಳನ್ನು ದಾಖಲಿಸಿಕೊಳ್ಳಲಾಗಿದೆ. ಅಲ್ಲದೇ ಸಂಗ್ರಹಿತ ಸಂಪನ್ಮೂಲವನ್ನು ವಿವೇಚಿಸುವ ಮೂಲಕ ಸಮಗ್ರ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಇದರ ಜೊತೆಜೊತೆಗೆ ವಿವಿಧ ಕಾಲಘಟ್ಟಗಳಲ್ಲಿ ಈ ಪ್ರದೇಶದಲ್ಲಾದ ಹಾಗೂ ಅನೇಕ ಅಂಶಗಳ ಪರಿವರ್ತನೆಗೆ ಕಾರಣಭೂತ ಅಂಶಗಳಾಗಿ ಮಹತ್ವದ ಪ್ರಭಾವ ಬೀರಿದ ಧಾರ್ಮಿಕ, ಸಾಮಾಜಿಕ, ಮತ್ತು ಆರ್ಥಿಕ ಸ್ಥಿತಿಗತಿ ಬದಲಾವಣೆ ಮತ್ತು ಬೆಳವಣಿಗೆಗಳನ್ನು ಕುರಿತು ವಿವರವಾಗಿ ಚರ್ಚಿಸಲಾಗಿದೆ. ನಾಶದ ಅಂಚಿನಲ್ಲಿರುವ ಇಲ್ಲಿನ ಪುರಾತತ್ವ ಅವಶೇಷಗಳು ಹಾಗೂ ಪ್ರಚಲಿತವಲ್ಲಿರುವ ಪ್ರಾಚೀನ ಐತಿಹ್ಯ ಮತ್ತು ಮೌಖಿಕ ಕಥನಗಳನ್ನು ಸಾಂಸ್ಕೃತಿಕ ಅಧ್ಯಯನಕ್ಕೆ ಬಳಸಿಕೊಂಡು ಕೆಳಸ್ತರದ ಚರಿತ್ರೆ ಹಾಗೂ ಸ್ಥಳೀಯ ವಾದವನ್ನು ವಿಸ್ತರಿಸುವುದರ ಮೂಲಕ ಈ ಪ್ರದೇಶದ ಅಧ್ಯಯನಗಳ ವಸ್ತುನಿಷ್ಠತೆಯನ್ನು ಮರುರೂಪಿಸಿ ಅಧ್ಯಯನಗಳಿಗೆ ಹೊಸರೂಪ ನೀಡಲಾಗಿದೆ.

ಅಧ್ಯಯನದ ವ್ಯಾಪ್ತಿ:

"ಚಳ್ಳಕೆರೆ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ"ದ ವ್ಯಾಪ್ತಿಯನ್ನು ಭೌಗೋಳಿಕ ವಿಸ್ತಾರ ಮತ್ತು ಕಾಲಾವಧಿಯ ಹಿನ್ನೆಲೆಯಲ್ಲಿ ನಿರ್ದಿಷ್ಟಪಡಿಸಿಕೊಳ್ಳಲಾಗಿದೆ. ಅಲ್ಲದೇ ಭೌಗೋಳಿಕವಾಗಿ

ಚಳ್ಳಕೆರೆ ಪರಿಸರವನ್ನು ನಿಗದಿಮಾಡಿಕೊಂಡಿದ್ದರೂ, ಸಾಂದರ್ಭಿಕವಾಗಿ ಅಕ್ಕಪಕ್ಕದ ಪ್ರದೇಶಗಳನ್ನು ವಿಷಯದ ವ್ಯಾಪ್ತಿಗೆ ಸೇರಿಕೊಳ್ಳಲಾಗಿದೆ. ಹಾಗೆಯೇ ಕಾಲಾವಧಿಯ ದೃಷ್ಟಿಯಿಂದ ಪ್ರಾಗಿತಿಹಾಸ ಕಾಲದಿಂದ ಪಾಳೆಯಗಾರರ ಆಡಳಿತಾವಧಿಯವರೆಗೂ ಅಧ್ಯಯನದ ವ್ಯಾಪ್ತಿಯನ್ನು ಸೀಮಿತಗೊಳಿಸಿಕೊಳ್ಳಲಾಗಿದೆ.

ಅಧ್ಯಯನದ ಮಹತ್ವ:

ಈವರೆಗೆ ಈ ಪರಿಸರದ ಕುರಿತು ಹಲವಾರು ಬಿಡಿ ಲೇಖನಗಳು, ಸ್ಮರಣ ಸಂಚಿಕೆಗಳು, ಪ್ರಕಟವಾಗಿದ್ದರೂ ಸಮಗ್ರವಾದ ಐತಿಹಾಸಿಕ ಚಿತ್ರಣ ಮೂಡಿಬಂದಿಲ್ಲ. ಆದ್ದರಿಂದ ಈಗಾಗಲೇ ಪ್ರಕಟಗೊಂಡಿರುವ ಅಧ್ಯಯನಗಳ ಹಿನ್ನೆಲೆಯಲ್ಲಿ ಮುಂದೆ ಕೈಗೊಳ್ಳಬೇಕಾದ ಅಂಶಗಳನ್ನು ಮನಗಂಡು ಪ್ರಸ್ತುತ ಪ್ರಬಂಧವನ್ನು ರೂಪಿಸಿ ವಿಸ್ತರಿಸಲಾಗಿದೆ. ಈ ಪರಿಸರವು ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು, ಲಭ್ಯವಿರುವ ಆಕರಗಳನ್ನು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸುವ, ಪ್ರಸ್ತುತ ಅಧ್ಯಯನವನ್ನು ಮರುರೂಪಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೇ ಇದೇ ಪರಿಸರದಲ್ಲಿ ಹೇರಳವಾಗಿ ಲಭ್ಯವಿರುವ ಮೌಖಿಕ ಕಥನಗಳು ಹಾಗೂ ಐತಿಹ್ಯಗಳನ್ನು ಬಳಸಿಕೊಂಡು ಪ್ರಸ್ತುತ ಚರಿತ್ರೆಯ ಅಧ್ಯಯನದ ಮಹತ್ವವನ್ನು ಹೆಚ್ಚಿಸಲಾಗಿದೆ. ಅಧ್ಯಯನದ ಮೂಲಕ ಕಂಡುಕೊಳ್ಳುವ ಫಲಿತಾಂಶಗಳನ್ನು ಕ್ರೋಢೀಕರಿಸಿ ವಿಷಯದ ವ್ಯಾಪ್ತಿಯನ್ನು ಹಿಗ್ಗಿಸಲಾಗಿದೆ. ಚಳ್ಳಕೆರೆ ಪರಿಸರದ ಎಲ್ಲ ಗ್ರಾಮಗಳಲ್ಲಿರುವ ಆಕರಗಳನ್ನು ಪರಿಚಯಿಸುವ ಹಾಗೂ ವಿಶ್ಲೇಷಿಸುವ ಮಹತ್ವದ ಕಾರ್ಯವನ್ನು ಪ್ರಬಂಧದ ರಚನೆಯ ಉದ್ದೇಶವಾಗಿ ಇಟ್ಟುಕೊಂಡು, ಅದನ್ನು ಸಾಧಿಸಲಾಗಿದೆ.

ಅಧ್ಯಯನದ ವಿಧಾನ:

"ಚಳ್ಳಕೆರೆ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ" ಮುಖ್ಯವಾಗಿ ಕ್ಷೇತ್ರಾಧಾರಿತವಾಗಿದೆ. ಅಧ್ಯಯನದ ವ್ಯಾಪ್ತಿಗೆ ಒಳಪಡುವ ಪ್ರದೇಶಗಳಿಗೆ ನೇರವಾಗಿ ಭೇಟಿ ನೀಡಿ ದೊರೆಯುವ ಸಂಪನ್ಮೂಲ ಅವಶೇಷಗಳನ್ನು ಪರಿಶೀಲಿಸಿ, ದಾಖಲಿಸಿಕೊಳ್ಳಲಾಗಿದೆ. ಮೌಖಿಕ ಕಥನಗಳನ್ನು ಹಾಗೂ ಐತಿಹ್ಯಗಳನ್ನು ಹೊಂದಿದ ಸಂಪನ್ಮೂಲ ವ್ಯಕ್ತಿಗಳೊಂದಿಗೆ ಚರ್ಚಿಸಿ ವಿಷಯ ಸಂಗ್ರಹಿಸಲಾಗಿದೆ. ಅಧ್ಯಯನಕ್ಕೆ ಪೂರಕವಾಗಿ ದೊರೆಯುವ ಪ್ರಾಥಮಿಕ ಮತ್ತು ಅನುಷಂಗಿಕ ಆಕರಗಳನ್ನು ಸಂಗ್ರಹಿಸಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಪ್ರಚಲಿತದಲ್ಲಿರುವ (ಚಾಲ್ತಿಯಲ್ಲಿರುವ) ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನದ ವಿಧಾನಗಳನ್ನು ಅಳವಡಿಸಿಕೊಂಡು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಆಕರಗಳನ್ನು ಸಂಗ್ರಹಿಸಿ ವಿಷಯಾನುಸಾರ ಮತ್ತು ಅವಧಿಯಾನುಸಾರ ವಿಶ್ಲೇಷಿಸಿ, ಸಂಯೋಜಿಸುವ ಮೂಲಕ ಫಲಿತಾಂಶಗಳನ್ನು ಕಂಡುಕೊಳ್ಳಲಾಗಿದೆ. ಬರುವ ಫಲಿತಾಧಾರಗಳಿಂದ ಈ ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ. ವೈಜ್ಞಾನಿಕವಾಗಿ ಮತ್ತು ವಸ್ತುನಿಷ್ಠವಾದ ವಿಧಾನಗಳನ್ನು ಕಿರು ಪ್ರಬಂಧದ ರಚನೆಯಲ್ಲಿ ಪ್ರಾಮಾಣಿಕವಾಗಿ ಬಳಸಿಕೊಳ್ಳಲು ಪ್ರಯತ್ನಿಸಲಾಗಿದೆ.

ನಡೆದಿರುವ ಅಧ್ಯಯನಗಳ ಸಮೀಕ್ಷೆ

ಚಳ್ಳಕೆರೆ ತಾಲ್ಲೂಕು ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೂ ವಿದ್ವಾಂಸರು ಬಿಡಿ ಲೇಖನಗಳನ್ನು ಸಂಗ್ರಹಿಸಿ, ಸಂಪಾದಿತ ಕೃತಿಗಳಲ್ಲಿ ಪ್ರಕಟಿಸಿದ್ದಾರೆ. ಕೆಲವು ಸ್ಮರಣ ಸಂಚಿಕೆಗಳಲ್ಲಿ ಸಂಶೋಧನಾ ಲೇಖನಗಳು ಪ್ರಕಟಗೊಂಡಿವೆ. ಆದರೆ ಐತಿಹಾಸಿಕ ದೃಷ್ಟಿಕೋನದಿಂದ ಬಹುಮುಖಿ ಅಧ್ಯಯನಗಳು ನಡೆದಿರುವುದು ಕಡಿಮೆ. ಅಲ್ಲದೇ ಪ್ರಮುಖ ಸಂಗತಿಗಳನ್ನು ಹಾಗೂ ಸ್ಥಳಗಳನ್ನು ಪ್ರಧಾನವಾಗಿ ಗಮನಿಸಿ ಈ ಅಧ್ಯಯನಗಳು ರಚನೆಗೊಂಡಿವೆ. ಚಳ್ಳಕೆರೆ ತಾಲ್ಲೂಕಿನ ಚರಿತ್ರೆಯ ಕುರಿತ ಪ್ರಕಟಣೆಗಳಲ್ಲಿ ೧೯೦೩ರಲ್ಲಿ ಪ್ರಕಟವಾದ ಬಿ.ಎಲ್. ರೈಸ್ ಸಂಪಾದಿತ 'ಎಫಿಗ್ರಾಫಿಯ ಕರ್ನಾಟಕ' ಸಂಪುಟ-೧೧, ೧೯೬೭ರಲ್ಲಿ ಪ್ರಕಟಗೊಂಡ ಬಿ.ಎನ್.ಶ್ರೀಸತ್ಯನ್‌ರವರ ರಚಿಸಿದ 'ಚಿತ್ರದುರ್ಗ ಜಿಲ್ಲಾ ಗೆಜೆಟಿಯರ್', ಲಕ್ಷ್ಮಣ ತೆಲಗಾವಿ ಮತ್ತು ಎಂ.ವಿ. ಶ್ರೀನಿವಾಸರವರ ಸಂಪಾದಿಸಿದ 'ಹುಲ್ಲೂರು ಶ್ರೀನಿವಾಸ ಜೋಯಿಸರ ಸಂಶೋಧನಾ ಲೇಖನಗಳು', 'ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು' ಮತ್ತು 'ಚಂದ್ರವಳ್ಳಿ' ಎಂಬ ಗ್ರಂಥ ಮತ್ತು ಟಿ.ಗಿರಿಜಾರವರು ಪ್ರಕಟಿಸಿರುವ 'ಚಿತ್ರದುರ್ಗ ಜಿಲ್ಲಾ ದರ್ಶನಿ' ಕೃತಿಗಳು ಈ ತಾಲ್ಲೂಕಿನ ಕುರಿತು ವಿಷಯ ವಿವರಗಳನ್ನು ತಿಳಿಸುವ ಬಹುಮುಖ್ಯ ಪ್ರಯತ್ನ ಮಾಡಿವೆ.

ನಂತರ ದಿ.ಸೀತಾರಾಮಪ್ಪನವರ "ಚಳ್ಳಕೆರೆ ವಿಕಾಸ ಸಮೀಕ್ಷೆ", ಮೀರಾಸಾಬಿಹಳ್ಳಿ ಶಿವಣ್ಣನವರ ಅಪ್ರಕಟಿತ "ಚಳ್ಳಕೆರೆ ತಾಲ್ಲೂಕು ದರ್ಶನ" ಕಿರುಪುಸ್ತಕಗಳು ತಾಲ್ಲೂಕಿನ ಬಗೆಗೆ ಸ್ಥೂಲವಾದ ವಿವರ ನೀಡುವಲ್ಲಿ ಸಫಲವಾಗಿವೆ. ಬಿ.ಸುರೇಶ್‌ರವರ "ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪುರಾತತ್ವ" ಎಂಬ ಅಪ್ರಕಟಿತ ಮಹಾಪ್ರಬಂಧ, ಎಸ್. ತಿಪ್ಪೇಸ್ವಾಮಿಯವರ 'ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ' ಅಪ್ರಕಟಿತ ಮಹಾಪ್ರಬಂಧ, ಕೆ.ಪಿ. ನಾಗೇಂದ್ರ ಸ್ವಾಮಿಯವರ 'ಚಿತ್ರದುರ್ಗ ಜಿಲ್ಲೆಯಲ್ಲಿ ಅಮೃತ ಮಹಲ್ ತಳಿ ಸಂವರ್ಧನೆ : ಚಾರಿತ್ರಿಕ ಅಧ್ಯಯನ' ಕಿರುಪ್ರಬಂಧ, ಬಿ.ತಿಪ್ಪಣ್ಣ ಮರಿಕುಂಟೆಯವರು ಸಂಪಾದಿಸಿರುವ 'ಮೇಲುದುರ್ಗ', ಮದಕರಿ ಬಳಗದ ವಾರ್ಷಿಕ ಸಂಚಿಕೆಗಳಾದ 'ಚಿನ್ಮೂಲಾದ್ರಿ' ಕೃತಿಗಳು, ಎ.ಎಸ್.ಪ್ರಭಾಕರರವರ 'ಮ್ಯಾಸಬೇಡರ ಕಥನಗಳು' ಮತ್ತು ವಿರೂಪಾಕ್ಷಿ ಪೂಜಾರಹಳ್ಳಿಯವರ ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು ಮುಂತಾದ ಕೃತಿಗಳು ತಕ್ಕಮಟ್ಟಿಗೆ ಚರಿತ್ರೆಯನ್ನು ದಾಖಲಿಸುವಂತಹ ಕೆಲಸವನ್ನು ಮಾಡಿವೆ. ಮೇಲೆ ಉಲ್ಲೇಖಿಸಿದ ಈ ಗ್ರಂಥಗಳು ಬಹಳ ಮುಖ್ಯವಾಗಿದ್ದರೂ ಅವುಗಳ ವ್ಯಾಪ್ತಿಯ ಹಾಗೂ ವಿಸ್ತಾರದ ಹಿನ್ನೆಲೆಯಲ್ಲಿ ಅವು ಇಡೀ ಜಿಲ್ಲೆಯ ಮಹತ್ವವನ್ನು ವಿಶೇಷವಾಗಿ ಇಟ್ಟುಕೊಂಡು ರಚನೆಗೊಂಡಿವೆ. ಆದರೆ ಪ್ರಸ್ತುತ ಅಧ್ಯಯನವು ಕೇವಲ ಚಳ್ಳಕೆರೆ ಪರಿಸರವನ್ನು ಅಮೂಲಾಗ್ರವಾಗಿ ಇಟ್ಟುಕೊಂಡು ಅಲ್ಲಿರುವ ವಿಷಯವನ್ನು ಸಮಗ್ರವಾಗಿ ಹಾಗೂ ಸೂಕ್ಷ್ಮವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹೀಗಾಗಿ ಈ ಪರಿಸರದಲ್ಲಿ ಸಿಗುವ ಎಲ್ಲ ಬಗೆಯ ಆಕರಗಳನ್ನು ವಿಶ್ಲೇಷಿಸುವ ಹಾಗೂ ಎಲ್ಲ ಸ್ಥಳಗಳನ್ನು ಸಂದರ್ಶಿಸುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ಸಮಗ್ರ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಅಧ್ಯಯನ ನಡೆಯದಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ಅಂತಹ ಒಂದು ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ಸ್ವರೂಪ

'ಚಳ್ಳಕೆರೆ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ' ಎಂಬ ಪ್ರಸ್ತುತ ಕಿರುಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಪ್ರಮುಖ ಅಧ್ಯಾಯಗಳಲ್ಲಿ ವಿಂಗಡಿಸಿಕೊಳ್ಳಲಾಗಿದೆ. ಅಲ್ಲದೇ ಪ್ರಮುಖ ಅಧ್ಯಾಯಗಳನ್ನು ಉಪ ಅಧ್ಯಾಯಗಳಲ್ಲಿಯೂ ಸಹ ವಿಂಗಡಿಸಿಕೊಂಡಿದೆ. ಈ ಆರು ಅಧ್ಯಾಯಗಳು ಒಳಗೊಂಡಿರುವ ವಿಷಯ ಮತ್ತು ಅದರ ತಾತ್ವಿಕ ಸ್ವರೂಪ ಕೆಳಗಿನಂತಿದೆ.

ಅಧ್ಯಾಯ : ಒಂದು – ಪ್ರಸ್ತಾವನೆ

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಮಹತ್ವವನ್ನು ಕುರಿತು ವಿವೇಚಿಸಲಾಗಿದೆ.

ಅಧ್ಯಾಯ : ಎರಡು – ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಹಿನ್ನೆಲೆ

ಎರಡನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನ ಪ್ರದೇಶದ ಭೌಗೋಳಿಕ ಪರಿಸರ ಭೂ ರಚನೆ, ಬೆಟ್ಟಗುಡ್ಡಗಳು, ಜಲಸಂಪತ್ತು, ವಾಯುಗುಣ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗಿದೆ.

ಚಳ್ಳಕೆರೆ ತಾಲ್ಲೂಕು ಕೇಂದ್ರವಾಗಿದ್ದು ಇಲ್ಲಿ ಭೂಮೇಲ್ಮೈ ಸ್ವರೂಪವು ಚದುರಿದಂತೆ ಕೆಲವು ಕಣಶಿಲೆಯ ಬೆಟ್ಟಗುಡ್ಡಗಳನ್ನೊಳಗೊಂಡಿದೆ. ಉಳಿದ ಭಾಗ ಏರು–ತಗ್ಗಿನ ಮೈದಾನ ಭಾಗವಾಗಿದೆ. ಅರಣ್ಯ ಪ್ರದೇಶದಲ್ಲಿ ಕುರುಚಲು ಗಿಡಗಳು ಹೆಚ್ಚಾಗಿ ಕಂಡುಬರುತ್ತಿದ್ದು, ಮಳೆಯ ಮೋಡಗಳನ್ನು ತಡೆಹಿಡಿಯುವಂತಹ ಎತ್ತರವಾದ ಬೆಟ್ಟ ಗುಡ್ಡಗಳು ಕಂಡುಬರುತ್ತಿಲ್ಲವಾದ್ದರಿಂದ ಕರ್ನಾಟಕದಲ್ಲಿಯೇ ಕಡಿಮೆ ಮಳೆ ಬೀಳುವ ಭೂಪ್ರದೇಶವೆಂದು ದಾಖಲಾಗಿದೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ವೇದಾವತಿ ನದಿಯು ಹರಿಯುತ್ತಿದ್ದು, ಕೆಲವು ಚಿಕ್ಕ ಹಳ್ಳಗಳೂ ನೀರಿನ ಮೂಲಗಳಾಗಿವೆ. ವೇದಾವತಿ ನದಿ ತೀರದ ಭಾಗಗಳಲ್ಲಿ ಹಲವಾರು ಪ್ರಾಗಿತಿಹಾಸದ ನೆಲೆಗಳು ದೊರೆತಿವೆ. ಐತಿಹಾಸಿಕ ಹಿನ್ನೆಲೆಯಲ್ಲಿ ಪ್ರಾಗಿತಿಹಾಸಕ್ಕೆ ಸಂಬಂಧಿಸಿದ ನೆಲೆಗಳ ವಿವರಗಳನ್ನು ಚರ್ಚಿಸಲಾಗಿದೆ.

ಈ ಪ್ರದೇಶವು ಚಾರಿತ್ರಿಕ ಅವಧಿಯಲ್ಲಿ ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಎಲ್ಲ ಅರಸರ ಆಳ್ವಿಕೆಗೆ ಒಳಪಟ್ಟಿರುವುದು. ಅವರಲ್ಲಿ ಪ್ರಮುಖವಾಗಿ ಮೌರ್ಯರು, ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಸೇವಣರು, ನೊಳಂಬರು, ಹೊಯ್ಸಳರು, ವಿಜಯನಗರದ ಅರಸರು, ಹರತಿ ಮತ್ತು ಹಟ್ಟಿ ಪಾಳೆಯಗಾರರು ಈ ಪ್ರದೇಶದಲ್ಲಿ ಆಡಳಿತ ನಿರ್ವಹಿಸಿದ್ದು, ಅವರುಗಳ ರಾಜಕೀಯ ಚರಿತ್ರೆ ರೂಪಿಸಲು ಸ್ಥಳೀಯವಾಗಿ ಸಿಗುವ ಶಾಸನಗಳನ್ನು ಮೂಲ ಆಕರಗಳನ್ನಾಗಿ ಬಳಸಿಕೊಂಡು ರಾಜಕೀಯ ಚರಿತ್ರೆ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ : ಮೂರು – ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವ್ಯವಸ್ಥೆ.

ಮೂರನೆಯ ಅಧ್ಯಾಯದಲ್ಲಿ ಶಾಸನಾಧಾರಗಳಿಂದ ಅಂದಿನ ಸಮಾಜದ ವರ್ಗವ್ಯವಸ್ಥೆ, ಜಾತಿಪದ್ಧತಿ, ಆಡಳಿತ ಪದ್ಧತಿ, ಶೈಕ್ಷಣಿಕ ಸ್ಥಿತಿಗತಿಗಳ ಕುರಿತು ಚರ್ಚಿಸಲಾಗಿದೆ. ಅಂದಿನ ಪ್ರಮುಖ

ಧರ್ಮಗಳು, ಅವುಗಳ ನಡುವಿನ ಸಂಬಂಧ, ಧರ್ಮವು ಸಮಾಜದಲ್ಲಿ ನಿರ್ವಹಿಸುತ್ತಿದ್ದ ಪಾತ್ರ, ಧಾರ್ಮಿಕ ಸಂಸ್ಥೆಗಳು, ಅವುಗಳ ದತ್ತಿ-ದಾನ ಮೊದಲಾದ ಅಂಶಗಳ ಕುರಿತು ಸ್ಥೂಲವಾಗಿ ಚರ್ಚಿಸಲಾಗಿದೆ.

ಆರ್ಥಿಕ ವ್ಯವಸ್ಥೆಯಲ್ಲಿ ಪ್ರಾಚೀನ ಹಾಗೂ ಮಧ್ಯ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಬೆಳೆಯುತ್ತಿದ್ದ ಪ್ರಮುಖ ಬೆಳೆಗಳು, ನೀರಾವರಿ ವ್ಯವಸ್ಥೆ, ವ್ಯಾಪಾರ, ವಾಣಿಜ್ಯ, ಅಳತೆ ತೂಕದ ಮಾಪನಗಳು ತೆರಿಗೆ ವ್ಯವಸ್ಥೆ ಮತ್ತು ಜನಸಾಮಾನ್ಯರ ಆರ್ಥಿಕ ಸ್ಥಿತಿಗತಿಯ ಪ್ರಮುಖ ಅಂಶಗಳ ಕುರಿತು ಶಾಸನಾಧಾರಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ನೀರಾವರಿ ಮೂಲವಾದ ಕೆರೆ-ಕಟ್ಟೆಗಳ ಬಗ್ಗೆ ಪ್ರಮುಖ ಕೆರೆಗಳು ಮತ್ತು ಅವುಗಳು ನಿರ್ವಹಿಸಿದ ಪಾತ್ರದ ಬಗೆಗೂ ಚರ್ಚಿಸಲಾಗಿದೆ.

ಅಧ್ಯಾಯ : ನಾಲ್ಕು – ಪುರಾತತ್ವ ಆಕರಗಳು

ನಾಲ್ಕನೆಯ ಅಧ್ಯಾಯದಲ್ಲಿ ಈ ಪ್ರದೇಶದಲ್ಲಿ ಕಂಡುಬರುವ ದೇವಾಲಯ ವಾಸ್ತುಶಿಲ್ಪ, ಮೂರ್ತಿಶಿಲ್ಪದ ಕುರಿತು ಚರ್ಚಿಸಲಾಗಿದೆ. ವಿವಿಧ ರಾಜಮನೆತನಗಳ ಆಳ್ವಿಕೆಯ ಅವಧಿಯಲ್ಲಿ ನಿರ್ಮಿಸಿದ ದೇವಾಲಯಗಳ ವಿವರವಾದ ಮಾಹಿತಿ ಮತ್ತು ಅವರು ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಕ್ಷೇತ್ರಕ್ಕೆ ಸ್ಥಳೀಯ ಅಧಿಕಾರ ವರ್ಗ ನೀಡಿದ ಕೊಡುಗೆಗಳನ್ನು ಕುರಿತು ವಿವರಿಸಲಾಗಿದೆ. ಅಲ್ಲದೇ ವಿಷಯ ಸಾದರಪಡಿಸುವುದಕ್ಕೆ ಮುಖ್ಯವಾಗಿ ಪುರಾತತ್ವ ಸ್ಮಾರಕ, ಶಾಸನ ಹಾಗೂ ಮೂರ್ತಿಶಿಲ್ಪಾವಶೇಷಗಳನ್ನು ಬಳಸಿಕೊಂಡು ಅಧ್ಯಯನವನ್ನು ವಿಸ್ತರಿಸಿಕೊಳ್ಳಲಾಗಿದೆ.

ಕೋಟೆಗಳು ಎಂದರೆ ವ್ಯಕ್ತಿಗಳಿಗೆ, ವಸ್ತುಗಳಿಗೆ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸಿಕೊಡುವ ಪ್ರಮುಖ ಸಾಧನಗಳು. ಇದನ್ನು ರಕ್ಷಣಾ ವಾಸ್ತುಶಿಲ್ಪವೆಂದು ಕರೆಯುತ್ತಾರೆ. ಈ ವಿಷಯದ ಕುರಿತಂತೆ ಅಧ್ಯಯನ ಕೈಗೊಳ್ಳಲಾಗಿದೆ. ಅಧ್ಯಯನದ ವ್ಯಾಪ್ತಿಯಲ್ಲಿ ಬರುವ ಕೋಟೆಗಳ ಕುರಿತು ವಿವೇಚಿಸಲಾಗಿದೆ.

ಅಧ್ಯಾಯ : ಐದು – ಐತಿಹ್ಯ ಹಾಗೂ ಮೌಖಿಕ ಕಥನಗಳು:

ಒಂದು ದೇಶಕ್ಕೆ ಒಂದೇ ಸಂಸ್ಕೃತಿ ಎಂಬುದಿರುವುದಿಲ್ಲ. ಹಾಗೇ ನಮ್ಮ ಕರ್ನಾಟಕವು ಸಹ ಬಹುಮುಖಿ ಸಂಸ್ಕೃತಿಯನ್ನು ಪ್ರತಿನಿಧಿಸುವ ಒಂದು ಸಂಕೀರ್ಣ ಭೂಪ್ರದೇಶವಾಗಿದೆ. ಪ್ರತಿಯೊಂದು ನೆಲದ ವಿವಿಧ ಭಾಷೆಗಳು ಅಲ್ಲಿನ ಜನ, ಅವರ ಆಚಾರ-ವಿಚಾರಗಳು, ರೂಢಿಸಿಕೊಂಡ ಮೌಲ್ಯ, ಅವರ ಲೋಕದೃಷ್ಟಿ ಇತ್ಯಾದಿಗಳನ್ನು ಅವಲೋಕಿಸಿದಾಗ ನೂರಾರು ಸಂಸ್ಕೃತಿಗಳು ಕಣ್ಮುಂದೆ ಬರುತ್ತವೆ.

ಮೌಖಿಕ ಕಥನಗಳೇ ನಿಜವಾದ ಅರ್ಥದಲ್ಲಿ ನಮ್ಮ ಸಂಸ್ಕೃತಿಯ ಒಳಪದರನ್ನು ಹಾಗೂ ನಿರ್ಲಕ್ಷಿತರ ಇತಿಹಾಸವನ್ನು ನಿರೂಪಿಸಬಲ್ಲಂಥ ಶಕ್ತಿ ಪಡೆದಂಥವು. ರಾಜಮಹಾರಾಜರ ಆಳ್ವಿಕೆಯ ವಿಧಾನಗಳೇ ನಮ್ಮ ಭವ್ಯ ಇತಿಹಾಸ ಎಂದು ಸಾರುತ್ತ ಬಂದಿರುವ ನಮ್ಮ ಬಹುಪಾಲು ಇತಿಹಾಸಕಾರರ ಕಣ್ಣು ತೆರೆಸಿ, ಜನಸಾಮಾನ್ಯರ ಇತಿಹಾಸದ ರಚನೆಗಾಗಿ ಒತ್ತಾಯಿಸಬಲ್ಲ, ಆ ಬಗೆಗಿನ ಅರಿವು ಮೂಡಿಸಬಲ್ಲ ಶಕ್ತಿ ಈ ಕಥಾನಕಗಳಿಗಿದೆ.

ಈ ಪರಿಸರದಲ್ಲಿ ಬುಡಕಟ್ಟು ಪಂಗಡಗಳು ನೆಲೆಸಿದ್ದು, ಇವರು ತಮ್ಮ ಪೂರ್ವಜರ ಮೂಲದ ಕುರಿತು, ಸಂಪ್ರದಾಯದ ಕುರಿತು ಹಲವಾರು ಮೌಖಿಕ ಕಥನಗಳು ಹಾಗೂ ಐತಿಹ್ಯಗಳನ್ನು ಕಟ್ಟಿಕೊಂಡು ಬಂದಿದ್ದಾರೆ. ಇವುಗಳನ್ನು ಸಂಗ್ರಹಿಸಿ, ವಿವೇಚಿಸಿ, ಚರ್ಚಿಸಿ ಸಂದರ್ಭಕ್ಕನುಗುಣವಾಗಿ ಅವುಗಳು ಒಳಗೊಂಡಿರುವ ಐತಿಹಾಸಿಕ ಸತ್ಯವನ್ನು ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಅಧ್ಯಾಯ : ಆರು – ಸಮಾರೋಪ

ಕೊನೆಯ ಹಾಗೂ ಆರನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಒಟ್ಟಾರೆ ಅಧ್ಯಯನದ ಸಂಕ್ಷಿಪ್ತ ರೂಪ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಪ್ರಮುಖ ಸಂಗತಿಗಳ ಸಮೀಕ್ಷೆಯನ್ನು ಹಾಗೂ ಫಲಿತಗಳನ್ನಲ್ಲದೆ, ನಿರ್ಧಾರಗಳನ್ನು ಪ್ರಕಟಿಸುವ ಪ್ರಯತ್ನ ಮಾಡಲಾಗಿದೆ.

ಅಧ್ಯಾಯ : ಎರಡು

ಭೌಗೋಳಿಕ ಪರಿಸರ ಹಾಗೂ ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

೨.೨. ಐತಿಹಾಸಿಕ ಹಿನ್ನೆಲೆ

- ಪ್ರಾಗಿತಿಹಾಸ
- ಚಾರಿತ್ರಿಕ : ಮೌರ್ಯರಿಂದ ಪಾಳೆಯಗಾರರ ಕಾಲಾವಧಿಯವರೆಗೆ (ಶಾಸನಾಧಾರಗಳ ಹಿನ್ನೆಲೆಯಲ್ಲಿ)

ಅಧ್ಯಾಯ : ಎರಡು

ಭೌಗೋಳಿಕ ಪರಿಸರ ಮತ್ತು ಐತಿಹಾಸಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಸರ

ಇತಿಹಾಸ ಮತ್ತು ಭೂಗೋಳ ಶಾಸ್ತ್ರಗಳು ಪರಸ್ಪರ ನಿಕಟವಾದ ಸಂಬಂಧವನ್ನು ಹೊಂದಿವೆ. ಒಂದು ಪ್ರದೇಶದ ಕುರಿತು ಅಧ್ಯಯನ ಕೈಗೊಳ್ಳುವ ಪೂರ್ವದಲ್ಲಿ ಆ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಏಕೆಂದರೆ ಆಯಾ ಪ್ರದೇಶದ ಜನಜೀವನ ಆ ಪರಿಸರದ ಸ್ವರೂಪ ಸ್ವಭಾವಗಳನ್ನು ಹಾಗೂ ಭೌಗೋಳಿಕ ವೈಶಿಷ್ಟ್ಯತೆಗಳನ್ನು ಅರಿಯದೇ ಯಾವುದೇ ಅಧ್ಯಯನ ಅಪೂರ್ಣ. ಪ್ರಾಚೀನ ನಾಗರೀಕತೆಗಳ ಉಗಮ ಮತ್ತು ವಿಕಾಸ ನದಿದಂಡೆಗಳ ಮೇಲೆ ಆಗಿರುವುದನ್ನು ಗಮನಿಸಿದಾಗ ಭೌಗೋಳಿಕ ಅಂಶಗಳ ಪ್ರಾಮುಖ್ಯತೆಯನ್ನು ತಿಳಿಯಬಹುದು. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಗಳ ವಿಕಾಸದಲ್ಲಿ ಅಲ್ಲಿನ ಭೌಗೋಳಿಕ ಪರಿಸರ ಸಂಪತ್ತು ಮತ್ತು ವೈಶಿಷ್ಟ್ಯತೆಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಆದ್ದರಿಂದ ಅಧ್ಯಯನ ಕೈಗೊಳ್ಳುವ ಸಂದರ್ಭದಲ್ಲಿ ಭೌಗೋಳಿಕ ವೈಶಿಷ್ಟ್ಯತೆಯನ್ನು ಮರೆತು ಸತ್ಯವಾದ ಇತಿಹಾಸ ರಚಿಸಲು ಸಾಧ್ಯವಿಲ್ಲವೆಂದು ಹೇಳಬೇಕಾಗುತ್ತದೆ.

ಒಂದು ಪ್ರದೇಶದಲ್ಲಿ ಮಾನವನು ನೆಲೆನಿಲ್ಲಲು ಆ ಪ್ರದೇಶದಲ್ಲಿ ಹುಟ್ಟಿ ಹರಿಯುವ ನದಿಗಳು, ನದಿಬಯಲು, ತೀರಪ್ರದೇಶ, ಪರ್ವತಶ್ರೇಣಿ, ಬೆಟ್ಟ-ಗುಡ್ಡ, ಮಣ್ಣಿನ ರಚನೆ, ಹವಾಗುಣ, ಸಂಪತ್ತು ಮುಂತಾದ ಭೌಗೋಳಿಕ ಅಂಶಗಳು ಕಾರಣವಾಗಿವೆ. ಅಲ್ಲದೇ ಈ ಪರಿಸರವು ಅಲ್ಲಿನ ಜನಜೀವನ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಅಭಿವೃದ್ಧಿಗೊಳಿಸಲು ಸಹಾಯಕಾರಿಯಾಗಿ ನಿಲ್ಲುತ್ತವೆ. ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿ ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಚಳ್ಳಕೆರೆ ಪರಿಸರದ ಭೌಗೋಳಿಕ ಲಕ್ಷಣಗಳು ಯಾವ ರೀತಿ ಪ್ರಭಾವ ಬೀರಿವೆ ಎಂದು ತಿಳಿದುಕೊಳ್ಳುವುದು ಅಗತ್ಯವಾಗಿದೆ.

ಕರ್ನಾಟಕ ರಾಜ್ಯದ ಮುಧ್ಯಭಾಗದಲ್ಲಿರುವ ಚಿತ್ರದುರ್ಗ ಜಿಲ್ಲೆ ಇತಿಹಾಸದಲ್ಲಿ ವೈವಿಧ್ಯಮಯವಾದ ವೈಶಿಷ್ಟ್ಯತೆಗಳನ್ನು ಹೊಂದಿರುವ ಪ್ರದೇಶಗಳಲ್ಲೊಂದು. ಕಿರುಬೆಟ್ಟಗಳ ಶ್ರೇಣಿಗಳು ಅಲ್ಲಲ್ಲಿ ವ್ಯಾಪಿಸಿರುವುದು ಜಿಲ್ಲೆಯ ವಿಶಿಷ್ಟ ಗುಣವಾಗಿದೆ. ಈ ಜಿಲ್ಲೆಯ ವ್ಯಾಪ್ತಿಯಲ್ಲಿ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳು ಸಮಾವೇಶಗೊಂಡಿವೆ.

ವ್ಯಾಪ್ತಿಯಲ್ಲಿ ಒಂದನೇ ದೊಡ್ಡ ತಾಲ್ಲೂಕಾಗಿರುವ ಚಳ್ಳಕೆರೆಯು ವೈವಿಧ್ಯತೆಯಿಂದ ಕೂಡಿರುವುದು. ಈ ತಾಲ್ಲೂಕು ಪ್ರದೇಶ ೧೯೫ (ಬೇಚಾರಕ್ ಗ್ರಾಮಗಳು ಸೇರಿ) ಗ್ರಾಮಗಳನ್ನು ಒಳಗೊಂಡಿದ್ದು ಇವುಗಳನ್ನು ನಾಲ್ಕು ಹೋಬಳಿಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಕಸಬಾ, ನಾಯಕನಹಟ್ಟಿ, ತಳಕು ಮತ್ತು ಪರಶುರಾಂಪುರ. ಜಿಲ್ಲಾ ಕೇಂದ್ರದಿಂದ ಈಶಾನ್ಯಕ್ಕೆ ೧೮ ಮೈಲಿ[೧] ದೂರವಿರುವ ಈ ಪ್ರದೇಶದ ವ್ಯಾಪ್ತಿಯು ೧೪.೦೫°–೧೪.೩೭° ಉತ್ತರ ಅಕ್ಷಾಂಶದವರೆಗೂ, ೭೬.೨೭°–೭೭.೦° ರೇಖಾಂಶದವರೆಗೂ[೨] ಹಬ್ಬಿದ್ದು, ೨೦೬೩.೯೩ ಚ.ಕಿ.ಮೀ.[೩] ವಿಸ್ತಾರವುಳ್ಳದ್ದಾಗಿದೆ. ಇಲ್ಲಿಯ ಜನಸಂಖ್ಯೆ ೩,೩೨,೭೧೮ ಇದ್ದು ಇದರಲ್ಲಿ ಪುರುಷರು ೧,೭೦,೩೩೭ ಹಾಗೂ ಸ್ತ್ರೀಯರು ೧,೬೨,೩೮೧ (೨೦೦೧ರ ಜನಗಣತೆಯಂತೆ)[೪] ಎಂದು ದಾಖಲಾಗಿದೆ. ತಾಲ್ಲೂಕಿನ ಸಾಕ್ಷರತೆಯ ಪ್ರಮಾಣ ಶೇ.೫೭.೬೮%ಆಗಿದ್ದು ಇದರಲ್ಲಿ ಪುರುಷರು ಶೇ. ೬೭.೭೨% ಹಾಗೂ ಮಹಿಳೆಯರು ಶೇ.೪೭.೧೭%ರಷ್ಟಿದೆ.[೫]

ಈ ಪರಿಸರದಲ್ಲಿಯ ಮಳೆಯ ಪ್ರಮಾಣ ವಾಡಿಕೆಯ ಮಳೆ ೪೦೨.೪ ಮಿ.ಮೀ. ಹಾಗೂ ವಾಸ್ತವಿಕ ಮಳೆ ೪೭೭.೬ ಮಿ.ಮೀ.[೬] ಇದ್ದು ಹೆಚ್ಚು ಉಷ್ಣತೆಯನ್ನು ಹೊಂದಿದೆ. ಸಾಮಾನ್ಯವಾಗಿ ಉಷ್ಣವಲಯದಲ್ಲಿ ಬರುವ ಈ ಪ್ರದೇಶವು ಸಮುದ್ರ ಮಟ್ಟದಿಂದ ಕಡಿಮೆ ಎತ್ತರದಲ್ಲಿದೆ. ಹವಾಮಾನವು ಬೇಸಿಗೆಯಲ್ಲಿ ಹೆಚ್ಚು ಉಷ್ಣಾಂಶವಿರುವ ತಿಂಗಳಾಗಿದ್ದು ಉಷ್ಣಾಂಶವು ೪೧° ಸೆಲ್ಸಿಯಸ್‌ವರೆಗೆ ದಾಖಲಾಗುತ್ತದೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳ ತಂಪಾದ ಹವಾಮಾನವನ್ನು ಅಂದರೆ ೧೪° ಸೆಲ್ಸಿನಷ್ಟು ದಾಖಲಾಗುತ್ತದೆ.[೭]

ಭೂ ರಚನೆ:

ಪ್ರಪಂಚದಲ್ಲಿಯೇ ಚಿತ್ರದುರ್ಗ ಶಿಲಾಪದರು ವಲಯವು ಪ್ರಸಿದ್ಧಿಯನ್ನು ಹೊಂದಿದೆ. ಚಳ್ಳಕೆರೆ ತಾಲ್ಲೂಕು ಪರಿಸರವು ಸ್ವಲ್ಪ ಭಾಗ ಸಮತಟ್ಟಾಗಿದ್ದು, ಅಲ್ಲಲ್ಲಿ ಉಬ್ಬು ತಗ್ಗುಗಳಿಂದ ಕೂಡಿದೆ. ವಿಶೇಷವಾಗಿ ಕಲ್ಲು ಜರುಗಿನಿಂದ ಕೂಡಿದ ಕಲ್ಲು ಮಿಶ್ರಿತ ಕೆಂಪು ಭೂಮಿ. ಕೆಲವು ಕಡೆ ಮಾತ್ರ ಕಪ್ಪು ನೆಲವಿದೆ.[೮] ವ್ಯವಸಾಯಕ್ಕೆ ಅಂತಹ ಯೋಗ್ಯವಾದ ಭೂಮಿಯೇನಲ್ಲ. ಹಲವು ಕಡೆಗಳಲ್ಲಿ ಮಣ್ಣು ಲವಣಯುಕ್ತವಾದುದಾಗಿದೆ. ಉಳ್ಳಾರ್ಥಿ ಕಾವಲ್ ಪ್ರದೇಶದಲ್ಲಿ ಮಣ್ಣಿನ ಮೇಲ್ಭಾಗದಲ್ಲಿ ಉರುಳಿಯಾಕಾರದ ಹರಳುಗಳ ರೂಪದಲ್ಲಿ ಪಾಟಲ ವರ್ಣದ 'ಕುರುಂದ ಶಿಲೆ' ದೊರೆಯುತ್ತದೆ.[೯] ಕೆಂಪು ಮಣ್ಣು ಮತ್ತು ಕಪ್ಪು ಮಣ್ಣು ತೇವಾಂಶದಿಂದ ಕೂಡಿರುವುದರಿಂದ ಈ ಪ್ರದೇಶದಲ್ಲಿ ಖುಷ್ಕಿ ಬೆಳೆಗಳನ್ನು ಚೆನ್ನಾಗಿ ಬೆಳೆಯಬಹುದಾಗಿರುತ್ತದೆ.

ಈ ಪರಿಸರದ ಮುಖ್ಯ ಕೃಷಿ ಒಣಬೇಸಾಯ. ಜೊತೆಗೆ ತೋಟಗಾರಿಕೆಯ ಬೆಳೆಗಳನ್ನು ಸಹ ಅಲ್ಲಲ್ಲಿ ಕಾಣುತ್ತೇವೆ. ಈ ತಾಲ್ಲೂಕಿನಲ್ಲಿ ಖುಷ್ಕಿ ಬೆಳೆಗಳನ್ನು ಪ್ರಮುಖವಾಗಿ ಬೆಳೆಯುತ್ತಾರೆ. ಸಾವೆ, ಸಜ್ಜೆ, ರಾಗಿ, ನವಣೆ, ತೊಗರಿ, ಕಡಲೆ, ತಂಬಾಕು, ನೆಲಗಡಲೆ ಇತರೆ ಎಣ್ಣೆ ಬೀಜಗಳು ಮುಖ್ಯ ಬೆಳೆಗಳಾಗಿ ನಮಗೆ ಕಂಡುಬರುತ್ತವೆ.[೧೦] ಇತ್ತೀಚಿಗೆ ನೀರಾವರಿ ಅನುಕೂಲವಿರುವ ಕಡೆ ಈರುಳ್ಳಿ

(ಉಳ್ಳಾಗಡ್ಡಿ)ಯನ್ನು ವಾಣಿಜ್ಯ ಬೆಳೆಯಾಗಿ ಹೆಚ್ಚಾಗಿ ಬೆಳೆಯುತ್ತಿದ್ದಾರೆ. ಖುಷ್ಕಿ ಬೆಳೆಯಲ್ಲಿ ಶೇಂಗಾ(ನೆಲಗಡಲೆ) ಪ್ರಮುಖ ಬೆಳೆಯಾಗಿದೆ.

ಅರಣ್ಯಸಂಪತ್ತು

ಕರ್ನಾಟಕದಲ್ಲಿಯೇ ಕಡಿಮೆ ಮಳೆ ಬೀಳುವ ಪ್ರದೇಶವೆಂದೂ ಈ ತಾಲ್ಲೂಕು ಗುರುತಿಸಲ್ಪಟ್ಟಿರುವುದರಿಂದ ಇಲ್ಲಿ ಅರಣ್ಯ ಸಂಪತ್ತು ಕಡಿಮೆಯೇ ಎಂದು ಹೇಳಬೇಕಾಗುತ್ತದೆ. ಹಾಗಾಗಿ ಈ ಪ್ರದೇಶವನ್ನು 'ಬಯಲುಸೀಮೆ' ಎಂದು ಗುರುತಿಸಲಾಗುತ್ತಿದೆ. ತಾಲ್ಲೂಕಿನ ಒಟ್ಟು ಅರಣ್ಯ ವಿಸ್ತೀರ್ಣ ೬,೯೭೮ ಹೆಕ್ಟೇರ್.[೧೧] ಮಳೆಯ ಪ್ರಮಾಣ ಕಡಿಮೆ ಇರುವುದರಿಂದ ದಟ್ಟ ಅರಣ್ಯಗಳಿರದೇ ಪೊದೆಗಳು ಮತ್ತು ಎತ್ತರವಲ್ಲದ ಮರಗಳನ್ನು ಕಾಣಬಹುದಾಗಿದೆ. ಇಲ್ಲಿನ ಅರಣ್ಯಗಳು ಮಾನವ ರಕ್ಷಿತ ಅರಣ್ಯಗಳಾಗಿದ್ದು, ಎಲೆ ಉದುರುವ ವೃಕ್ಷಗಳು, ಮುಳ್ಳು ಗಿಡಗಳು, ಕುರುಚಲು ಕಾಡು ಸಾಮಾನ್ಯವಾಗಿ ಕಂಡುಬರುತ್ತದೆ. ಮಳೆಗಾಲದಲ್ಲಿ ಚಿಗಿತು ಮೈತುಂಬುವ ಇಲ್ಲಿನ ಕುರುಚಲು ಗಿಡಗಳು, ಪ್ರದೇಶದ ಪ್ರಕೃತಿ ಸೌಂದರ್ಯವನ್ನು ಮನಮೋಹಿತಗೊಳಿಸುತ್ತದೆ.

ಈ ಪರಿಸರದಲ್ಲಿ ಕಂಡುಬರುವ ಸಸ್ಯಗಳನ್ನು ಪ್ರಮುಖವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು. ನೆಲಮಟ್ಟದಿಂದ ಮೂರು ಅಡಿಗಳವರೆಗೆ ಬೆಳೆಯುವ ಪೊದರುಗಳು (ಉದಾ: ಕಕ್ಕೆ, ತಂಗಡಿ, ನೆಲಬಂದರಿ, ಕಾರೆ), ಎತ್ತರವಾಗಿ ಬೆಳೆದು ಡಿಸೆಂಬರ್ ತಿಂಗಳಿಂದ ಎಲೆಯುದುರಿ ವಸಂತ ಮಾಸದಲ್ಲಿ ಚಿಗುರುವ ಗಿಡಗಳು (ಉದಾ: ಬೇವು, ಜಾಲಿ, ಚಿಗರೆ, ಹಿಪ್ಪೆ, ಹುಣಸೆ, ಹಲಸು), ಹಾಲು ತುಂಬಿರುವ ಎಲೆಗಳಿಲ್ಲದ ಗಿಡಗಳು (ಉದಾ: ಪಾಪಸ್‌ಕಳ್ಳಿ, ಬಂದಗಳ್ಳಿ, ಕಳ್ಳಿಗಿಡಗಳು), ತಿನ್ನಲು ಉಪಯೋಗಿಸುವ ಫಲಗಳನ್ನು ಬಿಡುವ (ಉದಾ: ಸೀತಾಫಲ, ದೇವದಾರು ಹಣ್ಣು, ಅರಳೆಕಾಯಿ, ಕಾರೆಕಾಯಿ), ಮೊದಲಾದ ಗಿಡಗಳು ಕಂಡುಬರುತ್ತವೆ.

ಬೆಟ್ಟಗುಡ್ಡಗಳು

ಬೆಟ್ಟಗುಡ್ಡಗಳು ನಿಸರ್ಗವು ನೀಡಿದ ಉಚಿತ ನೈಸರ್ಗಿಕ ಸಂಪನ್ಮೂಲಗಳಾಗಿವೆ. ಇವು ಮಾನವನ ಜೀವನದಲ್ಲಿ ಕೆಲವೊಮ್ಮೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರಭಾವ ಬೀರುತ್ತವೆ. ಅದರಂತೆ ಮಾನವನು ತನ್ನ ಬುದ್ಧಿ ಚಾತುರ್ಯ ಮತ್ತು ಕುಶಲತೆಗಳ ಮೂಲಕ ನೈಸರ್ಗಿಕ ಪರಿಸರವನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾನಾದರೂ ಆತನು ಪರಿಸರದಿಂದ ನಿರ್ಬಂಧಿತವಾದ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಾನೆ.[೧೨]

ಪ್ರಾಚೀನ ಕಾಲದಿಂದಲೂ ಇಂತಹ ಬೆಟ್ಟಗುಡ್ಡಗಳಲ್ಲಿ ಮಾನವನು ವಾಸಮಾಡಲು ಹಲವು ಕಾರಣಗಳು ಇವೆ. ನೈಸರ್ಗಿಕ ಸಂಪನ್ಮೂಲಗಳು ಅಧಿಕವಾಗಿ ಹಾಗೂ ಉಚಿತವಾಗಿ ದೊರೆಯುತ್ತವಲ್ಲದೆ, ಸಮುದ್ರ ಮಟ್ಟಕ್ಕಿಂತ ಹೆಚ್ಚು ಎತ್ತರವಾದ ಭೂಪ್ರದೇಶದಲ್ಲಿ ಉಷ್ಣತೆ ಕಡಿಮೆಯಾಗಿ ಹವೆ ತಂಪಾಗಿರುತ್ತದೆ.[೧೩] ಅಲ್ಲದೇ ಶತೃಗಳು ಪ್ರವೇಶ ಮಾಡದ ಹಾಗೆ ರಕ್ಷಿಸಿಕೊಳ್ಳಲು ಪ್ರಕೃತಿ ನಿರ್ಮಿತ ಗುಹೆಗಳಿರುತ್ತವೆ. ಈ ತಾಲ್ಲೂಕಿನಲ್ಲಿ ಚದುರಿದಂತೆ ಕೆಲವು ಕಣಶಿಲೆಯ ಬೆಟ್ಟ ಶ್ರೇಣಿಗಳಿವೆ. ಉಳಿದ

ಭಾಗ ಒಡೆದ ಸ್ವಲ್ಪ ಏರು ತಗ್ಗಿನ ಮೈದಾನ ಪ್ರದೇಶವಾಗಿದೆ.[೧೪] ಈ ಪ್ರದೇಶದಲ್ಲಿ ನಮಗೆ ಕಂಡುಬರುವ ಪ್ರಮುಖ ಬೆಟ್ಟಗುಡ್ಡಗಳೆಂದರೆ ನನ್ನಿವಾಳ ಗುಡ್ಡ ಹಾಗೂ ಉಳ್ಳಾರ್ಥಿ ಗುಡ್ಡ. ನನ್ನಿವಾಳ ಪರಿಸರದ ಗುಡ್ಡದಲ್ಲಿ ಆದಿಮಾನವನ ಕಾಲದ ಬಯಲುಬಂಡೆ ರೇಖಾ ಚಿತ್ರಗಳನ್ನು ಕಾಣಬಹುದಾಗಿದೆ.

ಜಲಸಂಪತ್ತು

ಈ ಪ್ರದೇಶವು ಬಯಲು ಸೀಮೆಯಾದ್ದರಿಂದ ಇಲ್ಲಿನ ಪ್ರಮುಖ ಜಲಸಂಪನ್ಮೂಲಗಳಾಗಿ ಕೆರೆಗಳು, ಬಾವಿಗಳು, ಕೊಳವೆಬಾವಿಗಳು ಕಾರ್ಯನಿರ್ವಹಿಸಿವೆ. ಪ್ರಾಚೀನ ಕಾಲದಿಂದಲೂ ನೀರಿನ ಆಸರೆಯಾಗಿ ಇಲ್ಲಿನ ಕೆರೆಗಳು ಪ್ರಮುಖ ಪಾತ್ರವಹಿಸಿರುವಂತೆ ಕಾಣುತ್ತವೆ. ತಾಲ್ಲೂಕಿನ ದಕ್ಷಿಣ ಭಾಗದಲ್ಲಿ ವೇದಾವತಿ ನದಿಯು ಪ್ರವೇಶವಾಗಿ ದಕ್ಷಿಣೋತ್ತರವಾಗಿ ಹರಿದು ಈಶಾನ್ಯದಲ್ಲಿ ಘಟಪರ್ತಿಯೆಂಬಲ್ಲಿ, ಬಳ್ಳಾರಿ ಜಿಲ್ಲೆಯನ್ನು ಪ್ರವೇಶಿಸುತ್ತದೆ.[೧೫] ಗರಣಿಹಳ್ಳ ಹಾಗೂ ನಾಯಕನ ಹಟ್ಟಿ ಹಳ್ಳಗಳೂ ಈ ನದಿಗೆ ಸೇರುತ್ತವೆ. ಹಗರಿ ನದಿಯ ಕಣಿವೆ ಪ್ರದೇಶ ಈ ತಾಲ್ಲೂಕಿನ ವಾಯುವ್ಯ ಎಲ್ಲೆಯಾಗಿದೆ. ನಂದಿಹಳ್ಳಿಯಲ್ಲಿ ನಿರ್ಮಾಣವಾಗುವ ಅಣೆಕಟ್ಟಿನಿಂದ ಈಗ ಈ ತಾಲ್ಲೂಕಿಗೆ ಹೇರಳವಾಗಿ ನೀರು ಒದುಗುವ ಭರವಸೆಯುಂಟು. ಪಾವಗಡ ತಾಲ್ಲೂಕಿನಲ್ಲಿ ಹುಟ್ಟಿ ಈ ತಾಲ್ಲೂಕಿನತ್ತ ಹರಿಯುವ ಚಿಕ್ಕ ಉಪನದಿಯಿಂದ ಈ ತಾಲ್ಲೂಕಿನ ಅಗ್ನೇಯ ಭಾಗಕ್ಕೆ ನೀರು ಒದಗುತ್ತದೆ.

ಈ ತಾಲ್ಲೂಕಿನಲ್ಲಿ ಪರಶುರಾಮಪುರದ ಕೆರೆಯೇ ಅತ್ಯಂತ ದೊಡ್ಡದು. ನಾರಾಯಣಪುರ ಅಣೆಕಟ್ಟಿನಿಂದ ಒಂದು ಪೋಷಕ ಕಾಲುವೆಯನ್ನು ಈ ಕೆರೆಗೆ ಜೋಡಿಸಲಾಗಿದೆ. ಈ ತಾಲ್ಲೂಕಿನ ಅತ್ಯಂತ ಹಳೆಯ ಕೆರೆಯಾದ ನಾಯಕನಹಟ್ಟಿ ಹಿರೆಕೆರೆ ಸು. ೩೦೦ ವರ್ಷಗಳ ಹಿಂದೆ ಶ್ರೀ ಗುರುತಿಪ್ಪೇರುದ್ರಸ್ವಾಮಿಯಿಂದ ನಿರ್ಮಿತವಾದುದು.[೧೬] ಮೀರಾಸಾಬಿಹಳ್ಳಿ ರಾಣಿಕೆರೆಯಿಂದ ೨೦೬೨ ಎಕೆರೆಗೆ, ಮನ್ನೆಕೋಟೆ, ಕೋಡಿಹಳ್ಳಿ ಕೆರೆಗಳಿಂದ ೩೭೦ ಎಕೆರೆಗೆ, ನಾರಾಯಣಪುರದ ಕಾಲುವೆಯಿಂದ ಸುಮಾರು ೪೦೦೦ ಎಕೆರೆಗಳಿಗೆ ವ್ಯವಸಾಯಕ್ಕಾಗಿ ನೀರನ್ನು ಉಪಯೋಗಿಸಲಾಗುತ್ತದೆ.[೧೭]

ಇವಲ್ಲದೆ ಪರಿಸರದಲ್ಲಿ ಕಂಡುಬರುವ ಚಳ್ಳಕೆರೆಯಲ್ಲಿ ಕರೆಕಲ್ಲಿನ ಕೆರೆ, ಅಜ್ಜನ ಕೆರೆ, ನಗರಂಗೆರೆಯ ಕೆರೆ, ಸಾಣಿಕೆರೆಯ ಕೆರೆ, ಹಳೆದೊಡ್ಡೇರಿಯ ಕೆರೆ, ರಾಣಿಕೆರೆ, ಚಿಕ್ಕಮಧುರೆ ಕೆರೆ ಮುಂತಾದವು ಕೂಡ ವ್ಯವಸಾಯಕ್ಕೆ ನೀರನ್ನು ಒದಗಿಸುವ ಪ್ರಮುಖ ಮೂಲಗಳಾಗಿದ್ದವೆಂದು ತಿಳಿದುಬರುತ್ತದೆ. ಇವು ನೂರಾರು ಎಕರೆ ಭೂಮಿ ಸಾಗುವಳಿ ಮಾಡಲು ನೆರವಾಗಿವೆ.

ಪ್ರಾಣಿವರ್ಗ

ಪರಿಸರದಲ್ಲಿ ಗುಂಡಾರಣ್ಯಗಳಿಲ್ಲದಿರುವ ಪ್ರಯುಕ್ತ ಇಲ್ಲಿ ಶುಷ್ಕ ವಾತಾವರಣದ ಕಾಡುಗಳಲ್ಲಿರುವಂತಹ ದ್ವಿತೀಯ ದರ್ಜೆಯ ಪ್ರಾಣಿಗಳು ಕಂಡುಬರುತ್ತವೆ. ವಿಶೇಷವಾಗಿ ಮಾಂಸಹಾರಿ ಪ್ರಾಣಿಗಳಾದ ನರಿ, ತೋಳ, ಜೊಂಪುತೋಳ, ಕತ್ತೆಕಿರುಬ, ಚಿಗರಿ ಮುಂತಾದವು ಕಾಣುತ್ತವೆ. ಅಪರೂಪಕ್ಕೊಮ್ಮೆ ಚಿರತೆ ಕಾಣಿಸುತ್ತದಂತೆ. ಅದೇ ರೀತಿ ಸಸ್ಯಹಾರಿಗಳಾದ ಕರಡಿ, ಕಾಡುಹಂದಿ, ಮುಳ್ಳುಹಂದಿ, ದೊಡ್ಡ ಜಿಂಕೆ, ಮುಂಗುಸಿ, ಉಡ, ಮೊಲ, ನವಿಲು, ನಾಗರಹಾವು ಮುಂತಾದ ಪ್ರಾಣಿಗಳನ್ನು ಕಾಣಬಹುದು.

ಖನಿಜ ಸಂಪತ್ತು

ಜಿಲ್ಲೆಯ ಆರ್ಥಿಕ ರಂಗದ ಮೇಲೆ ಮಹತ್ತರವಾದ ಪ್ರಭಾವ ಬೀರುವ ಮತ್ತು ಲಾಭತರಬಹುದಾದ ಮುಖ್ಯ ಖನಿಜಗಳು ಈ ಪರಿಸರದಲ್ಲಿ ಹೇರಳವಾಗಿಲ್ಲ. ಕಣಶಿಲೆ ಮತ್ತು ವಿವಿಧ ವರ್ಣದ ಸುಣ್ಣದ ನಿಕ್ಷೇಪಗಳು ದೊರೆತಿವೆ. ನಾಯಕನಹಟ್ಟಿ ಪರಿಸರದಲ್ಲಿ ಸುಣ್ಣದಕಲ್ಲು ಹೆಚ್ಚಾಗಿ ಸಿಗುವುದರಿಂದ ಈ ಸುಣ್ಣವನ್ನು ಚಳ್ಳಕೆರೆಯ ಬೇರೆ ಬೇರೆ ಪ್ರದೇಶಕ್ಕೆ ಕಚ್ಚಾ ಸುಣ್ಣಕಲ್ಲನ್ನು ತೆಗೆದುಕೊಂಡು ಹೋಗಿ ಸುಣ್ಣವನ್ನು ತಯಾರಿಸಿ ಮಾರುವುದು ಕಂಡುಬರುತ್ತದೆ.

೨.೨. ಐತಿಹಾಸಿಕ ಹಿನ್ನೆಲೆ

ಪ್ರಾಗಿತಿಹಾಸ

ಒಂದು ಪ್ರದೇಶದ ಐತಿಹಾಸಿಕ ಮಹತ್ವವನ್ನು ಆ ಪ್ರದೇಶದಲ್ಲಿ ಮಾನವ ಬಳಕೆ ಮಾಡಿ ಬಿಟ್ಟು ಹೋದ ಹಲವಾರು ಅವಶೇಷಗಳಿಂದ ತಿಳಿಯಬಹುದಾಗಿದೆ. ಇತಿಹಾಸವನ್ನು ಪ್ರಾಗಿತಿಹಾಸ ಮತ್ತು ಇತಿಹಾಸ ಕಾಲ ಎಂಬುದಾಗಿ ವಿಭಾಗಿಸಿಕೊಳ್ಳಲಾಗಿದೆ. ಪ್ರಾಗಿತಿಹಾಸ ಕಾಲದ ಮಾನವನ ಜೀವನದ ಆರಂಭದ ಕುತೂಹಲಕರವಾಗಿದೆ. ಈ ಕಾಲಮಾನದಲ್ಲಿ ಮಾನವನಿಗೆ ಓದು ಬರಹದ ಅಥವಾ ಅಕ್ಷರದ ಜ್ಞಾನವಿರಲಿಲ್ಲ. ಸ್ವೇಚ್ಛತಾ ಜೀವಿಯಾಗಿ ತನ್ನ ಮನಬಂದಂತೆ ಜೀವನ ಸಾಗಿಸುತ್ತಿದ್ದ ಮಾನವನು ತನ್ನ ಆಹಾರವನ್ನು ಬೇಟೆಯಾಡಿ ಪಡೆದುಕೊಳ್ಳುತ್ತಿದ್ದ ಹಾಗೂ ತನ್ನ ಮಾನವನ್ನು ಮುಚ್ಚಿಕೊಳ್ಳಲು ಪ್ರಾಣಿಯ ಚರ್ಮವನ್ನು ಉಡುಪನ್ನಾಗಿ ಬಳಸುತ್ತಿದ್ದ. ಬೇಟೆಯಾಡಲು ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದನು.

ಇಂತಹ ಉಪಕರಣಗಳನ್ನು ತಯಾರಿಸಿಕೊಳ್ಳಲು ಕಲ್ಲಿನ ಮಾದರಿಗಳ ಆಯ್ಕೆ, ಅವುಗಳ ರೂಪಣಾ ವಿಧಾನ, ಬಳಸಿದ ತಾಂತ್ರಿಕತೆ ಬಹುಮುಖ್ಯ ಪಾತ್ರವಹಿಸಿ, ಮಾನವನ ಜೀವನ ವಿಕಾಸದ ಬದಲಾವಣೆಗಳನ್ನು ತಿಳಿಯಲು ಸಹಾಯಕವಾಗಿದೆ.[೧೮] ಇಂತಹ ವಿಕಾಸದ ಜೀವನ ಕ್ರಮವನ್ನು ಸಂಸ್ಕೃತಿ ಎಂದು ಕರೆಯಲಾಗಿದೆ. ಕಲ್ಲಿನ ಬಳಕೆಯಿಂದಾಗಿ ಈ ಹಂತವನ್ನು ಶಿಲಾಯುಗದ ಸಂಸ್ಕೃತಿ ಎಂದು ಕರೆದಿರುವರು. ಬೆಳವಣಿಗೆ ಸಾಧಿಸಿಕೊಂಡ ಮಾನವ ಶಿಲೆಯ ವಸ್ತುಗಳ ಬಳಕೆಯನ್ನು ಕಡಿಮೆ ಮಾಡಿ ಲೋಹದ ವಸ್ತುಗಳನ್ನು ತಯಾರಿಸುತ್ತಾ ಮಾರ್ಪಾಡು ಹೊಂದಿ ಸುಸಂಸ್ಕೃತ ಶೈಲಿಯನ್ನು ರೂಪಿಸಿಕೊಂಡು ನಾಗರೀಕನಾದನು.

ಕರ್ನಾಟಕದ ಪ್ರಾಗೈತಿಹಾಸದ ಅಧ್ಯಯನವು ಪ್ರೇಮ್‌ರೋಸ್ ಕ್ರಿ.ಶ. ೧೮೪೨ರಲ್ಲಿ ರಾಯಚೂರು ಜಿಲ್ಲೆಯ ಲಿಂಗಸೂರು ಪ್ರದೇಶದಲ್ಲಿ ಆಕಸ್ಮಿಕವಾಗಿ ಸಂಶೋಧಿಸಿದ ಶಿಲೋಪಕರಣಗಳಿಂದ ಆರಂಭವಾಯಿತು. ಮುಂದೆ ರಾಬರ್ಟ್ ಬ್ರೂಸ್‌ಫೂಟ್, ಕರ್ನಲ್ ಮೆಕೆಂಜಿಯವರು ಪ್ರಾಗೈತಿಹಾಸಿಕ ನೆಲೆಗಳ ಸಂಶೋಧನೆಯಲ್ಲಿ ಗಣನೀಯ ಸಾಧನೆ ಮಾಡಿದರು.[೧೯] ಇವರು ಆರಂಭಿಸಿದ ನೆಲೆಗಳ ಶೋಧನಾ ಕಾರ್ಯವನ್ನು ಪುರಾತತ್ವಜ್ಞರು ಮುಂದುವರಿಸಿ, ಹಲವಾರು ಶಿಲಾಯುಗದ ನೆಲೆಗಳನ್ನು ಶೋಧಿಸಿದರು. ಈವರೆಗೆ ಕರ್ನಾಟಕದಲ್ಲಿ ಸುಮಾರು ೨೫೧೭ ನೆಲೆಗಳನ್ನು[೨೦] ಗುರುತಿಸಿದ್ದಾರೆ. ಇಂದಿಗೂ ಸಹ ಹೊಸ ಹೊಸ ಶಿಲಾಯುಗದ ನೆಲೆಗಳು ಕಂಡುಬರುತ್ತವೆ.

ಕರ್ನಾಕದ ಅತ್ಯಂತ ಪುರಾತನವೆನಿಸಿದ ಭೂಮಿಯಲ್ಲೊಂದೆಂದರೆ ಕರ್ನಾಟಕದ ಪೀಠ ಭೂಮಿಯಾಗಿದೆ. ಇದು ಪರ್ಯಾಯ ದ್ವೀಪ ಭಾಗದ ಅತಿ ಪುರಾತನ ಪ್ರಸ್ಥಭೂಮಿ. ಇಂತಹ ಪೀಠ ಭೂಮಿಯ ಕೇಂದ್ರ ಭೂಭಾಗವೆಂದರೆ ಚಿತ್ರದುರ್ಗ ಜಿಲ್ಲೆ. ಇತ್ತೀಚಿನ ಸಂಶೋಧನೆಗಳಿಂದ ಈ ಜಿಲ್ಲೆಯು ಸುಮಾರು ೨೭೦ ಕೋಟಿ ವರ್ಷಗಳ ಹಿಂದೆ ಸಮುದ್ರದ ತಳಭಾಗವಾಗಿತ್ತೆಂದು ತಿಳಿದುಬಂದಿದೆ.[೨೧] ಹೀಗಾಗಿ ಈ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರವಾಗಿರುವ ಚಳ್ಳಕೆರೆಯಲ್ಲಿ ಸುಮಾರು ೨೭ ಶಿಲಾಯುಗದ ನೆಲೆಗಳು ಕಂಡುಬಂದಿವೆ. ಗಮನಿಸಬೇಕಾದ ಅಂಶವೆಂದರೆ ಇಲ್ಲಿ ಹಳೆ ಶಿಲಾಯುಗಕ್ಕೆ ಸೇರಿದ ನೆಲೆಯ, ಈವರೆಗೆ ಯಾವುದೇ ಅವಶೇಷಗಳು ಪತ್ತೆಯಾಗಿಲ್ಲ. ಆದರೆ ಈ ಪ್ರದೇಶದಲ್ಲಿ ಇನ್ನು ಹೆಚ್ಚಿನ ಕ್ಷೇತ್ರಕಾರ್ಯವು ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ.

ಈ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗ ಸಂಸ್ಕೃತಿಯ ನಾಲ್ಕು, ನೂತನ ಶಿಲಾಯುಗ ಸಂಸ್ಕೃತಿಯ ಎಂಟು, ಬೃಹತ್ ಶಿಲಾಯುಗ ಸಂಸ್ಕೃತಿಯ ಒಂಭತ್ತು, ಇತಿಹಾಸ ಆರಂಭಕಾಲದ ಮೂರು ನೆಲೆಗಳು ಕಂಡುಬಂದಿವೆ. ಇವುಗಳಲ್ಲಿ ವಿವಿಧ ಹಂತದಲ್ಲಿ ವಿವಿಧ ಮಾದರಿಯ ಆಯುದೋಪಕರಣಗಳು ದೊರೆತಿವೆ. ಇವರು ಆಯುಧವನ್ನು ರೂಪಿಸಲು ಕ್ವಾರ್ಟ್ಸ್ ಶಿಲೆಯನ್ನು ಬಳಸಿ ತಯಾರಿಸುವುದು ಈ ನೆಲೆಗಳಲ್ಲಿ ದೊರೆತ ಶಿಲಾಯುಧಗಳಿಂದ ತಿಳಿದುಬರುತ್ತದೆ.

ಚಳ್ಳಕೆರೆ ತಾಲ್ಲೂಕು ಪರಿಸರದಲ್ಲಿ ಸೂಕ್ಷ್ಮಶಿಲಾಯುಗಕ್ಕೆ ಸೇರಿದ ಪ್ರಾಚ್ಯಾವಶೇಷಗಳು (ಶಿಲಾಯುಧಗಳು) ಪುರ್ಲಹಳ್ಳಿ[೨೨] ಮತ್ತು ಪಿ. ಮಹದೇವಪುರದಲ್ಲಿ[೨೩] ದೊರೆತಿವೆ. ನೂತನ ಶಿಲಾಯುಗಕ್ಕೆ ಸೇರಿದ ಅವಶೇಷಗಳು ಗಂಜಿಗುಂಟೆ,[೨೪] ಹಳೇದೊಡ್ಡೇರಿ,[೨೫] ಪರಶುರಾಮಪುರ,[೨೬] ಯಾದಲಗಟ್ಟಿ,[೨೭] ಪಿ.ಮಹದೇವಪುರ,[೨೮] ಪುರ್ಲಹಳ್ಳಿ,[೨೯] ಗೌರೀಪುರ,[೩೦] ಕರೀಕೆರೆ[೩೧] ಮುಂತಾದ ಪ್ರದೇಶಗಳಲ್ಲಿ ದೊರೆತಿವೆ. ಅದೇ ರೀತಿ ಬೃಹತ್ ಶಿಲಾಯುಗ ಸಂಸ್ಕೃತಿಗೆ ಸೇರಿದ ನೆಲೆಗಳೆಂದರೆ ಚಿಕ್ಕಮಧುರೆ,[೩೨] ಲಕುಮಗೊಂಡನಹಳ್ಳಿ,[೩೩] ಕರೀಕೆರೆ,[೩೪] ಗೌರೀಪುರ,[೩೫] ಪುರ್ಲಹಳ್ಳಿ,[೩೬] ಯಾದಲಗಟ್ಟಿ,[೩೭] ಪಿ.ಮಹದೇವಪುರ,[೩೮] ಹಳೇದೊಡ್ಡೇರಿ,[೩೯] ಗಂಜಿಗುಂಟೆಗಳಲ್ಲಿ[೪೦] ದೊರೆತಿವೆ. ಇತಿಹಾಸ ಆರಂಭಕಾಲಕ್ಕೆ ಸೇರಿದ ನೆಲೆಗಳು ಚಿಕ್ಕಮಧುರೆ,[೪೧] ಕೋಲೂರು,[೪೨] ಹಳೇದೊಡ್ಡೇರಿಗಳಲ್ಲಿ[೪೩] ದೊರೆತಿವೆ.

ಕರೀಕೆರೆ ಪ್ರದೇಶದಲ್ಲಿ ನನ್ನ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಪ್ರಪ್ರಥಮವಾಗಿ ನೂತನ ಶಿಲಾಯುಗಕ್ಕೆ ಸೇರಿದ ನೆಲೆಯನ್ನು ಗುರುತಿಸಲಾಗಿದೆ. ಈ ಮೇಲಿನ ಎಲ್ಲ ನಿವೇಶನಗಳಲ್ಲಿ ದೊರಕಿದ ಅವಶೇಷಗಳೆಂದರೆ ನಯಗೊಳಿಸಿದ ಶಿಲಾಯುಧಗಳು, ಮಡಿಕೆಯ ಭಾಗಗಳು ಮತ್ತು ಬೂದಿಗುಡ್ಡಗಳಾಗಿವೆ. ಬೃಹತ್ ಶಿಲಾಸಂಸ್ಕೃತಿಗೆ ಸೇರಿದ ಕೆಂಪು ಮತ್ತು ಕಪ್ಪು ಬಣ್ಣದ ಮಡಿಕೆಗಳ ಜೊತೆಗೆ ಕಬ್ಬಿಣದ ಕಿಟ್ಟಿಗಳ ಅವಶೇಷಗಳು ದೊರಕಿವೆ.

ಈ ಎಲ್ಲಾ ನೆಲೆಗಳಿಂದ ಮಾನವರು ಈ ತಾಲ್ಲೂಕು ಪರಿಸರದಲ್ಲಿ ಕ್ರಿ.ಪೂ. ಸುಮಾರು ೧೦,೦೦೦ ವರ್ಷಗಳಿಂದ ಕ್ರಿ.ಶ. ಒಂದನೆಯ ಶತಮಾನದವರೆಗೂ ಇಲ್ಲಿ ತನ್ನ ಸತತ ಪ್ರಯತ್ನಗಳ ಫಲವಾಗಿ ನಾಗರೀಕತೆಯನ್ನು ಕಟ್ಟಿ ಮಹಾಸಾಮ್ರಾಜ್ಯಗಳ ನಿರ್ಮಾಣಕ್ಕೆ ಅಡಿಗಲ್ಲು ಹಾಕಿದರೆಂಬುದು ಪುರಾತತ್ವ ಶೋಧನೆಗಳಿಂದ ತಿಳಿದುಬರುತ್ತದೆ.

ಚಳ್ಳಕೆರೆ ತಾಲ್ಲೂಕು ಪರಿಸರದಲ್ಲಿ ಈವರೆಗೆ ದೊರೆತ ಪುರಾತತ್ವ ನೆಲೆಗಳ ವಿವರ

ಕ್ರ ಸಂ.	ಗ್ರಾಮದ ಹೆಸರು	ಹಳೇ ಶಿಲಾಯುಗ ಸಂಸ್ಕೃತಿ	ಸೂಕ್ಷ್ಮ ಶಿಲಾಯುಗ ಸಂಸ್ಕೃತಿ	ನೂತನ ಶಿಲಾಯುಗ ಸಂಸ್ಕೃತಿ	ಬೃಹತ್ ಶಿಲಾಯುಗ ಸಂಸ್ಕೃತಿ	ಇತಿಹಾಸ ಆರಂಭ ಕಾಲ
೦೧	ಚಿಕ್ಕ ಮಧುರೆ	–	–	–	✓	✓
೦೨	ಪರುಶರಾಮಪುರ	–	–	✓	–	–
೦೩	ಕೋಲೂರು	–	–	–	–	✓
೦೪	ಲಕುಮಗೊಂಡನಹಳ್ಳಿ	–	–	–	✓	–
೦೫	ಹಳೇ ದೊಡ್ಡೇರಿ	–	✓	✓	✓	✓
೦೬	ಗಂಜಿಗುಂಟೆ	–	–	✓	✓	–
೦೭	ಪಿ. ಮಹದೇವಪುರ	–	✓	✓	✓	–
೦೮	ಯಾದಲಗಟ್ಟೆ	–	✓	✓	✓	–
೦೯	ಮಲ್ಲಹಳ್ಳಿ	–	✓	✓	✓	–
೧೦	ಗೌರಿಪುರ	–	–	✓	✓	–
೧೧	ಕರೀಕೆರೆ	–	–	✓	✓	–

ಇತಿಹಾಸ ಕಾಲ:

ಮಾನವನ ವಿಕಸನದ ಹಂತದಲ್ಲಿ ಅಕ್ಷರಗಳ ಅವಿಷ್ಕಾರ ಬಹುಮುಖ್ಯವಾದ ಅಂಶವಾಗಿದೆ. ಅಕ್ಷರಗಳ ಅವಿಷ್ಕಾರದ ನಂತರದ ಹಂತವನ್ನು ಅಂದರೆ ಬರವಣಿಗೆಯು ಗೊತ್ತಾದ ನಂತರದ ಅವಧಿಯನ್ನು ಇತಿಹಾಸಕಾಲ ಎಂದು ಕರೆಯಬಹುದು. ಪ್ರಸ್ತುತ ಪ್ರದೇಶದಲ್ಲಿ ಶಾಸನಗಳು ದೊರೆಯುವ ಕಾಲದಿಂದ ಅಂದರೆ ಮೌರ್ಯರಿಂದ ಹಿಡಿದು ಚಿತ್ರದುರ್ಗದ ಪಾಳೆಯಗಾರರ ಕಾಲದವರೆಗೂ ಆಳ್ವಿಕೆ ನಡೆಸಿದ ವಿವಿಧ ರಾಜವಂಶಗಳ ಪರಿಚಯವನ್ನು ನಾವು ತಿಳಿಯಬಹುದಾಗಿದೆ. ವಿವಿಧ ಕಾಲಘಟ್ಟಗಳಲ್ಲಿ ಕರ್ನಾಟಕವನ್ನಾಳಿದ ಅನೇಕ ಪ್ರಮುಖ ರಾಜಮನೆತನಗಳ ಸಾಮ್ರಾಜ್ಯದೊಳಗೆ ಈ ಭಾಗವು ಸೇರಿದ್ದಿತಲ್ಲದೆ, ಕೆಲವು ಆಡಳಿತ ವಿಭಾಗಗಳಿಂದಲೂ ಈ ವಿಷಯ ದೃಢಪಡುತ್ತದೆ. ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಈ ಪರಿಸರದಲ್ಲಿ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ನೊಳಂಬರು, ಹೊಯ್ಸಳರು, ವಿಜಯನಗರದವರು ಮತ್ತು ಪಾಳೆಯಗಾರರು ಆಳ್ವಿಕೆಯನ್ನು ನಡೆಸಿದ್ದಕ್ಕೆ ಆಧಾರಗಳು ಸಿಗುತ್ತವೆ. ಇವರಲ್ಲಿ ಪ್ರಮುಖವಾಗಿ ನೊಳಂಬರು, ಪಾಳೆಯಗಾರರು ಪ್ರಮುಖರಾಗಿದ್ದಾರೆ.

ಚಳ್ಳಕೆರೆ ತಾಲ್ಲೂಕಿನ ಶಾಸನಗಳನ್ನು ಪರಿಶೀಲಿಸಿದಾಗ ಅವು ರಾಷ್ಟ್ರಕೂಟ ಅರಸರ ಹಾಗೂ ನಂತರದ ನೊಳಂಬ ಅರಸರ, ಪಾಳೆಯಗಾರರ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದವುಗಳಾಗಿವೆ. ಇದಕ್ಕಿಂತಲೂ ಪೂರ್ವದಲ್ಲಿ ಚಳ್ಳಕೆರೆ ಪರಿಸರದ ಆಳ್ವಿಕೆಯ ಬಗ್ಗೆ ಯಾವುದೇ ಖಚಿತ ಮಾಹಿತಿಯಿಲ್ಲ.

ಮೌರ್ಯರು

ಉತ್ತರ ಭಾರತದಲ್ಲಿ ಪ್ರಪ್ರಥಮವಾಗಿ ಐತಿಹಾಸಿಕ ಸಾಮ್ರಾಜ್ಯಕ್ಕೆ ಅಡಿಗಲ್ಲು ಹಾಕಿದ ಮೌರ್ಯರು ತಮ್ಮ ಸಾಮ್ರಾಜ್ಯವನ್ನು ಕುಂತಲ ದೇಶದವರೆಗೂ ವಿಸ್ತರಿಸಿದ್ದರೆಂಬುದಕ್ಕೆ ಸಾಕಷ್ಟು ಆಧಾರಗಳಿವೆ.

ಈ ಕುಂತಲ ಸೀಮೆಯ ಭೀಮಾ ಮತ್ತು ವೇದಾವತಿ ನದಿಗಳ ಮಧ್ಯದಲ್ಲಿದ್ದು, ಪಶ್ಚಿಮ ಘಟ್ಟಗಳನ್ನು ಸರಹದ್ದನ್ನಾಗಿ ಹೊಂದಿದ್ದಿತು.[೪೪] ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಪ್ರದೇಶವೂ ಸೇರಿತ್ತೆಂಬುದಕ್ಕೆ ನಮಗೆ ಮೊಳಕಾಲ್ಮೂರು ತಾಲ್ಲೂಕಿನಲ್ಲಿ ದೊರೆತ ಅಶೋಕನ ಶಾಸನಗಳು ಆಧಾರಗಳಾಗಿವೆ. ಕುಂತಲ ದೇಶವನ್ನು ಆಳಿದವರಲ್ಲಿ ನಂದರು ಮೊದಲಿಗರೆಂಬ ಅಭಿಪ್ರಾಯವಿದೆ.[೪೫] ಚಿತ್ರದುರ್ಗ ಅದರ ಸುತ್ತಲೂ ಇದ್ದ ಪ್ರದೇಶಗಳೂ ಕ್ರಿ.ಪೂ. ಆರನೆಯ ಶತಮಾನದಿಂದಲೂ ಔತ್ತರೇಯರ ಆಳ್ವಿಕೆಗೆ ಒಳಪಟ್ಟಿದ್ದವೆಂದು ಹೇಳಬಹುದು. ನಂದರ ಉತ್ತರಾಧಿಕಾರಿಗಳಾದ ಮೌರ್ಯರು ಅನುಕ್ರಮವಾಗಿ ಈ ಭಾಗದ ಒಡೆಯರಾದರು.[೪೬]

ಇತ್ತೀಚೆಗೆ ನಡೆದ ಸಂಶೋಧನೆಗಳಿಂದ ಮೌರ್ಯ ಸಾಮ್ರಾಜ್ಯವು ಮೊಳಕಾಲ್ಮೂರು ತಾಲ್ಲೂಕಿನ ಕೆಲವು ಭಾಗಗಳಲ್ಲದೇ ಜಿಲ್ಲೆಯ ಪೂರ್ಣಭಾಗವನ್ನು ಒಳಗೊಂಡಿದ್ದುದಾಗಿ ತಿಳಿದುಬಂದಿದೆ.[೪೭] ಅಲ್ಲದೇ ಜಿಲ್ಲೆಯ ಚಂದ್ರವಳ್ಳಿ ಮತ್ತು ಬ್ರಹ್ಮಗಿರಿಯಲ್ಲಿ ಉತ್ಖನನಗಳು ನಡೆದಿದ್ದು ಅಲ್ಲಿ ಸಿಕ್ಕಿರುವ ಅವಶೇಷಗಳಿಂದ ಈ ಚಳ್ಳಕೆರೆ ತಾಲ್ಲೂಕು ಪರಿಸರವೂ ಕೂಡ ಪರೋಕ್ಷವಾಗಿ ಮೌರ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ಹೇಳಬಹುದಾಗಿದೆ. ಒಟ್ಟಿನಲ್ಲಿ ಚಿತ್ರದುರ್ಗ ಮತ್ತು ಅದರ ಸುತ್ತಲಿನ ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದು ಅವರ ದಕ್ಷ ಆಡಳಿತ ಪದ್ಧತಿಯಿಂದ ಪ್ರಯೋಜನ ಹೊಂದಿ ಮೌರ್ಯರ ಸಾಂಸ್ಕೃತಿಕ ಪರಂಪರೆಯ ವ್ಯಾಪ್ತಿಗೆ ಒಳಗಾದವು.

ಶಾತವಾಹನರು

ಮೌರ್ಯ ಸಾಮ್ರಾಜ್ಯ ಪತನಾನಂತರ ಶಾತವಾಹನರು ದಕ್ಷಿಣಾಪಥದ ಒಡೆಯರಾದರು. ಕರ್ನಾಟಕದ ಬಹುಭಾಗವನ್ನಾಳಿದ ಮೊಟ್ಟಮೊದಲನೆಯ ಪ್ರಮುಖ ರಾಜವಂಶದವರಾದ ಶಾತವಾಹನರು ತಮ್ಮನ್ನು 'ಕುಂತಳ ಸ್ವಾಮಿ'ಗಳೆಂದು ಕರೆದುಕೊಂಡಿದ್ದುಂಟು.[೪೮] ಈ ಪ್ರದೇಶದಲ್ಲಿ ಶಾತವಾಹನರಿಗೆ ಸೇರಿದ ಯಾವುದೇ ಶಾಸನಗಳು ದೊರೆತಿರುವುದಿಲ್ಲ. ಆದರೂ ಬ್ರಹ್ಮಗಿರಿ, ಚಂದ್ರವಳ್ಳಿಗಳಲ್ಲಿ ಇದುವರೆಗೂ ಸಿಕ್ಕಿರುವ ಶಾಸನೇತರ ಪುರಾತತ್ವ ವಸ್ತು ವಿಶೇಷಗಳನ್ನೂ, ನಾಣ್ಯಗಳನ್ನು ಆಧರಿಸಿ ಹೇಳುವುದಾದರೆ ಚಂದ್ರವಳ್ಳಿ ಶಾತವಾಹನರ ರಾಜಧಾನಿಗಳಲ್ಲಿ ಒಂದಾಗಿತ್ತೆಂದು ಊಹಿಸಬಹುದು.[೪೯] ಇದರಿಂದ ಈ ಪರಿಸರದಲ್ಲಿ ಅವರ ಆಳ್ವಿಕೆ ಇರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಕದಂಬರು

ಕರ್ನಾಕದ ಚರಿತ್ರೆಯಲ್ಲಿ ಶಾತವಾಹನರ ಅಧಿಪತ್ಯ ಅಳಿದ ಮೇಲೆ ಪಲ್ಲವರ ಆಳ್ವಿಕೆ ಆರಂಭಗೊಳ್ಳುತ್ತದೆ. ಆದರೆ ಮುಂದೆ ಪಲ್ಲವರನ್ನು ಸೋಲಿಸಿ ಈ ಭಾಗದಲ್ಲಿ ಅಧಿಕಾರವನ್ನು ಸ್ಥಾಪಿಸಿದ ಕೀರ್ತಿ ಕದಂಬರಿಗೆ ಸೇರುತ್ತದೆ. ಕದಂಬರಿಗೆ ಸೇರಿದ ಶಾಸನಗಳು ನಮಗೆ ಜಿಲ್ಲೆಯ ಚಂದ್ರವಳ್ಳಿ ಮತ್ತು ಮೊಳಕಾಲ್ಮೂರಿನ ನುಂಕೆಮಲೆಯಲ್ಲಿ ಸಿಕ್ಕಿದ್ದರಿಂದ ಇವೆರಡೂ ನಡುವಿನ ಪ್ರಸ್ತುತ ಪ್ರದೇಶವೂ ಅವರ ಆಳ್ವಿಕೆಗೆ ಒಳಪಟ್ಟಿರಬಹುದೆಂದು ಊಹಿಸಬಹುದು. ಆದರೆ ಪ್ರಸ್ತುತ ಅಧ್ಯಯನ ಪರಿಸರದಲ್ಲಿ ಈ ಮನೆತನಕ್ಕೆ ಸೇರಿದ ಯಾವುದೇ ಶಾಸನಾಧಾರಗಳು ದೊರೆತಿರುವುದಿಲ್ಲ.

ಚಾಲುಕ್ಯರು

ಕದಂಬರ ತರುವಾಯ ಚಿತ್ರದುರ್ಗ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದವರೆಂದರೆ ಚಾಲುಕ್ಯರು. ಇವರು ಕ್ರಿ.ಶ. ೧೨ನೇ ಶತಮಾನದವರೆಗೂ ಆಳ್ವಿಕೆಯನ್ನು ನಡೆಸಿದ್ದಾರೆ. ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ನೊಳಂಬವಾದಿ ೩೨೦೦೦ ಪ್ರಾಂತ್ಯವೆಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಚಿತ್ರದುರ್ಗ ಜಿಲ್ಲೆಯ ಪ್ರದೇಶಗಳು ಚಾಲುಕ್ಯರಿಗೂ–ಪಲ್ಲವರಿಗೂ–ಚೋಳರಿಗೂ ಕಲಹಕ್ಕೆ ಕಾರಣವಾಗಿದ್ದವು. ಇದೇ ಅವಧಿಯಲ್ಲಿ ಚಾಲುಕ್ಯ ಅರಸರ ಸಾಮಂತರಾಗಿ ಈ ಪ್ರಾಂತ್ಯವನ್ನು ಆಳಿಕೊಂಡು ಹೋಗುತ್ತಿದ್ದ ಮುಖ್ಯ ಮನೆತನಗಳೆಂದರೆ ಹೆಂಜೇರಿನ ನೊಳಂಬರು (ಕ್ರಿ.ಶ. ೭೦೦–ಕ್ರಿ.ಶ.೧೦೫೦) ಮತ್ತು ಉಚ್ಚಂಗಿಯ ಪಾಂಡ್ಯರು (ಕ್ರಿ.ಶ. ೧೦೭೩–ಕ್ರಿ.ಶ. ೧೧೮೩).[೨೦] ೫ನೇ ವಿಕ್ರಮಾದಿತ್ಯನ ಅವಧಿಯಲ್ಲಿ ಈ ಪ್ರದೇಶದಲ್ಲಿ ಚೋಳರಸರು ದಕ್ಷಿಣ ಭಾರತದಲ್ಲಿ ತಮ್ಮ ಸಾರ್ವಭೌಮಾಧಿಕಾರವನ್ನು ಸ್ಥಾಪಿಸಿದ್ದರು. ರಾಜರಾಜ ಚೋಳನು ಗಂಗವಾಡಿ ಮತ್ತು ನೊಳಂಬವಾಡಿಗಳನ್ನು ಜಯಿಸಿದ್ದನು. ಚಳ್ಳಕೆರೆ ತಾಲ್ಲೂಕಿನಲ್ಲಿ ದೊರಕುವ ಎರಡು ಶಾಸನಗಳಿಂದ ೩ನೇ ಜಯಸಿಂಪನು ಕೊಡ್ಡಾ, ಶಿರಾ, ನೊಳಂಬವಾಡಿ, ಕದಂಬಳಿಗೆ ಮುಂತಾದ ಪ್ರಾಂತ್ಯಗಳನ್ನು ಆಳುತ್ತಿದ್ದನೆಂದು ತೋರುತ್ತದೆ. ಕ್ರಿ.ಶ. ೧೦೮೩ರಲ್ಲಿ ತ್ರಿಭುವನಮಲ್ಲ ಪಾಂಡ್ಯದೇವನು ನೊಳಂಬವಾಡಿಗೆ ಮಹಾಮಂಡೇಳ್ವರನಾಗಿದ್ದನೆಂದು ಶಿವಮೊಗ್ಗ ಜಿಲ್ಲೆಯ ಶಾಸನವೊಂದರಿಂದ ಗೊತ್ತಾಗುತ್ತದೆ.[೨೧] ಅದೇ ರೀತಿ ಕ್ರಿ.ಶ. ೧೧೫೫ ರಿಂದ ಕ್ರಿ.ಶ. ೧೧೮೫ರವರೆಗಿನ ಕಾಲಾವಧಿಯಲ್ಲಿ ವಿಜಯಪಾಂಡ್ಯನು ಮಹಾಮಂಡಲೇಶ್ವರನಾಗಿ, ಉಚ್ಚಂಗಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ನೊಳಂಬವಾಡಿಯನ್ನಾಳುತ್ತಿದ್ದನೆಂದು ಆ ಕಾಲದ ಶಾಸನಗಳಲ್ಲಿ ಹೇಳಲಾಗಿದೆ.[೨೨]

ರಾಷ್ಟ್ರಕೂಟರು

ಚಾಲುಕ್ಯರ ನಂತರ ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ರಾಷ್ಟ್ರಕೂಟರು ಗುಲಬರ್ಗಾ ಜಿಲ್ಲೆಯ ಮಳಖೇಡದಿಂದ ಆಡಳಿತ ನಿರ್ವಹಿಸಿದರು. ಇವರೂ ಸಹ ಚಾಲುಕ್ಯರಂತೆ ಉತ್ತಮ ಹಾಗೂ ದಕ್ಷ ಆಡಳಿತಗಾರರಾಗಿದ್ದು, ಚೋಳ, ಗಂಗ, ನೊಳಂಬರೊಂದಿಗೆ ವೈವಾಹಿಕ ಸಂಬಂಧಗಳನ್ನು ಹೊಂದಿದ್ದರು. ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ೩ನೇ ಗೋವಿಂದನ ಹಲವು ಶಾಸನಗಳು ದೊರೆಕಿವೆ. ಎರಡನೇ ಗೋವಿಂದನ ಕಾಲಕ್ಕೆ ಸೇರಿದ ಚಳ್ಳಕೆರೆಯ ಎರಡು (ಚಳ್ಳಕೆರೆ ೩೩–೩೪ ಶಾಸನಗಳು)[೨೩] ಶಾಸನಗಳಿಂದ ರಾಷ್ಟ್ರಕೂಟರ ಆಳ್ವಿಕೆ ದಕ್ಷಿಣದಲ್ಲಿ ವಿಶೇಷ ಪ್ರಭಾವವನ್ನು ಬೀರಿದ್ದಿದು ನಮಗೆ ಕಂಡುಬರುತ್ತದೆ.

ಚಳ್ಳಕೆರೆಯ ೩೩.೩೪ನೇ ಶಾಸನಗಳಲ್ಲಿ ನೊಳಂಬ ರಾಜನಾದ ಚಾರುಪೊನ್ನೇರನು ಜಗತ್ತುಂಗ ಪ್ರಭೂತವರ್ಷ ಗೋವಿಂದನ ಸಾಮಂತನಾಗಿ ಬಾಳಿದ್ದನ್ನು ಬರೆದಿದೆ. ಹೀಗಾಗಿ ಈ ಪ್ರದೇಶದಲ್ಲಿ ರಾಷ್ಟ್ರಕೂಟರ ಪರೋಕ್ಷ ಆಳ್ವಿಕೆಯನ್ನು ನಾವು ಗಮನಿಸಬೇಕು.

ನೊಳಂಬರು

ಪ್ರಸ್ತುತ ಪ್ರದೇಶದಲ್ಲಿ ಹಲವು ಶತಮಾನಗಳವರೆಗೆ ಗಂಗ, ಚಾಲುಕ್ಯ, ಚೋಳ ಮತ್ತು ಹೊಯ್ಸಳರ ಮಹಾಸಾಮಂತರಾಗಿ ಆಳಿದ ನೊಳಂಬರು ಅಪಾರ ಖ್ಯಾತಿವೆತ್ತ ಸಾಮಂತ ಕುಲದವರು. ಇವರು ಆಳುತ್ತಿದ್ದ ಈ ಜಿಲ್ಲೆಯ ಪ್ರದೇಶಗಳನ್ನೊಳಗೊಂಡ ಸೀಮೆಗೆ 'ನೊಳಂಬವಾಡಿ' ಅಥವಾ 'ನೊಳಂಬವಾಡಿ ೩೨೦೦೦' ನಾಡು ಎಂದು ಹೆಸರಿದ್ದಿತು.[೫೪] ಕ್ರಿ.ಶ. ೮ನೆಯ ಶತಮಾನದಲ್ಲಿ 'ನೊಳಂಬಾಳಿಗೆ ಸಾಸಿರ' ಎಂಬ ಚಿಕ್ಕ ಪ್ರಾಂತ್ಯದ ಅಧಿಪತಿಗಳಾಗಿ ಆಳ್ವಿಕೆ ಪ್ರಾರಂಭಿಸಿದರು. ಉತ್ತರದಲ್ಲಿ ಬಳ್ಳಾರಿ ಜಿಲ್ಲೆ, ಪೂರ್ವದಲ್ಲಿ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಆಗ್ನೇಯದಲ್ಲಿ ತುಮಕೂರು ಜಿಲ್ಲೆ, ನೈರುತ್ಯದಲ್ಲಿ ಚಿಕ್ಕಮಗಳೂರು ಜಿಲ್ಲೆ, ಪಶ್ಚಿಮದಲ್ಲಿ ಶಿವಮೊಗ್ಗ ಜಿಲ್ಲೆ, ಇವುಗಳ ನಡುವೆ ಚಿತ್ರದುರ್ಗ, ಹಿರಿಯೂರು, ಜಗಳೂರು, ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳನ್ನು ಒಳಗೊಂಡ ನೊಳಂಬ ಪ್ರಾಂತ್ಯವಿತ್ತು. ಚಳ್ಳಕೆರೆ ತಾಲ್ಲೂಕಿಗೆ ಸೇರಿದ ಚಿಕ್ಕಮಧುರೆ ಮತ್ತು ಹಿರೇಮಧುರೆ ಇವರ ಕಾಲದ ಪ್ರಮುಖ ಗ್ರಾಮಗಳಾಗಿದ್ದವು.[೫೫]

ಕ್ರಿ.ಶ. ೮೧೦ಕ್ಕೆ ಸಂಬಂಧಿಸಿದ ದೊಡ್ಡಉಳ್ಳಾರ್ಥಿ ಬಳಿಯಲ್ಲಿನ ಮೂರು ವೀರಗಲ್ಲುಗಳು ಸಿಂಹಪೋತಕಲಿ ನೊಳಂಬಾಡಿರಾಜನು ನೊಳಂಬವಾಡಿಯನ್ನು ಆಳುತ್ತಿದ್ದನೆಂದು ತಿಳಿಸುವವು. ಮೊದಲನೆಯ ವೀರಗಲ್ಲು ಶಾಸನ[೫೬] ಓರ್ವ ಮುಖಂಡನ ಸಾವನ್ನು ತಿಳಿಸುತ್ತದೆ. ಎರಡನೆಯ ವೀರಗಲ್ಲು ಶಾಸನ[೫೭] ಮಡಿದ ವೀರನ ಸಂಬಂಧಿಕರಿಗೆ ಭೂದತ್ತಿ ನೀಡಿದನ್ನು ತಿಳಿಸುತ್ತದೆ. ಮೂರನೆಯ ವೀರಗಲ್ಲು[೫೮] ಪೆರ್ಮಾಡಿ, ಪ್ರಾಯಶಃ ಗಂಗರಾಜ ಇಮ್ಮಡಿ ಶಿವಮಾರನು ದುಗ್ಗಮರಸಿನೊಂದಿಗೆ ಕ್ರೋಧ ತಾಳಿ ಆತನನ್ನು ಸೆದೆಬಡಿಯುವಂತೆ ಸಿಂಹಪೋತನಿಗೆ ಆಜ್ಞೆ ಮಾಡಿದುದನ್ನು, ಸಿಂಹಪೋತನು ಶಿವಮಾರನ ಆಜ್ಞೆಯಂತೆ ಹೋರಾಟ ನಡೆಸಿದುದನ್ನು ತಿಳಿಸುತ್ತದೆ.

ಚಳ್ಳಕೆರೆ ತಾಲ್ಲೂಕು ಹಿರೇಮಧುರೆ ಗ್ರಾಮದ ಕ್ರಿ.ಶ. ೮೫೦ ಸೇರಬಹುದಾದ ಶಿಥಿಲವಾದ ದಾನಶಾಸನ[೫೯] ಕೆರೆಯ ಉಸ್ತುವಾರಿಯನ್ನು ನೋಡಿಕೊಳ್ಳಲು ಭೂಮಿಯನ್ನು ದಾನ ಮಾಡಿ ರಕ್ಷಿಸುವಂತೆ ಹೇಳಿದೆ. ಕ್ರಿ.ಶ. ೮೯೫ರ ಕಾಲಕ್ಕೆ ಸಂಬಂಧಿಸಿದ ಚಿಕ್ಕಮಧುರೆ ಮಲ್ಲೇಶ್ವರ ದೇವಾಲಯದ ಪ್ರಾಂಗಣದಲ್ಲಿರುವ ಸ್ತಂಭಶಾಸನಗಳು ಸಿಂಹಾಪೋತನ ಮಗ ಪರಮೇಶ್ವರ ಪಲ್ಲವಧಿರಾಜ ಮತ್ತು ಅವನ ಮಗ ಪಲ್ಲವಮಲ್ಲ ಇವರು ರಾಷ್ಟ್ರಕೂಟರ ಸಾಮಂತರಾಗಿ ಕೆಲವು ನಾಡುಗಳ ಆಡಳಿತ ನಡೆಸುತ್ತಿದ್ದರೆಂದು ತಿಳಿಸುವುವು.[೬೦]

ಮಲ್ಲೇಶ್ವರ ದೇವಾಲಯದಲ್ಲಿರುವ ಮೊದಲನೆಯ ಸ್ತಂಭ ಶಾಸನವು[೬೧] ಜಗತ್ತುಂಗ ಪ್ರಭುವರ್ಷ ಪ್ರತಾಪವಲೋಪ ಶ್ರೀವಲ್ಲಭ ತನ್ನ ಚಕ್ರಾಧಿಪತ್ಯವಾನ್ನಾಳುತ್ತಿರಲು, ಪರಮೇಶ್ವರ ಪಲ್ಲವಾಧಿ ನೊಳಂಬಾಳಿಗೆ ೧೦೦೦ ಮತ್ತು ನಿರ್ಗುಂದ ೩೦೦ ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದು, ಪರಮೇಶ್ವರನ ರಾಣಿ ಗಾವನಗಬ್ಬೆ ಸಂಕ್ರಾಂತಿಯಂದು ವಿಷ್ಣುವನ್ನು ಭಜಿಸಿದುದನ್ನು ಮತ್ತು ನಾಗಮಾರಬ್ಬೆ (ಪ್ರಾಯಶಃ ಪರಮೇಶ್ವರನ ಮತ್ತೊಬ್ಬ ರಾಣಿ) ಶಿವಾಲಯಕ್ಕೆ ನೀಡಿದ ಭೂದತ್ತಿಯನ್ನು ತಿಳಿಸುವುದು. ಇದೇ ಶಾಸನದಿಂದ ಸಿಂಹಪೋತನ ಓರ್ವ ಮಗಳು (ಪರಮೇಶ್ವರ ಪಲ್ಲವರಾಜನ ಸೋದರಿ) ಗಂಗ ಪೆರ್ಮಾಡಿಯ ರಾಣಿಯಾಗಿದ್ದಳೆಂದು ತಿಳಿದುಬರುವುದು.[೬೨]

ಚಿಕ್ಕಮಧುರೆ ಮಲ್ಲೇಶ್ವರ ದೇವಾಲಯದ ಎರಡನೆಯ ಸ್ತಂಭಶಾಸನವು[೬೩] ಸಮಸ್ತ ಲೋಕಪ್ರಸಿದ್ಧಿ ಪಲ್ಲವಾಧಿ ರಾಜ ರಾಷ್ಟ್ರಕೂಟ ಮಹಾಸಾಮಂತನಾಗಿ ನೊಳಂಬಳಿಗೆ–೧೦೦೦, ನೀರ್ಗುಂದನಾಡು–೩೦೦, ಇರುಗಲ್ವಾಡಿ–೩೦೦, ಗಂಗವೂರು–೩೨, ನೆಲ್ಲಗುಂಡ–೧೨ ಆಳುತ್ತಿರುವಾಗ ಅವನ ಪ್ರಿಯತ್ಮಾಜ (ಮಗ) ಪಲ್ಲವಮಲ್ಲನು ಮದರಿಕಲ್ಲು, ತೊಣ್ಣೂರು, ಮಾಲ್ದೆ–೧೨, ಕೋಳೂರು–೧೨, ಗಂಗವೂರು–೩೦ ಆಳುತ್ತಿದ್ದ. ಆತನ ತಾಯಿ ಗಾವನಗಬ್ಬೆ ಮದರಿಕಲ್ಲಿನ ಗವಗಣೇಶ್ವರ ಎಂಬ ಶಿವಾಲಯವನ್ನು ಮಾಡಿಸಿ, ಆ ದೇವಾಲಯಕ್ಕೆ ಕಿರಿಯ ಮದರಿ ಕಲ್ಲಿನ ೧೨ ಮತ್ತರು ಸಾಗುವಳಿ ಭೂಮಿಯನ್ನು, ಎಂಟು ಮತ್ತರು ಭೂಮಿಯನ್ನು ದಾನ ಮಾಡಿರುವುದನ್ನು ಉಲ್ಲೇಖಿಸಿದೆ.

ಕ್ರಿ.ಶ. ೮೫೦ರ ಚಳ್ಳಕೆರೆ ತಾಲ್ಲೂಕಿನ ಶಾಸನವು[೬೪] ಪಲ್ಲವ ಚೋರ ಎಂಬ ರಾಜನ ವಿಷಯ ತಿಳಿಸುವುದು. ಈತನು ಹೆಂಜೇರುವಿನ ಶಾಸನದಲ್ಲಿ ತಿಳಿಸಿರುವ ಪೊಳಲ್ಚೋರ ನೊಳಂಬನೆಂಬುವುದರಲ್ಲಿ ಸಂಶಯವಿಲ್ಲ. ಮೇಲಿನ ವಿವರಗಳಿಂದ ನೊಳಂಬರು ಈ ಪ್ರದೇಶದಲ್ಲಿ ಅಧಿಪತ್ಯ ಸ್ಥಾಪಿಸಿದ್ದರೆಂದು ತಿಳಿದುಬರುತ್ತದೆ.

ಕಲ್ಯಾಣಿ ಚಾಲುಕ್ಯರು

ಕಲ್ಯಾಣಿ ಚಾಲುಕ್ಯರ ಆಳ್ವಿಕೆಯ ಆರಂಭದ ದಿನಗಳನ್ನು ಪರಿಚಯಿಸಿಕೊಳ್ಳಲು ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ಬಹುಮುಖ್ಯ ಆಕರಗಳಾಗಿವೆ. ಚಳ್ಳಕೆರೆ ತಾಲ್ಲೂಕಿನ ಮಹದೇವಪುರದ ಶಾಸನದ ಪಾಠ[೬೫] ಸರಿಯಾಗಿಲ್ಲದಿದ್ದರೂ ಅದು 'ತ್ರಿಭುವನ ಮಲ್ಲ'ನ ಹೆಸರನ್ನು ಉಲ್ಲೇಖಿಸಿದೆ ಮತ್ತು ಉಲ್ಲೇಖಿತ ಕಾಲವಾದ ಕ್ರಿ.ಶ. ೧೧೦೮ ಅವನ ಆಳ್ವಿಕೆಯ ಕಾಲಕ್ಕೆ ಸರಿಹೊಂದುತ್ತದೆ. ಈ ಶಾಸನದಲ್ಲಿ ಬರೆಯಲಾದ ಪುರವರಾಧೀಶ್ವರ ಕರಿಕಾಲ ಚೋಳಕುಲವನ್ನು ಹೆಸರಿಸಿ, ತ್ರಿಭುವನ ಮಲ್ಲ, ಮಲ್ಲದೇವ ಚೋಳ ಮಹಾರಾಜನು ಭಂಡಾರಿ ಕೇತಣನಿಗೆ ಮೂಲಿಗೆ ವೃತ್ತಿಯಾಗಿ ಕೊಟ್ಟ ವಿವರಗಳನ್ನು ದಾಖಲಿಸಿದೆ. ಅಂದರೆ ನೊಳಂಬ ಪಲ್ಲವರಲ್ಲದೆ, ಉಚ್ಚಂಗಿ ಪಾಂಡ್ಯರಲ್ಲದೇ ಮತ್ತೊಂದು ವಂಶದ (ಚೋಳ)ರ ಆಳ್ವಿಕೆಯೂ ಈ ಭಾಗದಲ್ಲಿತ್ತು ಎಂಬುದು ಗಮನಿಸಬೇಕಾದ ಪ್ರಮುಖ ಅಂಶವಾಗಿದೆ.[೬೬]

ಹೊಯ್ಸಳರು

ಕ್ರಿ.ಶ. ೧೧ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ ಹೊಯ್ಸಳರು ಕರ್ನಾಟಕದ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನವನ್ನು ಉಳಿಸಿಕೊಂಡು ಬಂದಿದ್ದಾರೆ. ಚಿತ್ರದುರ್ಗ ಜಿಲ್ಲೆಯಲ್ಲಿ ದೊರಕಿರುವ ಹೆಚ್ಚು ಶಾಸನಗಳು ಅವರ ಆಳ್ವಿಕೆಯನ್ನು ಸಮರ್ಥಿಸುತ್ತವೆ. ಹೊಯ್ಸಳರು ಚಾಲುಕ್ಯರ ಸಾಮಂತರಾಗಿದ್ದಾಗಲೇ ನೊಳಂಬವಾಡಿಯ ಮೇಲೆ ಅಪಾರ ಗಮನ ಹರಿದಿತ್ತು. ಕ್ರಿ.ಶ. ೧೨೧೦ರ ವೇಳೆಗೆ ಹೊಯ್ಸಳ ೩ನೇ ವೀರಬಲ್ಲಾಳನು ನೊಳಂಬವಾಡಿಯ ಪೂರ್ವ ಮತ್ತು ದಕ್ಷಿಣ ಭಾಗಗಳನ್ನು ಆಕ್ರಮಿಸಿದ್ದನು. ಶಾಸನಗಳ ಆಧಾರದಿಂದ ಹೊಯ್ಸಳರು ತಮ್ಮ ಆಳ್ವಿಕೆಯ ಅವಧಿಯಲ್ಲಿ ಇಡೀ ಜಿಲ್ಲೆಯನ್ನು ಆಕ್ರಮಿಸಿಕೊಂಡಿದ್ದು, ಇಲ್ಲಿ ಆಳ್ವಿಕೆ ನಡೆಸಿದರೆಂದು ತಿಳಿದು ಬರುತ್ತದೆ. ಹೀಗಾಗಿ ಪ್ರಸ್ತುತ ಪ್ರದೇಶವೂ ಕೂಡ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯಲಾಗಿದೆ.

ಹೊಳಲ್ಕೆರೆಯಲ್ಲಿ ಸಿಕ್ಕಿರುವ ಹಿರೇಎಮ್ಮಿಗನೂರು ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನ[೧೭] ಈ ಪ್ರದೇಶದಲ್ಲಿ ಆಳಿದ ಚಾಲುಕ್ಯರನ್ನು, ಕಳಚೂರ್ಯರರನ್ನು, ಪಾಂಡ್ಯರನ್ನು ಸಂಬೋಧಿಸಿ ಪಾಂಡ್ಯರ ಅಧೀನದಲ್ಲಿದ್ದ ನೊಳಂಬವಾಡಿ ೩೨೦೦೦ವನ್ನು ಹೋರಾಟದಲ್ಲಿ ಇಮ್ಮಡಿ ಬಲ್ಲಾಳನು (ಕ್ರಿ.ಶ. ೧೨೨೦) ಗೆದ್ದುಕೊಂಡನೆಂದು ತಿಳಿಸುತ್ತದೆ. ಅದೇ ರೀತಿ ಹೊಯ್ಸಳರಿಗೆ ಸೇರಿದ ಬೇರೆ ಬೇರೆ ಪ್ರದೇಶಗಳ ಶಾಸನಗಳು ನೊಳಂಬವಾಡಿ ೩೨೦೦೦ ಅವರ ಆಳ್ವಿಕೆಗೆ ಒಳಪಟ್ಟಿದ್ದನ್ನು ದೃಢಪಡಿಸುತ್ತವೆ.

ಈ ಮಧ್ಯೆ ಚಿತ್ರದುರ್ಗ ಜಿಲ್ಲೆಯ ವಿವಿಧ ಪ್ರದೇಶಗಳಲ್ಲಿ ಸಾಮಂತ ಮನೆತನಗಳಾದ ಗಂಗರು, ಸಿಂಧರು, ಚೋಳರು ಕ್ರಿ.ಶ. ೭೫೦ರಿಂದ ೧೨೦೦ರವರೆಗೆ ಆಳ್ವಿಕೆ ಮಾಡಿರುವುದು ಶಾಸನಗಳಲ್ಲಿ ಕಂಡುಬರುತ್ತದೆ.[೧೮] ಇದಕ್ಕೆ ಪುರಾವೆಯಾಗಿ ಚೋಳರಿಗೆ ಸಂಬಂಧಿಸಿದ ಕೆಲವು ಶಾಸನಗಳು ಚಳ್ಳಕೆರೆ ತಾಲ್ಲೂಕು[೧೯] ಪ್ರದೇಶದಲ್ಲಿ ದೊರೆತಿವೆ.

ವಿಜಯನಗರ ಸಾಮ್ರಾಜ್ಯ

ಹೊಯ್ಸಳರ ನಂತರ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಕ್ರಿ.ಶ.೧೩೩೬ರಿಂದ ಕ್ರಿ.ಶ. ೧೫೬೫ರವರೆಗೆ ಸುಮಾರು ೨೨೯ ವರ್ಷಗಳ ಕಾಲ ಕರ್ನಾಟಕದಲ್ಲಿ ಆಳ್ವಿಕೆಯನ್ನು ನಡೆಸಿತು. ಮುಸ್ಲಿಂ ದಾಳಿಗಳಿಂದ ಜರ್ಝರಿತವಾಗಿದ್ದ ಹಿಂದೂ ಧರ್ಮದ ಶ್ರೀರಕ್ಷೆಯಾಗಿ ಉದಯವಾದ ಕಟ್ಟಕಡೆಯ ಹಿಂದೂ ಸಾಮ್ರಾಜ್ಯವಾಗಿದೆ. ವಿಜಯನಗರದ ಅರಸರು ಚಿತ್ರದುರ್ಗ ಪ್ರದೇಶವನ್ನು ತಮ್ಮ ರಾಜ್ಯದ ಒಂದು ಭಾಗವನ್ನಾಗಿಸಿಕೊಂಡು ಆಡಳಿತ ನಡೆಸಿದರು. ಈ ಭಾಗವು ವಿಜಯನಗರದ ಆಸೆ ಆಕಾಂಕ್ಷೆ ಹಾಗೂ ಧ್ಯೆಯೋದ್ದೇಶಗಳನ್ನು ಪೂರೈಸುವ ಬಹುಮುಖ್ಯ ಘಟಕವಾಗಿತ್ತು. ಕಾರಣವೆಂದರೆ ವಿಜಯನಗರದ ಅರಸರು ತಮ್ಮ ಸಾಮ್ರಾಜ್ಯವನ್ನು ಹೆಚ್ಚಾಗಿ ದಕ್ಷಿಣ ಭಾರತದಲ್ಲಿ ವಿಸ್ತರಿಸಿದರು.

ಈ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಮೇಲೆ ವಿಜಯನಗರದ ಅರಸರು ನೇರವಾಗಿಯೂ ಮತ್ತು ಪರೋಕ್ಷವಾಗಿಯೂ ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರು. ಇಲ್ಲಿ ಅವರ ಆಡಳಿತ ಕೇಂದ್ರ ಬೆಮ್ಮತ್ತನಕಲ್ಲು (ಚಿತ್ರದುರ್ಗ) ಆಗಿದ್ದಿತು. ೧೩೫೫ ಮತ್ತು ೧೩೫೬ರ ಶಾಸನಗಳು ವಿಜಯನಗರ ಸಾಮ್ರಾಜ್ಯದ ಪ್ರತಿನಿಧಿ ಮಲ್ಲಿನಾಥ ಒಡೆಯನೆಂಬುವವನು ಬೆಮ್ಮತ್ತನಕಲ್ಲನ್ನು ಕೇಂದ್ರವನ್ನಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದನೆಂಬುದನ್ನು ಸೂಚಿಸುತ್ತವೆ.[೨೦] ವಿಜಯನಗರದ ಅರಸರು ಈ ಪ್ರದೇಶವನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡು ಸಾಮ್ರಾಜ್ಯವನ್ನು ರಾಜ್ಯ, ವಳಿತ, ವೇಂಟೆ, ನಾಡು, ಸೀಮೆ, ಚಾವಡಿ, ಮಾಗಣಿ, ಸಂಮಿತ್ತ, ಹೋಬಳಿ, ಕಸುಬೆ ಮುಂತಾದ ಪ್ರಾದೇಶಿಕ ವಿಭಾಗಗಳನ್ನು ಸ್ಥಾಪಿಸಿಕೊಂಡು ಆಳ್ವಿಕೆ ನಡೆಸಿದ್ದರೆಂಬುದನ್ನು ಈ ಪ್ರದೇಶದಲ್ಲಿ ದೊರೆತ ಅವರ ಶಾಸನಗಳಿಂದ ತಿಳಿಯಬಹುದಾಗಿದೆ.[೨೧] ವಿಜಯನಗರದ ಕಾಲಾವಧಿಯಲ್ಲಿ ಈ ಪ್ರದೇಶದಲ್ಲಿ ಸ್ಥಳೀಯ ಸಂಸ್ಥೆಗಳು ಜೀವಂತವಾಗಿದ್ದವು. ಅಗ್ರಹಾರ ಮತ್ತು ಮಹಾನಾಡು ಎಂಬ ಸ್ಥಳೀಯ ಸಂಸ್ಥೆಗಳು ಅಸ್ತಿತ್ವದಲ್ಲಿದ್ದವೆಂಬುದಕ್ಕೆ ಶಾಸನಗಳ ಆಧಾರವಿದೆ. ಆದ್ದರಿಂದ ಪ್ರಸ್ತುತ ಅಧ್ಯಯನ

ಪ್ರದೇಶವೂ ಈ ಜಿಲ್ಲೆಯಲ್ಲೇ ಬರುವುದರಿಂದ ಇಲ್ಲಿ ವಿಜಯನಗರದ ಆಳ್ವಿಕೆ ಏರ್ಪಟ್ಟಿತ್ತೆಂದು ತಿಳಿದುಬರುತ್ತದೆ.

ವಿಜಯನಗರದ ಕಾಲದ ಶಾಸನಗಳಲ್ಲಿ ಕೆಲವು ಮಾತ್ರ ಚಾರಿತ್ರಿಕ ಪ್ರಾಮುಖ್ಯತೆ ಪಡೆದಿದ್ದರೂ ಸಹ ಉಳಿದ ಶಾಸನಗಳಲ್ಲವೂ ಭೂಮಿ, ಗ್ರಾಮಗಳನ್ನು ದಾನವಾಗಿ ನೀಡಿದ್ದನ್ನೋ, ಕೆಲವು ಜಾತಿಯವರಿಗೆ ತೆರಿಗೆ ಕಂದಾಯವನ್ನು ಮಾಫಿ ಮಾಡಿದನ್ನೋ ತಿಳಿಸುತ್ತವೆ. ೧೫ ಮತ್ತು ೧೬ನೇ ಶತಮಾನಗಳಲ್ಲಿ ವಿಜಯನಗರದ ಅರಸರು ತಮ್ಮ ಆಶ್ರಯದಲ್ಲಿದ್ದ ಅಧಿಕಾರಿಗಳಿಗೆ ಮತ್ತು ಸಾಮಂತ ಪಾಳೆಯಗಾರರಿಗೂ ಭೂಪ್ರದೇಶಗಳನ್ನು, ಗ್ರಾಮಗಳನ್ನು ಉಂಬಳಿ ನೀಡಿದ್ದಲ್ಲದೇ ವಿವಿಧ ಬಿರುದು ಬಾವಲಿಗಳನ್ನು ನೀಡಿದ್ದರು. ಆಯಾ ಅಧಿಕಾರಿಗಳು ಸಲ್ಲಿಸಿದ ಸೇವೆಯನ್ನು ಗುರುತಿಸಿ ಅವರಿಗೆ ಆಯಾ ಪ್ರದೇಶಗಳ ಆಳ್ವಿಕೆಯನ್ನು ನೀಡಿದರು.

ಪಾಳೆಯಗಾರರು

ಪ್ರಾಚೀನ ಭಾರತದಲ್ಲಿ ದಕ್ಷಿಣಾಪಥದ ಪ್ರಸ್ಥಭೂಮಿಯಲ್ಲಿ ಚಿಕ್ಕಪುಟ್ಟ ಬಣಗಳ ನಾಯಕರು ಪಾಳೆಯಗಾರರೆಂಬ ಹೆಸರಿನಿಂದ ಅಲ್ಲಲ್ಲಿ ಅರಸರೆನಿಸಿಕೊಂಡಿದ್ದರು. ಈ ಪಾಳೆಯಗಾರರು ಪಶುಪಾಲನೆ ಮಾಡುತ್ತಾ ತಮ್ಮದೇ ಆದ ಗುಂಪುಗಳನ್ನು ಕಟ್ಟಿಕೊಂಡು ಬದುಕುತ್ತಿದ್ದ ಇವರು ಮೂಲತಃ ಮ್ಯಾಸಬೇಡರಾಗಿದ್ದರು. ಅರಣ್ಯ ಪ್ರದೇಶದಲ್ಲಿ ವಾಸಮಾಡುತ್ತಿದ್ದ ಇವರು ಸಹಜವಾಗಿಯೇ ಧೈರ್ಯವಂತರೂ, ದೃಢಕಾಯರೂ ಆಗಿದ್ದರು. ಇಂಥವರನ್ನು ರಾಜ ಮಹಾರಾಜರು ಒಂದು ಕಡೆ ನಿಲ್ಲಿಸಿ ಪಾಳೆಯಪಟ್ಟುಗಳನ್ನು ನಿರ್ಮಿಸಿಕೊಟ್ಟು ತಮ್ಮ ಸಹಾಯಕ್ಕೆ ಬಳಸಿಕೊಂಡಿರುವದನ್ನು ಕಾಣುತ್ತೇವೆ.[೨೨] 'ಪಾಳೆಯ" ಎಂಬ ಪದ ದಂಡು, ಸೈನ್ಯ, ಸೇನಾ ವಿಭಾಗ, ಶಿಬಿರ, ಠಾಣೆ ಎಂಬ ವಿವಿಧ ಅರ್ಥವನ್ನು ಸೂಚಿಸುತ್ತದೆ. ಇವುಗಳ ಮುಖ್ಯಸ್ಥರೇ ಪಾಳೆಯಗಾರರು.[೨೩] ಇವರು ಚಿಕ್ಕ ಚಿಕ್ಕ ಪ್ರಾಂತ್ಯಗಳಲ್ಲಿ ಪ್ರಬಲರಾಗಿ ದೊರೆಗಳಂತೆ ಆಳ್ವಿಕೆ ನಡೆಸಿದರು. ಜನರಿಂದ ಕಂದಾಯ, ಕಾಣಿಕೆ ಮೊದಲಾದವುಗಳನ್ನು ತೆಗೆದುಕೊಳ್ಳುತ್ತಾ, ದುಷ್ಟರನ್ನು ನಿಗ್ರಹಿಸುತ್ತಾ, ಸಮುದಾಯವನ್ನು ಕಾಪಾಡುತ್ತಿದ್ದ ಮುಖಂಡರನ್ನು ಪಾಳೆಯಗಾರರು ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ತಿಳಿದುಬರುತ್ತದೆ.[೨೪]

ಹರತಿ ಪಾಳೆಯಗಾರರು

ಶಾಸನಗಳು ವ್ಯಕ್ತಪಡಿಸುವಂತೆ ಚಿತ್ರದುರ್ಗದ ಪಾಳೆಯಗಾರರಿಗಿಂತ ಮೊದಲೇ ರಾಯದುರ್ಗ, ಹರತಿ ಪಾಳೆಯಗಾರರು ಈ ಜಿಲ್ಲೆಯ ಕೆಲವು ಪ್ರದೇಶಗಳ ಮೇಲೆ ತಮ್ಮ ಆಳ್ವಿಕೆ ಸ್ಥಾಪಿಸಿದ್ದರು. ಚಿತ್ರದುರ್ಗದ ಪಾಳೆಯಗಾರರು ಇಲ್ಲಿ ನೆಲಸಿದ ನಂತರ (ಕ್ರಿ.ಶ. 1556) ಸಂತೆಬೆನ್ನೂರು, ಹಟ್ಟಿ, ಮತ್ತಿನಾಡು ಪಾಳೆಯಗಾರರು ಈ ಜಿಲ್ಲೆಯ ಕೆಲವು ಭಾಗಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಆಳ್ವಿಕೆ ನಡೆಸಿದರು. ಈ ಮನೆತನದ ಶಾಸನಗಳು ಶಕ 1235 (ಕ್ರಿ.ಶ.1313) ರಿಂದ ಶಕ 1660 (ಕ್ರಿ.ಶ.1738) ರವರೆಗೆ ಚಳ್ಳಕೆರೆಯಲ್ಲಿ ದೊರೆತಿದ್ದು, ಈ ಮನೆತನದ ನಾಯಕರ ಬಗ್ಗೆ ರಾಜಕೀಯ,

ಆಡಳಿತಾತ್ಮಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಾಧನೆಗಳಿಗೆ ಸಂಬಂಧಿಸಿದಂತೆ ಅಮೂಲ್ಯವಾದ ಮಾಹಿತಿಯನ್ನು ನೀಡುತ್ತವೆ.

ಚಳ್ಳಕೆರೆ ಶಾಸನದ[75] ಪ್ರಕಾರ ತಿಪ್ಪರಾಜನ ಮಗ ಕಾಮನಾಯಕ, ಅವನ ಹಿರಿಯ ಮಗ ಅಬ್ಬಯನಾಯಕನು ಕೋಟೆಕೆರೆ ಎಂಬಲ್ಲಿ ನೆಲೆವೀಡನ್ನು ಹೊಂದಿದ್ದನಾದ್ದರಿಂದ ಇವನನ್ನು ಕೋಟಿಕೆರೆಯ ಅಬ್ಬಯನಾಯಕನೆಂದೇ ಕರೆಯಲಾಗುತ್ತಿದ್ದಿತು. ಇವನು ವಿಜಯನಗರದ ದೊರೆ ವೀರ ಹರಿಹರನ ಸಮಕಾಲನಾಗಿದ್ದನು. ಕಾಮನಾಯಕನ ಕಿರಿಯಮಗ ಮಲ್ಲೆಯನಾಯಕನು ಪರುಶುರಾಮಪುರದಲ್ಲಿ ನೆಲೆಸಿ, ಅಲ್ಲಿನ ಗರುಡದೇವರನ್ನೂ ಹನುಮಂತದೇವರನ್ನೂ ಪ್ರತಿಷ್ಠಾಪಿಸಿದನೆಂದು ವಿವರಣೆ ನೀಡುತ್ತದೆ. ಈ ವಂಶಜರು ಬಿಜಾಪುರ ಪ್ರಾಂತ್ಯದ ದೊಡ್ಡೇರಿ, ಹರತಿ ಪ್ರದೇಶಗಳಲ್ಲಿ ನೆಲೆಸಿದ್ದು, ನಂತರ ತಿಪ್ಪಣ್ಣನಾಯಕನು ಚಿತ್ರದುರ್ಗ ಜಿಲ್ಲೆಯ ಪೂರ್ವ ಭಾಗಕ್ಕೆ ಮಾಂಡಲೀಕನಾಗಿ ನೇಮಕಗೊಂಡನು.

ಈ ನಾಯಕನು ಮಾಚಿಸಮುದ್ರ ಗೋಸಿಕೆರೆ, ಚಳ್ಳಕೆರೆ ಪ್ರಾಂತ್ಯಗಳ ಆಡಳಿತ ವಹಿಸಿಕೊಂಡು, ಈ ಪ್ರದೇಶದಲ್ಲಿದ್ದ ಕಾಡನ್ನು ಸವರಿ ಅಲ್ಲಿ ತನ್ನ ಪೂರ್ವಜರ ನೆನಪಿಗಾಗಿ ಎರಡು ಪಟ್ಟಣಗಳನ್ನು ಕಟ್ಟಿಸಿದನು. ಇವುಗಳಿಗೆ ದೊಡ್ಡೇರಿ ಮತ್ತು ಹರತಿ ಎಂದೇ ನಾಮಕರಣ ಮಾಡಿದನು. ಈತನ ಪ್ರಾಂತ್ಯವು ಚಿತ್ರದುರ್ಗದಿಂದ ಪಾವಗಡದವರೆಗೂ, ಮೊಳಕಾಲ್ಮೂರಿನಿಂದ ಶಿರಾ ಪ್ರಾಂತ್ಯದವರೆಗೂ ವಿಸ್ತರಿಸಿತ್ತು.[೭೬]

ತಿಪ್ಪಣ್ಣನಾಯಕನು ಸಾಯುವ ಮುನ್ನ ತನ್ನ ಪ್ರಾಂತ್ಯವನ್ನು ತನ್ನ ಏಳು ಜನ ಮಕ್ಕಳಿಗೆ ಹಂಚಿದ್ದನು. ಏಳು ಜನರಲ್ಲಿ ಒಬ್ಬನಾದ ತಿಮ್ಮಣ್ಣನಾಯಕನೆಂಬುವನು ತಾನು ಆಳುತ್ತಿದ್ದ ದೊಡ್ಡೇರಿ ಸೀಮೆಯನ್ನು ಹೋರಾಟದಲ್ಲಿ ಕಳೆದುಕೊಂಡನು. ನಂತರ ಅವನು ಧೃತಿಗೆಡದೆ ನಿಡುಗಲ್ಲು ಬೆಟ್ಟವನ್ನಾಶ್ರಯಿಸಿ, ಅಲ್ಲಿ ಕೋಟೆ ಕಟ್ಟಿಸಿ ನೆಲೆಸಿದನು. ನಂತರ ಇವರು ನಿಡುಗಲ್ಲಿನಲ್ಲೇ ನೆಲೆಸಿ ಸಿರಾ ಪಾಳೆಯಗಾರರ ಅಧೀನ ಸಾಮಂತರೆನಿಸಿದರು. ಅಂದಿನಿಂದ ಇವರನ್ನು ಹರತಿ–ನಿಡುಗಲ್ಲು ಪಾಳೆಯಗಾರರೆಂದು ಕರೆಯಲು ಆರಂಭವಾಯಿತು.[೭೭] ಇವರಿಗೆ ಸಂಬಂಧಿಸಿದ ಶಾಸನಗಳು ಚಳ್ಳಕೆರೆ ಪ್ರದೇಶದಲ್ಲಿ ದೊರಕಿದ್ದು, ಈ ಪ್ರದೇಶದ ಮೇಲೆ ಅವರು ಸ್ಥಾಪಿಸಿದ್ದ ಅಧಿಕಾರದ ದ್ಯೋತಕಗಳನೆಸಿವೆ.

ಇವರ ಕುರಿತು ಚಳ್ಳಕೆರೆಯ ಶಾಸನದಿಂದ[೭೮] (ಕ್ರಿ.ಶ. ೧೭೮೯) ಆಪಸ್ತಂಭ ಸೂತ್ರ ಮತ್ತು ಆತ್ರೇಯ ಗೋತ್ರದವರೆಂತಲೂ ತಿಳಿದುಬರುತ್ತದೆ. ಇನ್ನೊಂದು ಶಾಸನ ಇವರ ವಂಶಾವಳಿಯನ್ನು ಉಲ್ಲೇಖಿಸಿದೆ. ಇವರು ದೈವಭಕ್ತಿ ಸಂಪನ್ನರು, ವಿದ್ಯಾಭಿಮಾನಿಗಳೂ ಆಗಿದ್ದರೆಂಬುದಕ್ಕೆ ದೇವಾಲಯಗಳಿಗೂ, ಅಗ್ರಹಾರಗಳಿಗೂ ದತ್ತಿ ನೀಡಿದ ಬಗ್ಗೆ ಬರೆಸಿರುವ ಶಾಸನಗಳು ಸಾಕ್ಷಿಯೆನಿಸಿವೆ.[೭೯] ಈ ಪರಿಸರಕ್ಕೆ ಸೇರಿದ ದೊಡ್ಡೇರಿ ಸೀಮೆ, ಗೋಸಿಕೆರೆ ಸೀಮೆಯು ಇವರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಎರ್ರಕೃಷ್ಣಪ್ಪನಾಯಕನ ಮಗ ಇಮ್ಮಡಿ ಕೃಷ್ಣಪ್ಪನು ಕಾಮಸಮುದ್ರದ ವೀರಭದ್ರ ದೇವರ ಪೂಜೆಗಾಗಿ ಗದ್ದೆಯನ್ನು ನೀಡಿದ ವಿವರಣೆಯನ್ನು ಚಳ್ಳಕೆರೆ ಶಾಸನ[೮೦] ತಿಳಿಸುತ್ತದೆ.

ಹಟ್ಟಿ (ನಾಯಕನ ಹಟ್ಟಿ) ಪಾಳೆಯಗಾರರು:

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ಮತ್ತು ಚಳ್ಳಕೆರೆ ತಾಲ್ಲೂಕುಗಳಲ್ಲಿ ಆಳ್ವಿಕೆ ನಡೆಸಿದ ಹಟ್ಟಿ ಪಾಳೆಯಗಾರರು ನಾಯಕನ ಹಟ್ಟಿಯನ್ನು ತಮ್ಮ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಹಿಂದೆ ಈ ಊರನ್ನು ಕಟ್ಟಿಸಿದವನು ಕೋಟೆ ಮಲ್ಲನಾಯಕನೆಂಬುವವನು. ಇವರ ಚರಿತ್ರೆ ಕುರಿತು ನಮಗೆ ಮುಖ್ಯವಾಗಿ ಲಭ್ಯವಿರುವ ಆಧಾರಗಳೆಂದರೆ ನಾಯಕನ ಹಟ್ಟಿ ದೊರೆಗಳ ವಂಶಾವಳಿ, ನಾಯಕನ ಹಟ್ಟಿಯ ತಾಮ್ರ ಶಾಸನ ಮತ್ತು ಗೌಡಗೆರೆಯ ಶಿಲಾಶಾಸನ. ಇವರ ವಂಶಾವಳಿಯು ಹಟ್ಟಿನಾಯಕ ಮನೆತನದ ಸ್ಥಾಪಕನಾದ ಮಲ್ಲಯ್ಯ ಮತ್ತು ಅವನ ವಂಶದವರ ಬಗೆಗೆ, ೧೪ನೇ ಶತಮಾನದಿಂದ ೧೮ನೇ ಶತಮಾನದ ಕೊನೆಯವರೆಗೆ ಪ್ರಮುಖ ಘಟನೆಗಳ ವಿವರಣೆಗಳನ್ನು ನೀಡುತ್ತದೆ. ಈ ವಂಶದ ಕೊನೆಯ ನಾಯಕ ಬಂಗಾರಮಲ್ಲಪ್ಪನಾಯಕ ಕ್ರಿ.ಶ. ೧೭೯೯ರಲ್ಲಿ ದೊಡ್ಡ ಮದಕರಿನಾಯಕನೊಂದಿಗೆ ಕಲ್ಲಿಕೋಟೆಯನ್ನು ಆಕ್ರಮಿಸಲಿಕ್ಕೆ ಹೋಗಿ ಅವನು ಅಲ್ಲಿಯೇ ಮರಣ ಹೊಂದಿದ್ದನ್ನು ತಿಳಿಸುತ್ತದೆ.[೮೧]

ನಾಯಕನಹಟ್ಟಿಯ ತಾಮ್ರ ಶಾಸನವು ತೆಲುಗು ಭಾಷೆ ಕನ್ನಡ ಲಿಪಿಯಲ್ಲಿದ್ದು ಹದಿಮೂರು ಸಾಲಿನ ದಾನಶಾಸನವಾಗಿದೆ. ಇದರ ಕಾಲ ಕ್ರಿ.ಶ. ೧೬೫೯. ವಿಜಯನಗರದ ಅರಸರ ಮೊಹರನ್ನು ಒಳಗೊಂಡಿರುವ ಈ ಶಾಸನ ಕೋದಂಡ ರಾಜು, ರಾಮರಾಜು, ತಿರುಮಲ ರಾಜು, ಇವರುಗಳು ದೊಡ್ಡ ಮಲ್ಲಪ್ಪನಾಯಕನಿಗೆ ಉಂಬಳಿಯಾಗಿ ಕೊಟ್ಟ ಕಮಲಾಪುರದ ಹತ್ತಿರದ ಹಳ್ಳಿಗಳ ಮತ್ತು ಗದ್ದೆಯ ಬಗ್ಗೆ ವಿವರ ನೀಡುತ್ತದೆ.[೮೨]

ಕೋಟೆ ಮಲ್ಲನಾಯಕನ ನಂತರ ಜೋಡಿಮಲ್ಲಪ್ಪನಾಯಕನು ಆಳ್ವಿಕೆಯನ್ನು ವಹಿಸಿಕೊಂಡನು. ಇವನೇ ರಾಮದುರ್ಗದ ಗುಹಾಂತರ ದೇವಾಲಯದ ನಿರ್ಮಾತೃ. ನಂತರ ಮಲ್ಲಪ್ಪನಾಯಕನು ಆಡಳಿತಕ್ಕೆ ಬಂದಿದುದರ ಬಗ್ಗೆ ಅವರ ವಂಶಾವಳಿ ತಿಳಿಸುತ್ತದೆ.

ತಿಮ್ಮಯ್ಯನಹಳ್ಳಿ ಮಠದ ರಾಮಒಡೆಯರ ಮಗ ಜಂಗಮ ಚೆನ್ನಯ್ಯನಿಗೆ ಭೂದತ್ತಿ ಹಾಗೂ ಮುತ್ತೇಗೌಡನೆಂಬ ಶ್ಯಾನುಭೋಗ (ಸೇನಬೋವ) ಮತ್ತು ೧೨ ಜನ ಆಯಗಾರರ ಬಗ್ಗೆಯೂ ಈ ಶಾಸನ[೮೩] ತಿಳಿಸುತ್ತದೆ. ಈ ಮೇಲಿನಂತೆ ಚಳ್ಳಕೆರೆ ತಾಲ್ಲೂಕು ಪ್ರದೇಶದಲ್ಲಿ ದೊರಕಿರುವ ಪಾಳೆಯಗಾರರ ಶಾಸನಗಳು ಸಂಖ್ಯೆಯಲ್ಲಿ ಕಡಿಮೆಯಾದ್ದರೂ ಅಂದಿನ ರಾಜಕೀಯ, ಸಾಮಾಜಿಕ ಮತ್ತು ನ್ಯಾಯ ಪದ್ಧತಿಗಳನ್ನು ತಿಳಿಸುವ ಬಹುಮುಖ್ಯ ಆಕರಗಳೆಸಿವೆ.

ಅಡಿಟಿಪ್ಪಣಿಗಳು

1. Sri Sathyan B.N: Mysore state Gazetteer, Chitradurga district, The Govt. press, Bangalore, P-390, 1967
೨. ಲೋಕೋಪಯೋಗಿ ಇಲಾಖೆಯು ಸಿದ್ಧಪಡಿಸಿದ ನಕ್ಷೆ: ಚಳ್ಳಕೆರೆ, ೨೦೦೯
೩. ಚಿತ್ರದುರ್ಗ ಜಿಲ್ಲಾ ಅಂಕಿ ಅಂಶಗಳ ನೋಟ: ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಯವರ ಕಛೇರಿ, ಚಿತ್ರದುರ್ಗ, ಪು-೫,
೪. ಅದೇ: ಪು-೫,
೫. ಅದೇ: ಪು-೧೧
೬. ಅದೇ: ಪು-೧೨
೭. ಅದೇ: ಪು-೬೦
೮. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ೨೦೦೪, ಮೈಸೂರು ವಿ.ವಿ., ಮೈಸೂರು, ಪು-೯೦೦
೯. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂರ್ವೋಕ್ತ, ಪು-೯೦೦
೧೦. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂರ್ವೋಕ್ತ, ಪು-೯೦೦
೧೧. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂರ್ವೋಕ್ತ, ಪು-೯೦೦
೧೨. ನಂಜಣ್ಣನವರ .ಎಸ್.ಎಸ್: ೨೦೦೨, ಮಾನವ ಭೂಗೋಳಶಾಸ್ತ್ರ, ಪು-೧
೧೩. ಸಮಾಜ ವಿಜ್ಞಾನ ಪ್ರಯೋನಿಧಿ ಎಂಟರ್ ಪ್ರೈ. ಲಿಮಿಟೆಡ್, ಬೆಂಗಳೂರು, ಪು-೧೪
೧೪. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂವೋಕ್ತ, ಪು-೯೦೦
೧೫. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂವೋಕ್ತ, ಪು-೯೦೦
೧೬. ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಪೂವೋಕ್ತ, ಪು-೯೦೦
೧೭. ಗಿರಿಜಾ .ಟಿ : ೧೯೯೧, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು-೧೪೧
೧೮. ಶಿವತಾರಕ್ .ಕೆ.ಬಿ: ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕ ಕುರುಹುಗಳ ಸಾಂಸ್ಕೃತಿಕ ಅದ್ಯಯನ, ಪು-೨
೧೯. ಶಿವತಾರಕ್ .ಕೆ.ಬಿ: ಪೂರ್ವೋಕ್ತ, ಪು-೨
೨೦. ಶಿವತಾರಕ್ .ಕೆ.ಬಿ: ಜಯಮಂಗಳ ಸ್ಮರಣ ಸಂಚಿಕೆ, ತುಮಕೂರು ಜಿಲ್ಲೆಯ ಪ್ರಾಗಿತಿಹಾಸ, ಪು-೬
೨೧. ಶಿವರುದ್ರಪ್ಪ .ಜಿ.ವಿ : ೧೯೮೭, ಚಿತ್ರದುರ್ಗ ಜಲ್ಲೆಯ ಭೂ ಇತಿಹಾಸ, ಹರತಿ ಸರಿ, ಲಕ್ಷ್ಮಣ್ ತೆಲಗಾವಿ(ಸಂ) ಪು-೫೭೫

೨೨. ರಾಮದಾಸರೆಡ್ಡಿ .ಎಸ್.ಜಿ: ೨೦೦೯, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ. ಪು–೮೧

೨೩. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೩೮

೨೪. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೫೪

೨೫. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೧೪

೨೬. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೬೩

೨೭. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೬೯

೨೮. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೩೮

೨೯. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೮೭

೩೦. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೧೪೨

೩೧. ಕ್ಷೇತ್ರ ಕಾರ್ಯದಲ್ಲಿ ಲಭ್ಯವಾದ ಶಿಲಾಯುಧಗಳ ಆಧಾರದಿಂದ

೩೨. ಶಿವತಾರಕ್ .ಕೆ.ಬಿ: ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಕ.ವಿ.ವಿ, ಹಂಪಿ, ವಿದ್ಯಾರಣ್ಯ ಪು–೨೫೯

೩೩. ತಿಪ್ಪೇಸ್ವಾಮಿ .ಎಸ್: ೨೦೦೪, ರಕ್ಷಣಾ ವಾಸ್ತುಶಿಲ್ಪ ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಮಹಾಪ್ರಬಂಧ, ಕ.ವಿ.ವಿ. ಹಂಪಿ, ವಿದ್ಯಾರಣ್ಯ), ಪು–೨೪

೩೪. ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಶಿಲಾಯುಧಗಳ ಆಧಾರದಿಂದ

೩೫. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೧೪೨

೩೬. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೮೨

೩೭. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೪೩

೩೮. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೭೦

೩೯. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೧೮

೪೦. ರಾಮದಾಸರೆಡ್ಡಿ .ಎಸ್.ಜಿ: ಪೂರ್ವೋಕ್ತ, ಪು–೫೯

೪೧. ತಿಪ್ಪೇಸ್ವಾಮಿ .ಎಸ್: ಪೂರ್ವೋಕ್ತ, ಪು–೨೪

೪೨. ಶಿವತಾರಕ್ .ಕೆ.ಬಿ: ಕರ್ನಾಟಕ ಪುರಾತತ್ವ ನೆಲೆಗಳು, ಪೂರ್ವೋಕ್ತ, ಪು–೨೫೯

೪೩. ಎಂ.ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ (ಸಂ); ೧೯೭೯, ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ, ಪು–೨

೪೪. ಸುಂದರ್ .ಅ: ಕರ್ನಾಟಕ ಚರಿತ್ರೆ, ಸಂಪುಟ–೧, ಕ.ವಿ.ವಿ ಹಂಪಿ, ವಿದ್ಯಾರಣ್ಯ, ಪು–೨೮೬

[illegible]

೪೫. ಚಂದ್ರವಳ್ಳಿ: ಪೂರ್ವೋಕ್ತ, ಪು-೨

46. Sri Sathyan .B .N: Chitradurga District Gazetteer, 1967

೪೭. ಚಂದ್ರವಳ್ಳಿ: ಪೂರ್ವೋಕ್ತ, ಪು-೬

೪೮. ಚಂದ್ರವಳ್ಳಿ: ಪೂರ್ವೋಕ್ತ, ಪು-೧೦

೪೯. ಚಂದ್ರವಳ್ಳಿ: ಪೂರ್ವೋಕ್ತ, ಪು-೧೯

೫೦. ಚಂದ್ರವಳ್ಳಿ: ಪೂರ್ವೋಕ್ತ, ಪು-೨೧

೫೧. ಚಂದ್ರವಳ್ಳಿ: ಪೂರ್ವೋಕ್ತ, ಪು-೨೨

52. Epigraphia carnatica-XI: challakere-33.34

೫೩. ಚಂದ್ರವಳ್ಳಿ: ಪೂರ್ವೋಕ್ತ, ಪು-೨೮

೫೪. ಗೋಪಾಲ್ .ಅರ್ (ಸಂ): 2005, ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು-71

55. Epigraphia carnatica-XI: challakere -5

56. Epigraphia carnatica-XI: challakere -6

57. Epigraphia carnatica-XI: challakere –7

58. Epigraphia carnatica-XI: challakere –31

೫೯. ಚಂದ್ರವಳ್ಳಿ : ಪೂರ್ವೋಕ್ತ, ಪು-29

60. Epigraphia carnatica-XI: challakere –33

೬೧. ಚಂದ್ರವಳ್ಳಿ : ಪೂರ್ವೋಕ್ತ, ಪು-30

62. Epigraphia carnatica-XI: challakere –34

೬೩. ಗೋಪಾಲ್ ಅರ್: ಪೂರ್ವೋಕ್ತ, ಪು-73

೬೪. ಚಂದ್ರವಳ್ಳಿ : ಪೂರ್ವೋಕ್ತ, ಪು-30

65. Epigraphia carnatica-XI: challakere –43

೬೬ ಗೋಪಾಲ್ .ಆರ್: ಪೂರ್ವೋಕ್ತ, ಪು-81

67. Epigraphia carnatica-XI: Holalkere –56

68. Sri Sathyan .B .N: 1967, Chitradurga District Gazetteer, P-42

69. Epigraphia carnatica-XI: challakere –16,21,22

70. Epigraphia carnatica-XI: challakere –2, 3

೭೧. ಕೃಷ್ಣಮೂರ್ತಿ ಪಿ.ವಿ: 1999, ಚಿತ್ರದುರ್ಗ ಜಿಲ್ಲೆಯಲ್ಲಿ ವಿಜಯನಗರ ಕಾಲದ ಆಡಳಿತ ವಿಭಾಗಗಳು, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಕಲಬುರ್ಗಿ .ಎಂ.ಎಂ (ಸಂ) ಕ.ವಿ.ವಿ ಹಂಪಿ, ವಿದ್ಯಾರಣ್ಯ, ಪು-213

೭೨. ಕೃಷ್ಣಮೂರ್ತಿ ಹನೂರು: 1995, ಮ್ಯಾಸಬೇಡರ ಸಂಸ್ಕೃತಿ, ಪು-212

೭೩. ಕನ್ನಡ ವಿಷಯ ವಿಶ್ವಕೋಶ, ಪು-906

೭೪. ಪುಟಣ್ಣ ಎಂ.ಎಸ್: 1923, ಪಾಳೆಯಗಾರರ ಐದು ಉಪನ್ಯಾಸಗಳು, ಪು-03

75. Epigraphia carnatica-XI: challakere –37

೭೬. ಚಂದ್ರವಳ್ಳಿ : ಪೂರ್ವೋಕ್ತ, ಪು-66

೭೭. ಚಂದ್ರವಳ್ಳಿ : ಪೂರ್ವೋಕ್ತ, ಪು-67

78. Epigraphia carnatica-XI: challakere –38

79. Epigraphia carnatica-XI: challakere –54 (1559 AD) 13(1500 AD) ,38(1739 AD)

80. Epigraphia carnatica-XI: challakere –47 (1558 AD)

೮೧. ಗೋಪಾಲ್ ಆರ್: ಪೂರ್ವೋಕ್ತ, ಪು-137

೮೨. ಗೋಪಾಲ್ ಆರ್: ಪೂರ್ವೋಕ್ತ, ಪು-137

83. Epigraphia carnatica-XI: challakere -2

ಅಧ್ಯಾಯ : ಮೂರು

ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವ್ಯವಸ್ಥೆ

ಅಧ್ಯಾಯ : ಮೂರು

ಸಾಮಾಜಿಕ, ಧಾರ್ಮಿಕ, ಆರ್ಥಿಕ ವ್ಯವಸ್ಥೆ

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸದ ಅಧ್ಯಯನವೆಂದರೆ ಅಲ್ಲಿ ಬಾಳಿದ ಜನರ ಬದುಕಿನ ಅಧ್ಯಯನವೆಂದೇ ಅರ್ಥ. ಆ ಜನರ ನೋವು–ನಲಿವು, ಆಚಾರ–ವಿಚಾರ, ವ್ಯವಹಾರ ಮೊದಲಾದವೆಲ್ಲ ಅಲ್ಲಿ ಮಡುಗಟ್ಟಿರುತ್ತವೆ. ಇವುಗಳನ್ನು ತಿಳಿಯಲು ನಮಗೆ ಲಿಖಿತ ಮತ್ತು ಅಲಿಖಿತ ಆಕರಗಳು ಮಹತ್ವದ್ದಾಗುತ್ತವೆ. ಈ ತಾಲ್ಲೂಕು ಪರಿಸರದಲ್ಲಿ ಪ್ರಾಚೀನ ಮಾನವನು ನೆಲೆಸಿದ್ದ ಹಲವಾರು ಕುರುಹುಗಳು ಇದಕ್ಕೆ ಸಾಕ್ಷಿಗಳಾಗಿ ದೊರಕುತ್ತಿವೆ. ಇಲ್ಲಿನ ಭೌಗೋಳಿಕ ಪರಿಸರವೂ ಕೂಡ ಪ್ರಾಚೀನ ಮಾನವನು ನೆಲೆನಿಲ್ಲಲು ಸೂಕ್ತವಾಗಿದ್ದಂತೆ ತೋರುತ್ತದೆ. ಅವರು ಬಳಕೆ ಮಾಡಿ ಬಿಟ್ಟು ಹೋಗಿರುವ ಅವಶೇಷಗಳಿಂದ ಅವರು ಬದುಕಿ–ಬಾಳಿದ ಚಟುವಟಿಕೆಗಳನ್ನು ತಿಳಿದುಕೊಳ್ಳಬಹುದು.

ಆದಿಇತಿಹಾಸ ಮತ್ತು ಇತಿಹಾಸ ಪ್ರಾರಂಭದಲ್ಲಿ ಮೌರ್ಯರು, ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಸ್ಥಳೀಯ ಪಾಳೆಯಗಾರರು ಆಳ್ವಿಕೆಯನ್ನು ನಡೆಸಿದರು. ಇವರು ತಮ್ಮ ಅವಧಿಯಲ್ಲಿ ಕೇವಲ ರಾಜಕೀಯ ಚಟುವಟಿಕೆಗಳಲ್ಲಿ ಮಾತ್ರ ತೊಡಗದೆ ಅದೇ ಸಂದರ್ಭದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಕೂಡ ಗಮನಾರ್ಹ ಸಾಧನೆಯನ್ನು ಮಾಡಿ ತೋರಿಸಿದ್ದಾರೆ. ಇವರ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಥವಾ ಸಾಧನೆಗಳನ್ನು ತಿಳಿದುಕೊಳ್ಳಲು ಅವರ ಕಾಲದಲ್ಲಿ ರಚನೆಯಾಗಿರುವ ಶಾಸನಗಳು, ಸ್ಮಾರಕ ಅವಶೇಷಗಳು, ಇವುಗಳಲ್ಲದೇ ಸ್ಥಳೀಯವಾಗಿ ಲಭ್ಯವಿರುವ ಮೌಖಿಕ ಆಕರಗಳು ನಮಗೆ ಸಾಂಸ್ಕೃತಿಕ ಇತಿಹಾಸ ಕಟ್ಟುವಲ್ಲಿ ಪ್ರಮುಖ ಆಕರಗಳಾಗಿ ಪರಿಗಣಿಸಲ್ಪಟ್ಟಿವೆ.

ಒಂದು ಪ್ರದೇಶದ ವಾಸ್ತವಿಕ ಚಿತ್ರಣವನ್ನು ತಿಳಿಯಲು ಅಲ್ಲಿನ ಸಾಂಸ್ಕೃತಿಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಾಗ ಮಾತ್ರವೇ ಆ ಪ್ರದೇಶದ ಇತಿಹಾಸ ಕಟ್ಟಲು ಸಾಧ್ಯವಾಗಬಹುದೆಂದು ಹೇಳಬಹುದು. ಆದ್ದರಿಂದ ಅಂದಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದರ ಮೂಲಕ ಅಂದಿನ ಸ್ಥಳೀಯ ಚರಿತ್ರೆಯನ್ನು ನಿರೂಪಿಸಲಾಗಿದೆ.

೩.೧ ಸಾಮಾಜಿಕ ಸ್ಥಿತಿಗತಿ

ಈ ಪರಿಸರದಲ್ಲಿ ದೊರಕುವ ಶಾಸನಗಳು ಅಂದಿನ ಕಾಲದ ಸಮಾಜದ ಚಿತ್ರಣವನ್ನು ನೀಡುತ್ತವೆ. ಸಮಾಜದ ಸ್ವರೂಪವನ್ನು ಗಮನಿಸುವಲ್ಲಿ ಸಾಂಸ್ಕೃತಿಕ ಪ್ರತಿಬಿಂಬವನ್ನು ಕಾಣಬಹುದಾಗಿದೆ.

ಆದರೆ ಈ ಪ್ರದೇಶದಲ್ಲಿ ದೊರಕುವ ಶಾಸನಗಳು ಸಂಖ್ಯೆಯಲ್ಲಿ ವಿರಳವಾಗಿರುವುದರಿಂದ, ಅಂದಿನ ಸಮಗ್ರ ಸಾಂಸ್ಕೃತಿಕ ಪರಿಸರವನ್ನು ತಿಳಿದುಕೊಳ್ಳಲು ಸುತ್ತಮುತ್ತಲಿನ ಪ್ರದೇಶದ ಶಾಸನಗಳನ್ನು ಕೂಡ ಆಕರಗಳಾಗಿ ಬಳಸಿಕೊಳ್ಳಲಾಗಿದೆ.

ವರ್ಗ–ವರ್ಣ–ಜಾತಿ ವ್ಯವಸ್ಥೆ

ಎಲ್ಲಾ ಕಾಲಗಳಲ್ಲಿಯ ಸಮಾಜದಲ್ಲಿ ಪ್ರಭುವರ್ಗ ಮತ್ತು ಶ್ರಮಿಕವರ್ಗ ಎಂಬ ಎರಡು ಭಾಗಗಳಿದ್ದುದು ಕಂಡುಬರುತ್ತದೆ. ಪ್ರಭುವರ್ಗವು ರಾಜ, ಪುರೋಹಿತ, ಪ್ರಧಾನಿ ಹಾಗೂ ಇತರೆ ಅಧಿಕಾರಿಗಳನ್ನು ಒಳಗೊಂಡಿದ್ದು ಕಂಡುಬರುತ್ತದೆ. ಇವರು ಸಮಾಜದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದರು. ಬ್ರಾಹ್ಮಣರು ಷಟ್ಕರ್ಮಗಳಲ್ಲಿ ನಿರತರಾಗಿರುವಂತೆ ಅವರಿಗೆ ಎಲ್ಲರೂ ಸಾಕಷ್ಟು ದಾನ–ದತ್ತಿಗಳನ್ನು ನೀಡಿ ಗೌರವಿಸಿರುವುದನ್ನು ಶಾಸನಗಳಲ್ಲಿ ಕಾಣಬಹುದು. ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂಬ ನಾಲ್ಕು ಪ್ರಮುಖ ವರ್ಗಗಳಿದ್ದವು.

ಶ್ರಮಿಕ ವರ್ಗದಲ್ಲಿ ಅಕ್ಕಸಾಲಿಗ, ಬಡಗಿ, ಕಮ್ಮಾರ, ಕುಂಬಾರ, ಶಿಲ್ಪಿ, ಕಂಚುಗಾರ, ಅಗಸ ಮುಂತಾದ ಕುಲ ಕಸುಬುದಾರರು ಇದ್ದರೆಂದು ತಿಳಿದುಬರುತ್ತದೆ. ಮತ್ತೆ ಇವುಗಳಲ್ಲಿ ಹಲವು ಉಪಪಂಗಡಗಳನ್ನು ಕಾಣುತ್ತೇವೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಕಾಡುಗೊಲ್ಲರು ಮತ್ತು ಮ್ಯಾಸಬೇಡ ಬುಡಕಟ್ಟು ಸಮುದಾಯದವರು ನೆಲೆಸಿದ್ದಾರೆ. ಕಾರಣವೆಂದರೆ ವಿಜಯನಗರೋತ್ತರ ಅವಧಿಯಲ್ಲಿ ಹಲವು ಪಾಳೆಯ ಪಟ್ಟುಗಳು ಈ ಪ್ರದೇಶದ ಸುತ್ತಮುತ್ತ ಸಾಮಂತರಾಗಿ ಆಳ್ವಿಕೆಯನ್ನು ನಡೆಸಿದರು.

ಶ್ರಮಜೀವಿಗಳು ತಮ್ಮ ವಂಶಪಾರಂಪರ್ಯವಾಗಿ ಬಂದ ವೃತ್ತಿ ವೈಶಿಷ್ಟವನ್ನು ಉಳಿಸಿಕೊಳ್ಳುವ ಭಿನ್ನತೆಯೇ ಜಾತಿ ವ್ಯವಸ್ಥೆಗೆ ದಾರಿ ಮಾಡಿಕೊಟ್ಟಿರಬಹುದು. ಈ ವೃತ್ತಿನಿರತ ಜಾತಿಗಳನ್ನು 'ಘಣ'ಗಳೆಂದು ಕರೆಯುತ್ತಿದ್ದರು.[೧] ಹಿಂದೆ ಸಾಂಪ್ರದಾಯಿಕವಾಗಿ ಹದಿನೆಂಟು ಜಾತಿಗಳಿದ್ದಂತೆ ತೋರುತ್ತದೆ ಎಂದು ಪಿ.ವಿ.ನಾರಾಯಣ ಅವರು ಹೇಳಿದ್ದಾರೆ. ಎಲ್ಲಾ ಜಾತಿಗಳಿಗಿಂತ ಕೆಳಗಿನ ಜಾತಿ ಹೊಲೆಯರದು, ಮಾದಿಗರದು. ಅವರು ವಾಸಿಸುತ್ತಿದ್ದ ಸ್ಥಳವನ್ನು 'ಹೊಲಗೇರಿ' ಎಂದು ಕರೆಯುತ್ತಿದ್ದರು.

ಸತಿ ಪದ್ಧತಿ

ಸತಿ ಪದ್ಧತಿಯ ಬಗ್ಗೆ ಶಾಸನಗಳಲ್ಲಿ ಯಾವ ಮಾಹಿತಿಯೂ ಸಿಗದಿದ್ದರೂ ಚಿತ್ರದುರ್ಗದ ನಾಗತಿಯರು ಸತಿ ಹೋದ ಸಂಗತಿಯು ತಿಳಿದುಬರುವುದು. ಈ ಪ್ರದೇಶದಲ್ಲಿ ಕೂಡ ಸತಿ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿತ್ತೆಂದು ತಿಳಿದುಬರುತ್ತದೆ. ಇದಕ್ಕೆ ಪೂರಕವಾಗಿ ಮೌಖಿಕ ಕಥನಗಳಲ್ಲಿ ಸತಿ ಪದ್ಧತಿಯ ಆಚರಣೆಯ ವಿವರ ನಮಗೆ ಸಿಗುತ್ತದೆ. ಉದಾಹರಣೆಗೆ ಕೊಂಡದ ಕಾಟವ್ವನ ಕಥನಗೀತೆಯಲ್ಲಿ ಸತಿ ಹೋಗುವುದನ್ನು ಕಾಣಬಹುದು.

ಸ್ತ್ರೀಯರ ಸ್ಥಾನಮಾನ

ಈ ಪ್ರದೇಶದಲ್ಲಿ ದೊರಕುವ ಕೆಲವು ಶಾಸನಗಳಿಂದ ಸ್ತ್ರೀಯರೂ ಉನ್ನತ ಹುದ್ದೆಯನ್ನು ಅಲಂಕರಿಸಿರುವುದು ನಮಗೆ ಕಂಡುಬರುತ್ತದೆ. ಕೆಲವು ಸ್ತ್ರೀಯರು ರಾಜಕೀಯ, ಧಾರ್ಮಿಕ ಹಾಗೂ

ಸಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡಿರುವುದು ನಮಗೆ ಶಾಸನಗಳಲ್ಲಿ ಆಧಾರ ಸಿಗುತ್ತದೆ. ಆದರೂ ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಶೋಷಣೆ ಎಲ್ಲಾ ಕಾಲಘಟ್ಟದಲ್ಲೂ ನಡೆದುಕೊಂಡು ಬಂದಿರುವುದನ್ನು ಗಮನಿಸಬಹುದು. ಸಾಮಾನ್ಯ ಸ್ತ್ರೀಯರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವನ್ನು ನೀಡದೇ ಇರುವುದನ್ನು ತಿಳಿಯಬಹುದು.

'ಮದರಿಕಲ್ಲು' ಎಂಬು ನೊಳಂಬ ಪಲ್ಲವರ ಪ್ರಾಂತ್ಯವೊಂದರ ರಾಜಧಾನಿಯಾಗಿದ್ದ ಚಿಕ್ಕಮಧುರೆಯಲ್ಲಿ ನೊಳಂಬ ಪಲ್ಲವ ರಾಜನ ರಾಣಿ ಮತ್ತು ಪಲ್ಲವ ಮಲ್ಲನ ತಾಯಿ ಗವಗಣಬ್ಬೆಯ ಉಲ್ಲೇಖವಿದೆ. ಆಕೆ ಮದರಿಕಲ್ಲನ್ನು ಆಳುತ್ತಿದ್ದಾಗ ಸಂಕ್ರಾಂತಿಯಂದು ನಾಗಮಾರಬ್ಬೆ ಮಾಡಿಸಿದ ಶಿವಾಲಯಕ್ಕೆ ೧೪ ಮತ್ತರು ಭೂಮಿ ದತ್ತಿಯನ್ನು ಬಿಟ್ಟ ವಿವರ ನಮಗೆ ತಿಳಿಯುವುದು.[೨] ಇದೇ ಚಿಕ್ಕಮಧುರೆಯ ಎರಡನೆಯ ಶಾಸನವು ಸಮಸ್ತ ಲೋಕ ಪ್ರಸಿದ್ಧ ಪಲ್ಲವಾದಿ ರಾಜ ರಾಷ್ಟ್ರಕೂಟರ ಮಹಾಸಾಮಂತನಾಗಿ ಅನೇಕ ನಾಡುಗಳನ್ನು ವೈಭವದಿಂದ ಆಳುತ್ತಿರಲು ಆತನ ರಾಣಿ ಗಾವಣಗಬ್ಬೆಯು ಮದರಿ ಕಲ್ಲಿನ ಗಾವಗಣೇಶ್ವರ ಶಿವಾಲಯ ಕಟ್ಟಿಸಿ ಉದಾರವಾಗಿ ಭೂಮಿಯನ್ನು ದತ್ತಿ ನೀಡಿದಳೆಂದು ತಿಳಿಸುವುದು.[೩]

ಚಿತ್ರದುರ್ಗದ ಪಾಳೆಯಗಾರ ಚಿಕ್ಕಣ ನಾಯಕನ ಕಾಲದಲ್ಲಿ (ಕ್ರಿ.ಶ ೧೬೭೫-೧೬೮೬) ಅರಸು ಮನೆತನದವರು ವೀರಶೈವ ಧರ್ಮ ಸ್ವೀಕರಿಸಿದರು, ನಂತರ ಅದನ್ನು ತ್ಯಜಿಸಿದರು. ಆದರೆ ಮಲ್ಲವ್ವ ನಾಗತಿ ಎಂಬುವವಳು ವೀರಶೈವಳಾಗಿಯೇ ಉಳಿದಳೆಂದು ತಿಳಿದುಬರುತ್ತದೆ. ಇದರಿಂದ ರಾಣಿಯರಿಗೆ ಸ್ವತಂತ್ರ ನಿರ್ಧಾರ ಕೈಗೊಳ್ಳುವ ಅಧಿಕಾರವಿದ್ದಂತೆ ತೋರುತ್ತದೆ. ಚಿತ್ರದುರ್ಗದ ಪಾಳೆಯಗಾರರು ಅನೇಕ ನಾಗತಿಯರಿದ್ದರೂ ಕೂಡ ದೇವದಾಸಿಯರನ್ನು ಇಟ್ಟುಕೊಂಡಿರುವ ಉಲ್ಲೇಖ ಸಾಹಿತ್ಯದಲ್ಲಿ ದೊರೆಯುತ್ತದೆ. ಭರಮಣ್ಣನಾಯಕನಿಗೆ ೮ ಜನ ದೇವದಾಸಿಯರಿದ್ದರು. ಇವರನ್ನು ಬಂಗಾರದವರು ಎಂದು ಕರೆಯುತ್ತಿದ್ದರು. ಈ ದೇವದಾಸಿ ಪದ್ಧತಿಯು ಮುಂದೆ ವೇಶ್ಯಾವೃತ್ತಿಗೆ ದಾರಿ ಮಾಡಿಕೊಟ್ಟಿತು. ಇದರಿಂದ ಕೆಲವು ಸ್ತ್ರೀಯರು ವೇಶ್ಯಾವೃತ್ತಿಯನ್ನು ಆಚರಿಸಿಕೊಂಡುಬಂದಿರುವುದನ್ನು ಗಮನಿಸಬಹುದು.

ಆತ್ಮಬಲಿ ಪದ್ಧತಿ

ಕ್ರಿ.ಶ. ೧೨೧೫ರ ಸಿದ್ಧಾಪುರದ ವೀರಗಲ್ಲು[೪] ಹೊಯ್ಸಳರ ಕಾಲದ ಸಾಮಾಜಿಕ ಪದ್ಧತಿಯೊಂದನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಈ ವೀರಗಲ್ಲು ಹೊನ್ನಿ ಎಂಬುವವಳು ಆತ್ಮಾರ್ಪಣೆ ಮಾಡಿಕೊಂಡ ಅಪರೂಪದ ಘಟನೆಯನ್ನು ಸಾರುತ್ತದೆ. ಈ ಅವಧಿಯಲ್ಲಿ ಇಂತಹ ಆತ್ಮಬಲಿ ಪ್ರಕರಣಗಳು ಆಚರಣೆಯಲ್ಲಿದ್ದವೆಂದು ತಿಳಿದುಬರುತ್ತದೆ. ಉದಾಹರಣೆಗೆ 'ಸಿಡಿತಲೆ' ಪದ್ಧತಿಯನ್ನು ಅನುಸರಿಸುತ್ತಿದ್ದ 'ಲೆಂಕ' ಜನಾಂಗದವರು ಈ ಕಾಲದಲ್ಲಿದ್ದರು. 'ಗರುಡ' ಸಂಪ್ರದಾಯವು ಈ ಶತಮಾನದಲ್ಲಿಯೇ ಆಚರಣೆಯಲ್ಲಿದ್ದಿತು. ಹೊಯ್ಸಳ ದೊರೆಗಳ ಸಾವಿನ ಬಳಿಕ ಆತ್ಮಾರ್ಪಣೆ ಮಾಡಿಕೊಳ್ಳುವ (ಒಡೆಯನ ವಿಶ್ವಾಸವನ್ನು ಗಳಿಸಿದ್ದ) ವ್ಯಕ್ತಿಯನ್ನು ಗರುಡನೆನ್ನುತ್ತಿದ್ದರು.

ಹಬ್ಬ–ಹರಿದಿನಗಳು

ಅಂದು ಕೂಡ ಸಾಮ್ರಾಜ್ಯ ಮತ್ತು ಪ್ರಾಂತಗಳಲ್ಲಿ ಹಲವಾರು ಹಬ್ಬ–ಹರಿದಿನಗಳನ್ನು ಹಾಗೂ ಉತ್ಸವಗಳನ್ನು ಆಚರಿಸಿಕೊಂಡು ಬರುತ್ತಿದ್ದರೆಂದು ಶಾಸನಗಳಿಂದ ತಿಳಿದುಬರುತ್ತದೆ. ಅಂದು ವಸಂತೋತ್ಸವ, ಫಾಲ್ಗುಣಮಾಸದ ಉತ್ಸವ, ರಥೋತ್ಸವ ವೈಶಾಖಮಾಸದ ರಥೋತ್ಸವ, ನಿತ್ಯೋತ್ಸವ, ಪಕ್ಷೋತ್ಸವ, ಮಾಸೋತ್ಸವ, ಸಂವತ್ಸರೋತ್ಸವ ಮುಂತಾದ ಉತ್ಸವಗಳನ್ನು ಆಚರಿಸುತ್ತಿದ್ದರು. ಜೊತೆಗೆ ಇಂದು ಪ್ರಚಲಿತದಲ್ಲಿರುವ ಹಬ್ಬಗಳಾದ ಯುಗಾದಿ, ಗೌರಿ–ಗಣೇಶ, ನವರಾತ್ರಿ, ದೀಪಾವಳಿ, ನೂಲಹುಣ್ಣಿಮೆ, ಮಹಾಲಯ ಅಮವಾಸ್ಯೆ, ಸಂಕ್ರಾಂತಿ, ಶಿವರಾತ್ರಿ ಮುಂತಾದವು ಆಗಲೂ ನಡೆಯುತ್ತಿದ್ದಂತೆ ತೋರುತ್ತದೆ.

ಇದರ ಜೊತೆಗೆ ಪಾಳೆಯಗಾರರು ವೀರರಾಗಿದ್ದರಿಂದ ಶಕ್ತಿ ದೇವತೆಗಳ ಆರಾಧನೆಯನ್ನೂ ಸಹ ಮಾಡುತ್ತಿದ್ದರು. ಈ ಪರಿಸರದಲ್ಲಿ 'ಚಳ್ಳಕೇರಮ್ಮ' ಪಾಳೆಯಗಾರರ ಮನೆದೇವತೆಯನ್ನು ತಮ್ಮ ಮನೆಯ ಹೆಣ್ಣುಮಗಳೆಂದು ತಿಳಿಯುತ್ತಾರೆ. ಅಂದು ಪಾಳೆಯಗಾರರ ವಂಶಸ್ಥರು ತಮ್ಮ ಮನೆಯಿಂದ ಕುಂಕಮ, ಅರಿಶಿಣ, ಮಾಂಗಲ್ಯ ಮುಂತಾದ ಸೌಭಾಗ್ಯದ ವಸ್ತುಗಳನ್ನು ದೇವಿಗೆ ಅರ್ಪಿಸುತ್ತಾರೆ. ದೇವಿಗೆ ಅವರದೇ ಮೊದಲನೆಯ ಪೂಜೆ. ನಂತರದ ಪೂಜೆ ಬ್ರಾಹ್ಮಣರಿಗೆ.

ಈ ಪ್ರದೇಶದಲ್ಲಿ ದೇವರುಗಳ ವಿಶೇಷ ಪೂಜೆಯುಂಟು. ಜಾತ್ರೆಗಳು ನಡೆದು, ಜಾತಿಗಳ ಭೇದವಿಲ್ಲದ, ಪ್ರತಿಯೊಬ್ಬ ವ್ಯಕ್ತಿಯೂ ಭಕ್ತಿ ಭಾವದಿಂದ ಭಾಗವಹಿಸುತ್ತಿದ್ದನು. ಆಗ ಕುಸ್ತಿ, ಖಡ್ಗ ವಿದ್ಯೆ, ಮುಂತಾದ ಶೌರ್ಯ ಪ್ರದರ್ಶನ ನಡೆಯುತ್ತಿತ್ತು. ಗೆದ್ದವರಿಗೆ ರಾಜರು ಬಹುಮಾನ ಕೊಟ್ಟು ಪ್ರೋತ್ಸಾಹಿಸಿ ಮರ್ಯಾದೆ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಅನೇಕ ಮನೋರಂಜನೆ ಕಾರ್ಯಕ್ರಮಗಳೂ ನಡೆಯುತ್ತಿದ್ದವು.

ವೀರಗಲ್ಲುಗಳು

ಗತಿಸಿಹೋದ ಮಾನವನನ್ನು ಸಮಾಧಿ ಮಾಡಿದ ನಿರ್ದಿಷ್ಟ ಸ್ಥಳದ ಗುರುತಿಗಾಗಿಯೇ, ಮಡಿದವನ ಸ್ಮರಣೆ ಬರುವಂತೆ, ಕೆಲವಾರು ಸಂಕೇತಗಳನ್ನೋ, ಗುರುತುಗಳನ್ನೋ ಒಂದು ನಿಗದಿಯಾದ ಸ್ಥಳದಲ್ಲಿ ಅಥವಾ ಸಮಾಧಿ ಮಾಡಿದ ಸ್ಥಳದಲ್ಲಿ ನೆಡುತ್ತಿದ್ದರು. ಇವು ಸಾಮಾನ್ಯವಾಗಿ ಆಯಾ ದೇಶಗಳಲ್ಲಿನ ಧರ್ಮ, ನಂಬಿಕೆ, ಸಾಮಾಜಿಕ ಪ್ರತಿಷ್ಠೆಗಳನುಸರಿಸಿಯೇ ಬೆಳೆದಿವೆ.[೬] ಗತಿಸಿದ ಮಾನವನ ಸಮಾಧಿ ಮಾಡಿ, ಮಡಿದವರ ಸ್ಮರಣೆ ಬರುವಂತೆ ಸಂಕೇತಕ್ಕಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು ಶಾಸನ.[೭] ವೇದಗಳು ಮತ್ತು ಶತಪಥ ಬ್ರಾಹ್ಮಣದಲ್ಲಿ ಇಂತಹ ಸ್ಮಾರಕದ ಉಲ್ಲೇಖವಿದೆ.[೮]

ಸಾಹಸದಿಂದ ಹೋರಾಡಿದ ಪ್ರಾಣವನ್ನೇ ಮುಡಿಪಾಗಿಟ್ಟು ಗೋವುಗಳನ್ನು ಕಳ್ಳರಿಂದ, ದರೋಡೆಕೋರರಿಂದ, ಶತ್ರುಗಳಿಂದ ರಕ್ಷಿಸುವಾಗ ಪ್ರಾಣಬಿಟ್ಟು, ಧಾರ್ಮಿಕ ಹಾಗೂ ಸಾಮಾಜಿಕ ಕಾರಣಗಳಿಗಾಗಿ ತಮ್ಮ ಆತ್ಮಬಲಿದಾನ ಮಾಡಿ ಮಡಿದ, ಸ್ತ್ರೀ ರಕ್ಷಣೆಗಾಗಿ ಹೋರಾಡಿ ಮಡಿದ ವೀರರ ನೆನಪಿನಲ್ಲಿ ವೀರಗಲ್ಲುಗಳನ್ನು ನೆಡುತ್ತಿದ್ದರು. ವೀರಗಲ್ಲು ಇರುವಲ್ಲಿ ಕೆಲವು ಕಡೆ ಗುಡಿಗಳನ್ನು ಕಟ್ಟಿಸಿದ್ದಾರೆ. ವೀರಗಲ್ಲುಗಳನ್ನು ನಿಲ್ಲಿಸುವ ಉದ್ದೇಶ ಎರಡು ರೀತಿಯದ್ದಿರಬಹುದು

೧. ಲೌಕಿಕ ಉದ್ದೇಶ

೨. ಪಾರಮಾರ್ಥಿಕ ಉದ್ದೇಶ

ಒಟ್ಟಾರೆಯಾಗಿ ಹೋರಾಟದಲ್ಲಿ ಮಡಿದ ವೀರರ ದ್ಯೋತಕವಾಗಿ ನಿಲ್ಲಿಸಿದ ಶಿಲೆಯೇ ವೀರಗಲ್ಲು. ನಮಗೆ ಹೆಚ್ಚಾಗಿ ಮೂರು ಹಂತದ ಶಾಸನ ಶಿಲ್ಪಗಳು ಕಂಡುಬರುತ್ತವೆ. ಇದರಲ್ಲಿ ಕೆಳಗಿನ ಹಂತದಲ್ಲಿ ವೀರ ತನ್ನ ಶತೃಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ಅವನನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿರುವಂತೆಯೂ, ಮೇಲಿನ ಹಂತದಲ್ಲಿ ಆತನು ಭಗವಂತನ ಸಾನಿಧ್ಯವನ್ನು ಪಡೆದು ಭಗವಂತನ ಪೂಜೆ ಮಾಡುವಂತೆ ತೋರಿಸಲಾಗುತ್ತದೆ. ಯಾವುದೇ ಹಂತವಿರಲಿ ಕುದುರೆ ಸವಾರಿ ಮಾಡುತ್ತಿರುವ, ಯುದ್ಧ ಮಾಡುತ್ತಿರುವ, ಬಿಲ್ಲನ್ನು, ಖಡ್ಗವನ್ನು ಹಿಡಿದು ನಿಂತಿರುವ ಯುದ್ಧವನ್ನೋ, ರಣಾಂಗಣವನ್ನೋ ಸೂಚಿಸುವ ಚಿತ್ರವನ್ನು ವೀರಗಲ್ಲು ಎಂದು ಕರೆಯಬಹುದು.[9] ಪ್ರಸ್ತುತ ಅಧ್ಯಯನದಲ್ಲಿ ಚಳ್ಳಕೆರೆ ಪರಿಸರದಲ್ಲಿ ಇಂತಹ ವೀರಗಲ್ಲುಗಳ ಹಾಗೂ ವೀರಗಾರರ ಗುಡಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ ವಿವರಣೆ ಕೆಳಗಿನಂತೆ.

ಚಳ್ಳಕೆರೆ ಪಟ್ಟಣದ ಬೆಂಗಳೂರು-ಬಳ್ಳಾರಿ ಹೆದ್ದಾರಿಯ ಬಲಭಾಗದಲ್ಲಿ ಒಂದು ವೀರಗಲ್ಲನ್ನು ನಿಲ್ಲಿಸಲಾಗಿದೆ. ಇದರಲ್ಲಿ ವೀರನು ಕಠಾರಿಯನ್ನು ಹಿಡಿದು ನಿಂತಿದ್ದಾನೆ. ಆತನ ಮೇಲ್ಭಾಗದಲ್ಲಿ ಎರಡು ಕುಳಿತ ನಂದಿಗಳ ಮಧ್ಯೆ ಶಿವಲಿಂಗ, ಅವುಗಳ ಮೇಲೆ ಸೂರ್ಯ, ಚಂದ್ರರ ಚಿಹ್ನೆಗಳಿವೆ. ಪಕ್ಕದಲ್ಲಿ ಸ್ತ್ರೀಯು ಬಲಗೈಯನ್ನು ಮೇಲಕ್ಕೆ ಎತ್ತಿದ್ದಾಳೆ. ಎಡಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ.

ದೊಡ್ಡೇರಿಯಲ್ಲಿ ದೊರೆತ ನಾಲ್ಕು ವೀರಗಲ್ಲುಗಳಲ್ಲಿ ಶಾಸನಗಳನ್ನು ಸಹ ಕೆತ್ತಿದ್ದಾರೆ. ಈಗ ಎಲ್ಲಾ ವೀರಗಲ್ಲುಗಳು ಕೂಡ ಊರ ಮಧ್ಯೆದಲ್ಲಿರುವ ಬಸವಣ್ಣನ ದೇವರ ಗುಡಿಯ ಪಕ್ಕದಲ್ಲಿ ಕಂಡುಬರುತ್ತವೆ. ಒಂದನೆಯ ವೀರಗಲ್ಲಿನಲ್ಲಿ ಮೂರು ಉಬ್ಬು ಶಿಲ್ಪಗಳಿದ್ದು ಅದರಲ್ಲಿ ನಡುವಿನ ಶಿಲ್ಪ ಎಡಗೈಯನ್ನು ಕೆಳಗೆ ಮಾಡಿ ಆಯುಧ ಹಿಡಿದಿರುವ ಪುರುಷನ ಅಥವಾ ವೀರನ ಚಿತ್ರ. ವೀರನ ಎರಡೂ ಬದಿಗೆ ನಿಂತಿರುವ ಸ್ತ್ರೀಯರ ಶಿಲ್ಪಗಳಿವೆ. ಸ್ತ್ರೀಯರು ತಮ್ಮ ಬಲಗೈಯನ್ನು ಮೇಲೆತ್ತಿ ಹಿಡಿದಿರುವುದರಿಂದ ಇದೊಂದು ವೀರ ಸತಿಗಲ್ಲು ಎಂದು ಕರೆಯಬಹುದು.

ಎರಡನೆಯ ವೀರಗಲ್ಲಿನಲ್ಲಿ ವೀರನು ಒಂದು ಕಠಾರಿಯನ್ನು ಹಿಡಿದು ನಿಂತಿರುವುದು ಕಂಡುಬರುತ್ತದೆ. ಮೂರನೆಯ ವೀರಗಲ್ಲಿನಲ್ಲಿ ನಿಂತಂತಹ ವೀರನು ತನ್ನ ಎಡಕ್ಕೆ ಎರಡೂ ಕೈಯಿಂದ ಹಿಡಿದಿರುವ ಕತ್ತಿಯನ್ನು ಕಾಣಬಹುದು. ಅವನು ವಸ್ತ್ರಧಾರಿಯಾಗಿದ್ದು, ಎರಡೂ ಪಾದದವರೆಗೆ ದೋತಿ ಇಳೆಬಿಟ್ಟಿರುವುದನ್ನು ಕಾಣಬಹುದು. ಪಕ್ಕದಲ್ಲೇ ನಿಂತಂತಹ ಸ್ತ್ರೀಯು ಎಡಗೈಯನ್ನು ಮೇಲಕ್ಕೆ ಎತ್ತಿದ್ದು ಬಲಗೈಯನ್ನು ಕೆಳಗೆ ಇಳಿಬಿಟ್ಟಿದ್ದಾಳೆ. ನಾಲ್ಕನೆಯ ವೀರಗಲ್ಲಿನಲ್ಲಿನಲ್ಲಿ ಹಾರುತ್ತಿರುವ ಕುದುರೆಯ ಮೇಲೆ ವೀರನು ಕುಳಿತಂತಹ ಶಿಲ್ಪವನ್ನು ಕೆತ್ತಿದ್ದಾರೆ.

ಸಾಣಿಕೆರೆ ಗ್ರಾಮದ ಪಶ್ಚಿಮ ಭಾಗದ ಹಾಳೂರಲ್ಲಿ ಒಂದು ವೀರಗಲ್ಲಿದೆ. ಇದರಲ್ಲಿ ನಿಂತಿರುವ ವೀರನು ಎರಡೂ ಕೈಗಳಿಂದ ಬಿಲ್ಲು, ಬಾಣವನ್ನು ಎಡಗಡೆಗೆ ಹಿಡಿದುಕೊಂಡಿರುವ ಶಿಲ್ಪವಿದೆ. ಜೊತೆಗೆ ವೀರನು ನಡಪಟ್ಟಿಯಲ್ಲಿ ಕತ್ತಿಯನ್ನು ಸಿಕ್ಕಿಸಿಕೊಂಡಿದ್ದಾನೆ. ವೀರನ ಮೇಲ್ಭಾಗದಲ್ಲಿ ಸೂರ್ಯ-

[illegible]

[illegible]

[illegible]

ಚಂದ್ರರ ಚಿತ್ರಗಳನ್ನು ಕೆತ್ತಿದ್ದಾರೆ. ವೀರನು ಕೈಕಡಗ, ಕಿವಿಯೋಲೆ, ತಲೆಗೆ ಮುಂಡಾಸು ಸುತ್ತಿಕೊಂಡಿದ್ದು, ವೀರನ ಬಲಭಾಗದಲ್ಲಿ ಕೈ ಎತ್ತಿ ನಿಂತಿರುವ ಸತಿಯ ಶಿಲ್ಪವೂ ಕಂಡುಬರುತ್ತದೆ. ಸಾಣಿಕೆರೆಯ ಕೆರೆಯ ಏರಿ ಮೇಲೆ ಒಂದೇ ಶಿಲಾಪಟ್ಟಿಕೆಯಲ್ಲಿ ಮೂರು ಪ್ರಾಣಿಗಳ ಶಿಲ್ಪವನ್ನು ಕಾಣಬಹುದಾಗಿದೆ. ಅದರಲ್ಲಿ ಒಂದನೆಯ ಶಿಲ್ಪವು ಪ್ರಾಣಿಯ ದೇಹ ಹಾಗೂ ಮನುಷ್ಯನ ತಲೆಯನ್ನು ಹೊಂದಿದ್ದು, ಎಡಗಾಲನ್ನು ಮೇಲಕ್ಕೆತ್ತಿದೆ. ಎರಡನೆಯ ಶಿಲ್ಪದಲ್ಲಿ ವ್ಯಕ್ತಿ ಕುದುರೆಯ ಮೇಲೆ ಸವಾರಿ ಮಾಡುತ್ತಿರುವ ಶಿಲ್ಪ ಹಾಗೂ ಮೂರನೆಯ ಶಿಲ್ಪ ಸಿಂಹವಾಗಿದ್ದು, ಅದು ಸವಾರಿ ಮಾಡುತ್ತಿರುವ ವೀರನ ಕಡೆಗೆ ತನ್ನ ಮುಖವನ್ನು ಮಾಡಿದ್ದು, ತನ್ನ ಮುಂದಿನ ಬಲಗಾಲನ್ನು ಆ ವೀರನ ಮೇಲೆ ಆಕ್ರಮಣ ಮಾಡುವಂತೆ ಮೇಲಕ್ಕೆತ್ತಿದೆ.

ಸೋಮಗುದ್ದದ ಪಕ್ಕದಲ್ಲಿರುವ ಹಾಳೂರಾದ ಕನ್ನೇನಹಳ್ಳಿಯ ಚಿಕ್ಕ ದಿಬ್ಬದ ಮೇಲೆ ಒಂದು ವೀರಗಲ್ಲು ಪತ್ತೆಯಾಗಿದೆ. ಇದರಲ್ಲಿ ಕುದುರೆಯ ಮೇಲೆ ಕುಳಿತು ಸವಾರಿ ಮಾಡುತ್ತಿರುವ ವೀರನ ಶಿಲ್ಪವಿದೆ. ಅದರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದಾರೆ. ಈ ವೀರಗಲ್ಲಿಗೆ ಒಂದು ಚಿಕ್ಕ ಗುಡಿಯನ್ನು ನಿರ್ಮಿಸಿದ್ದು, ಅದು ಈಗ ನಶಿಸಿ ಹೋಗಿದೆ.

ಚಿಕ್ಕಮಧುರೆಯ ಗ್ರಾಮದ ಹೊಲದಲ್ಲಿ ಬಿದ್ದಿರುವ ಶಾಸನ ಶಿಲ್ಪಗಳಲ್ಲಿ ನಿಂತಿರುವ ವೀರನು ಕೆಲವು ವ್ಯಕ್ತಿಗಳನ್ನು ತುಂಡರಿಸಿದ್ದು, ತುಂಡಾದ ವ್ಯಕ್ತಿಯ ಅವಶೇಷಗಳನ್ನು ಕೂಡ ಈ ವೀರಗಲ್ಲಿನಲ್ಲಿ ತುಂಬಾ ಸುಂದರವಾಗಿ ಕೆತ್ತಿದ್ದಾರೆ. ವೀರನು ಬಲಗೈಯಲ್ಲಿ ಕತ್ತಿಯನ್ನು ಹಾಗೂ ಎರಡಗೈಯಲ್ಲಿ ಇನ್ನೊಂದು ಆಯುಧವನ್ನು ಹಿಡಿದು ನಿಂತಿದ್ದಾನೆ. ಮತ್ತೊಂದು ವೀರಗಲ್ಲಿನಲ್ಲಿ ನಿಂತಂತಹ ವೀರ ಒಬ್ಬ ವ್ಯಕ್ತಿಯನ್ನು ಕೆಳಗೆ ಕಾಲಲ್ಲಿ ಹೊಡೆದುರುಳಿಸಿದ ಶಿಲ್ಪ ಕಂಡುಬರುತ್ತದೆ. ಚಿಗತನ ಹಳ್ಳಿಯಿಂದ ದಕ್ಷಿಣಕ್ಕೆ ಸುಮಾರು ಒಂದೂವರೆ ಕಿ.ಮೀ. ದೂರದಲ್ಲಿರುವ ಹೊಲದಲ್ಲಿ ನಿಂತಂತಹ ವೀರರ ಎರಡು ವೀರಗಲ್ಲುಗಳು ಕಂಡಬಂದಿವೆ. ಒಂದರ ಕೈಯಲ್ಲಿ ಕುಡುಗೋಲನ್ನು, ಮತ್ತೊಂದರಲ್ಲಿ ಕತ್ತಿಯನ್ನು ಹಿಡಿದಿರುವುದು ಕಂಡುಬರುತ್ತದೆ.

ದೊಡ್ಡೇರಿಯ ಕನ್ನೇಶ್ವರ ದೇವಾಲಯದ ಪ್ರಾಂಗಣದಲ್ಲಿ ನಿಲ್ಲಿಸಿರುವ ವೀರ ಸತಿಕಲ್ಲು ವಿಶಿಷ್ಟವಾಗಿದೆ. ಬಲಗಡೆಗೆ ನಿಂತಂತಹ ವೀರನು ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ಗುರಾಣಿ ಹಿಡಿದಿದ್ದಾನೆ. ಪಕ್ಕದಲ್ಲಿ ಸ್ತ್ರೀಯು ತನ್ನ ಎರಡೂ ಕೈಗಳನ್ನೂ ಮೇಲಕ್ಕೆ ಎತ್ತಿದ್ದಾಳೆ. ಇವರ ಮೇಲ್ಭಾಗದಲ್ಲಿ ಸೂರ್ಯ ಚಂದ್ರರಿದ್ದು, ನಡುವೆ ಈಶ್ವರ ಲಿಂಗವಿರುವುದನ್ನು ಕಾಣುತ್ತೇವೆ.

ಹಳೇ ದೊಡ್ಡೇರಿ ಸ್ಥಳದಲ್ಲಿ ಎರಡು ಭಗ್ನಗೊಂಡ ವೀರಗಲ್ಲುಗಳು ಕಂಡುಬಂದಿವೆ. ಒಂದು ವೀರಗಲ್ಲು ಮೂರು ಹಂತಗಳನ್ನು ಒಳಗೊಂಡಿದೆ. ಇನ್ನೊಂದು ವೀರಗಲ್ಲು ಭಗ್ನಗೊಂಡಿದ್ದು, ಅದು ತುಂಡು ತುಂಡಾಗಿ ಬಿದ್ದಿದೆ.

ಈ ಪರಿಸರದಲ್ಲಿ ಕಂಡುಬರುವ ವಿಶಿಷ್ಟವಾದ ವೀರಸತಿಗಲ್ಲೆಂದರೆ ಯಲಘಟ್ಟೆಯದಾಗಿದೆ. ಈ ಮಹಾಸತಿ ಶಿಲ್ಪದಲ್ಲಿ ನಾಲ್ಕು ಹಂತಗಳಿವೆ. ಎರಡನೆಯ ಹಂತದಲ್ಲಿ ವೀರನು ಉದ್ದವಾದ ಈಟಿ-ಭಲ್ಲೆ ಯನ್ನು ಹಿಡಿದು ಕುದುರೆ ಸವಾರಿ ಮಾಡುತ್ತಿರುವನು. ಅವನ ಹಿಂದೆ ಮಹಾಸತಿಯೊಬ್ಬಳು

ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಮೂರನೆಯ ಹಂತದಲ್ಲಿ ಕುದುರೆ ಸವಾರಿ ಮಾಡುವ ವೀರನ ಕೈಯಲ್ಲಿ ಕತ್ತಿಯಿದೆ. ಆತನ ಬದಿಗೆ ಮಹಾಸತಿಯೊಬ್ಬಳು ತನ್ನ ಕೈಗಳನ್ನು ಎತ್ತಿಹಿಡಿದಿದ್ದಾಳೆ. ನಾಲ್ಕನೆಯ ಹಂತದ ಚಿತ್ರಗಳು ಶಿವಲಿಂಗ, ನಂದಿ, ಸೂರ್ಯ ಮತ್ತು ಚಂದ್ರ, ಸೂರ್ಯನ ಬಳಿ ನಾಗರಹಾವನ್ನು ಕೆತ್ತಲಾಗಿದೆ. ಇದು ಸೂರ್ಯನನ್ನು ನುಂಗುವ ಹಾವಾಗಿದೆ. ಇದು ರಾಹು ಸೂರ್ಯನನ್ನು ನುಂಗುವುದೆಂದು ಅರ್ಥೈಸಲಾಗಿದೆ. ಇದು ಸೂರ್ಯ ಗ್ರಹಣದಂದು ಸತಿಯು ಚಿತೆಯೇರಿರುವುದನ್ನು ತಿಳಿಸುತ್ತಿರಬೇಕು. ಈ ರೀತಿ ಸೂರ್ಯಗ್ರಹಣದ ಮಹಾಸತಿ ಶಿಲ್ಪ ದೊರೆತಿರುವುದು ಇದೇ ಮೊದಲೆಂದು ಡಾ. ಪರಮಶಿವಮೂರ್ತಿ[೧೦] ಅಭಿಪ್ರಾಯಪಟ್ಟಿದ್ದಾರೆ. ಇದರ ಕಾಲ ಸುಮಾರು ೧೨ನೇ ಶತಮಾನ.

ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಎರಡು ವೀರಗಲ್ಲುಗಳು ದೊಡ್ಡ ಉಳ್ಳಾರ್ತಿ ಗ್ರಾಮದಲ್ಲಿ ದೊರೆತಿವೆ. ಈ ವೀರಗಲ್ಲುಗಳ ಮೂರೂ ಹಂತಗಳಲ್ಲಿ ದೃಶ್ಯಗಳಿವೆ. ಕೆಳಗಿನ ಹಂತದಲ್ಲಿ ವೀರನು ಕುದುರೆ ಸವಾರಿ ಮಾಡುತ್ತಿರುವ ಯುದ್ಧದ ದೃಶ್ಯವಿದೆ. ಎರಡನೆಯ ಹಂತದಲ್ಲಿ ಮಡಿದ ವೀರನು ಅಪ್ಸರೆಯರನ್ನು ತನ್ನ ಕೈಗಳಿಂದ ಹಿಡಿದುಕೊಂಡು ಹಾರುವಂತೆ ನಿಂತಿದ್ದಾನೆ. ಮೂರನೆಯ ಹಂತದಲ್ಲಿ ವೀರನು ಎತ್ತರದ ಪೀಠದ ಮೇಲೆ ಕುಳಿತಿದ್ದು, ಆತನ ಬದಿಗಳಲ್ಲಿ ಅಪ್ಸರೆಯರು ನಿಂತಿದ್ದಾರೆ. ಕಾಲಮಾನ ಸುಮಾರು ಕ್ರಿಶ. ೧೦ನೇ ಶತಮಾನವಾಗಿದೆ.

ಮಾಸ್ತಿ ಕಲ್ಲುಗಳು

'ಮಾಸ್ತಿ' ಎಂಬುದು ಸಂಸ್ಕೃತದ 'ಮಹಾಸತಿ' ಎಂಬುದರ ಸಂಕ್ಷಿಪ್ತ ರೂಪ. ಮಹಾಸತಿಯಾಗುವುದು ಮಹಾ ಪುಣ್ಯದ ಕಾರ್ಯವೆಂದು ಒಂದು ಕಾಲದ ಸಮಾಜ ಬಲವಾಗಿ ನಂಬಿತ್ತು. ಗಂಡ ಸತ್ತು ಹೋದವಳಿಗೆ ಸಮಾಜದಲ್ಲಿ ಹೆಚ್ಚಿನ ಗೌರವವಿರಲಿಲ್ಲ. ಆದ್ದರಿಂದ ಅನಿವಾರ್ಯವಾಗಿ ಗಂಡ ಸತ್ತ ಮೇಲೆ ಆತನ ಜೊತೆ ಪ್ರಾಣತ್ಯಾಗ ಮಾಡುವ ಪದ್ಧತಿ ಇತ್ತು.[೧೧] ಎಷ್ಟೋ ಸತಿಯರಿಗೆ ಪತಿಯ ಶವದೊಂದಿಗೆ ಸಾಯುವ ಮನಸ್ಸು ಇಲ್ಲದೇ ಇದ್ದರೂ ಸಮಾಜದ ಹೆದರಿಕೆಗೆ ಅನಿವಾರ್ಯವಾಗಿ ಒಪ್ಪಿಕೊಳ್ಳುತ್ತಿದ್ದರು. ಹೀಗೆ ಪ್ರಾಣ ತ್ಯಾಗ ಮಾಡಿದ ಸತಿಯರ ಸ್ಮರಣೆಗಾಗಿ ನಿಲ್ಲಿಸಿದ ಸ್ಮಾರಕಗಳೇ ಮಹಾಸತಿ ಕಲ್ಲುಗಳು. ವೀರಗಲ್ಲುಗಳಂತೆ ಮಹಾಸತಿ ಕಲ್ಲುಗಳಲ್ಲಿ ಮೂರು ನಾಲ್ಕು ಪಟ್ಟಿಕೆಗಳ ಚಿತ್ರಣವಿರುತ್ತದೆ. ಬರಿಯ ಸ್ತ್ರೀ ವಿಗ್ರಹವು ಇರಬಹುದು. ಇಂತಹ ಮಹಾಸತಿಯ ಕೈ ಮೇಲೆತ್ತಿ ತೋರಿಸುವಂತೆ ಖಂಡರಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಚಳ್ಳಕೆರೆ ಪರಿಸರದ ಚಿಕ್ಕ ಮಧುರೆ ಗ್ರಾಮದ ಆಗ್ನೇಯಕ್ಕೆ ಹೊಲದಲ್ಲಿ ಅನಾಥವಾಗಿ ಬಿದ್ದಿರುವ ಒಂದು ಮಹಾಸತಿ ಕಲ್ಲು ಕಂಡುಬರುತ್ತದೆ. ಈ ಮಹಾಸತಿ ಕಲ್ಲಿನಲ್ಲಿ ಮೂರು ಶಿಲ್ಪಗಳಿದ್ದು, ನಡುವಿನ ಶಿಲ್ಪ ನಿಂತಂತಹ ವೀರನದಾಗಿದ್ದು, ಅವನು ಬಲಗೈಯನ್ನು ಮಡಚಿಕೊಂಡಿದ್ದಾನೆ. ಎರಡೂ ಬದಿಗೆ ಮಹಾಸತಿಯರು ವಸ್ತ್ರಧಾರಿಗಳಾಗಿದ್ದು, ಅವರು ಎರಡೂ ಕೈಗಳನ್ನು ಮೇಲಕ್ಕೆ ಎತ್ತಿ ನರ್ತಿಸುವಂತೆ ಖಂಡರಿಸಲಾಗಿದೆ. ಅವರು ಕೈ ಕಡಗ, ಕಾಲ್ಗಡಗ, ಸರಗಳನ್ನು ಧರಿಸಿದ್ದಾರೆ. ಚಿಗತನಹಳ್ಳಿಯ ಹೊಲದಲ್ಲಿ ಒಂದು ಮಹಾಸತಿ ಕಲ್ಲು ಕಂಡುಬಂದಿದ್ದು,

ಅದು ವಸ್ತ್ರಧಾರಿಯಾಗಿದ್ದು, ಬಲಗೈಯಲ್ಲಿ ಕನ್ನಡಿ ಹಾಗೂ ಎಡಗೈಯಲ್ಲಿ ನಿಂಬೆಹಣ್ಣು ಹಿಡಿದುಕೊಂಡಿದ್ದು, ಕೆಳಗೆ ಇಳಿಬಿಟ್ಟ ಶಿಲ್ಪದ ಕೆತ್ತನೆಯಿದೆ.

ಸಾಣಿಕೆರೆಯಲ್ಲಿ ದೊರೆತಿರುವ ಎರಡು ಮಹಾಸತಿ ಕಲ್ಲುಗಳು ಕೂಡ ವಿಶೇಷವಾಗಿವೆ. ಒಂದನೆಯ ಸತಿಕಲ್ಲನ್ನು ಕಪ್ಪು ಗ್ರಾನೈಟ್ ಶಿಲೆಯಿಂದ ಖಂಡರಿಸಲಾಗಿದ್ದು, ಒಬ್ಬ ಕೈ ಮುಗಿದು ನಿಂತಿರುವ ವೀರನ ಚಿತ್ರವಿದೆ. ಅವನು ವಸ್ತ್ರಧಾರಿಯಾಗಿದ್ದು, ಕೈ ಕಡಗ, ಕಾಲ್ಗಡಗಗಳನ್ನು ಧರಿಸಿದ್ದು, ತಲೆಗೆ ಮುಂಡಾಸು ಸುತ್ತಿಕೊಂಡಿದ್ದಾನೆ. ಪಕ್ಕದಲ್ಲಿ ಸ್ತ್ರೀಯು ವಸ್ತ್ರಾಧಾರಿಯಾಗಿದ್ದು, ಅವಳು ಕೈಗಳನ್ನು ಮೇಲಕ್ಕೆತ್ತಿ ನಿಂಬೆಹಣ್ಣು ಮತ್ತು ಕನ್ನಡಿಯನ್ನು ಹಿಡಿದುಕೊಂಡು ನೃತ್ಯಮಾಡುವಂತೆ ಕಂಡುಬರುತ್ತದೆ. ಅವಳು ಆಭರಣಗಳನ್ನು ಧರಿಸಿದ್ದಾಳೆ. ಎರಡನೆಯ ಸತಿಕಲ್ಲಿನಲ್ಲಿ ಒಬ್ಬಳೇ ನಿಂತಂತಹ ಸ್ತ್ರೀಯ ವಿಗ್ರಹವಿದೆ. ಅವಳು ಬಲಗೈಯನ್ನು ಇಳಿಬಿಟ್ಟಿದ್ದು, ಅದರಲ್ಲಿ ಚಿಕ್ಕ ಕೊಡದಾಕಾರದ ವಸ್ತುವನ್ನು ಹಿಡಿದುಕೊಂಡಿದ್ದಾಳೆ. ಎಡಗೈಯನ್ನು ಮೇಲಕ್ಕೆ ಎತ್ತಿ ಅದರಲ್ಲಿ ಕೂಡ ಒಂದು ವಸ್ತುವನ್ನು ಹಿಡಿದುಕೊಂಡಿದ್ದಾಳೆ. ತಲೆಯ ತುರುಬನ್ನು ಕಟ್ಟಿಕೊಂಡಿದ್ದಾಳೆ. ಮೇಲೆ ಸೂರ್ಯ–ಚಂದ್ರರ ಚಿತ್ರಗಳಿವೆ.

ಅದೇ ರೀತಿ ಕಸ್ತೂರಿ ತಿಮ್ಮನಹಳ್ಳಿಯಲ್ಲಿ ಪೂರ್ವಕ್ಕೆ ಗುಡಿಯಲ್ಲಿ ನಿಲ್ಲಿಸಿರುವ ಒಂದು ವಿಗ್ರಹವು ಸತಿಯದ್ದೇ ಆಗಿರುವಂತೆ ತೋರುತ್ತದೆ. ನಿಂತಿರುವ ಸ್ತ್ರೀ ಮತ್ತು ಪುರುಷನು ಎದೆಯ ಭಾಗದಲ್ಲಿ ಕೈ ಜೋಡಿಸಿ ಮುಗಿದುಕೊಂಡು ನಿಂತಿರುವುದು ವಿಶೇಷವಾಗಿದೆ. ಅವರು ವಸ್ತ್ರಧರಿಸಿದ್ದು, ಆಭರಣಗಳನ್ನು ಕೂಡ ಧರಿಸಿದ್ದಾರೆ. ಅವರ ಮೇಲ್ಭಾಗದಲ್ಲಿ ಕಮಲ ದಳದ ಚಿತ್ರವಿದೆ. ಅದರ ಮೇಲೆ ಶಿಲೆಯ ಬಲಭಾಗದಲ್ಲಿ ನಿಂತಂತಹ ನಂದಿಯ ಚಿತ್ರವಿದೆ. ಅದರ ಮೇಲೆ ಸೂರ್ಯ ಚಂದ್ರರ ಚಿತ್ರಗಳನ್ನು ಕಂಡರಿಸಿದ್ದಾರೆ.

ಒಟ್ಟಾರೆ ಮಹಾಸತಿ ಪದ್ಧತಿಯು ನಿಕೃಷ್ಟವೆನಿಸಿದರೂ ಅಂದಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುವುದೇ ಇದರ ಉದ್ದೇಶವೆಂದು ಹೇಳಬಹುದಾಗಿದೆ. ಒಟ್ಟಾರೆ ಈ ಅಧ್ಯಯನದಿಂದ ಈ ಪ್ರದೇಶದ ವೀರಗಲ್ಲಿನ ವೀರ ಸತಿಗಲ್ಲು ಸುಮಾರು ಕ್ರಿ.ಶ. ೬ನೇ ಶತಮಾನದಿಂದ ೧೯ನೇ ಶತಮಾನದ ಕೊನೆಯ ಕಾಲಘಟ್ಟದ್ದಾಗಿದೆ.

ವಿದ್ಯಾಭ್ಯಾಸ

ಶಾಸನಗಳಾಗಲಿ, ಸಾಹಿತ್ಯಗಳಾಗಲಿ ಆಗಿನ ಕಾಲದ ವಿದ್ಯಾಭ್ಯಾಸದ ವಿವರಗಳು ಅಷ್ಟಾಗಿ ದೊರಕುವುದಿಲ್ಲ. ಆದರೂ ದೇವಾಲಯಗಳು, ಮಠಗಳು, ಅಗ್ರಹಾರಗಳು, ಘಟಿಕಸ್ಥಾನಗಳು ವಿದ್ಯಾ ಕೇಂದ್ರದ ಪ್ರಮುಖ ಸ್ಥಾನಗಳಾಗಿದ್ದವು. ಜನರು ದೇವಸ್ಥಾನ ಮಠಗಳಿಗೆ ದಾನ ದತ್ತಿಗಳನ್ನು ಬಿಟ್ಟು ಕೊಡುವಾಗ, ಅಗ್ರಹಾರವನ್ನು ನಿರ್ಮಿಸುವಾಗ ವಿದ್ಯಾಭ್ಯಾಸಕ್ಕಾಗಿ ಎಂದು ಒಂದಷ್ಟು ಅಂಶವನ್ನು ನಿಗದಿಪಡಿಸುತ್ತಿದ್ದರು. ದೇವಸ್ಥಾನಗಳು, ಮಠಗಳು ವಿದ್ಯಾ ಕೇಂದ್ರಗಳಾಗಿಯೂ ಸಮಾಜದ ನೈತಿಕ ಮಟ್ಟವನ್ನು ಉತ್ತಮಗೊಳಿಸುತ್ತಿದ್ದವು.

೩.೨ ಧಾರ್ಮಿಕ ಸ್ಥಿತಿಗತಿ

ಧರ್ಮ ಆತ್ಮಮುಖಿ ಹಾಗೂ ಸಮಾಜಮುಖಿಯಾದುದು. ಧರ್ಮ ಜನಜೀವನದ ಸಂಸ್ಕೃತಿಯ ಜೀವಾಳ. ಮಾನವನು ನೈತಿಕ ಜೀವನ ನಡೆಸುವಲ್ಲಿ ಧರ್ಮದ ಪಾತ್ರ ಬಲು ಹಿರಿದು. ಏಕೆಂದರೆ

ಧರ್ಮವು ಭೌಗೋಳಿಕ ಮತ್ತು ನೈತಿಕ ನೆಲೆಗಟ್ಟುಗಳ ಮೇಲೆ ಪ್ರಭಾವ ಬೀರುತ್ತದೆ. ಒಂದು ಪರಿಸರದಲ್ಲಿ ಮಾನವನು ಯಾವುದೋ ಒಂದು ಒಪ್ಪಿತ ಆಧ್ಯಾತ್ಮಿಕ ಬದುಕನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡಿರುತ್ತಾನೆ. ಸಂಸ್ಕೃತಿಯ ಬಹು ಪ್ರಮುಖ ವಿಚಾರಗಳು, ಧಾರ್ಮಿಕ ಆಚರಣೆಗಳಲ್ಲಿ ವ್ಯಕ್ತವಾಗುತ್ತವೆ. ಧರ್ಮದ ನಂಬಿಕೆ, ಆಚರಣೆಗಳು ಅತಿರೇಕಕ್ಕೆ ಹೋದಾಗ ಬೇರೆ ಬೇರೆ ಧರ್ಮಗಳು ಹುಟ್ಟಿಕೊಳ್ಳಲು ಕಾರಣವಾಗುತ್ತವೆ.

ಪ್ರತಿಯೊಂದು ಪ್ರದೇಶವು ಹಲವು ಧರ್ಮಗಳನ್ನು ಒಳಗೊಂಡಿರುತ್ತದೆ. ಅದರಂತೆ ಬೌದ್ಧ, ಜೈನ, ಶೈವ, ವೈಷ್ಣವ, ವೀರಶೈವ ಪಂಥಗಳು ಚಳ್ಳಕೆರೆ ತಾಲ್ಲೂಕು ಪರಿಸರದ ಧಾರ್ಮಿಕ ಚರಿತ್ರೆಯಲ್ಲಿ ನೆಲೆಗೊಂಡಿವೆ. ಧರ್ಮದ ಸಂಘರ್ಷವಿದ್ದರೂ ಸಾರ್ವಜನಿಕವಾಗಿಲ್ಲ. ಶೈವ ಪ್ರಾಬಲ್ಯವಿದ್ದರೂ, ವೈಷ್ಣವ, ವೀರಶೈವ, ಜೈನ, ಬೌದ್ಧ ಧರ್ಮದವರು ಸಾಮರಸ್ಯದಿಂದ ಇದ್ದುದು ಕಂಡುಬರುತ್ತದೆ. ಎಲ್ಲಾ ಧರ್ಮೀಯರನ್ನು, ಧರ್ಮಗಳನ್ನು ಸಮಾನಾಗಿ ಕಾಣಲಾಗಿ ಧರ್ಮ ಸಮನ್ವಯತೆಯು ಏರ್ಪಟ್ಟಿತ್ತೆಂದು ತಿಳಿಯಲಾಗಿದೆ.

ಬೌದ್ಧ ಪಂಥ

ಚಿತ್ರದುರ್ಗ ಪ್ರದೇಶದ ಸುತ್ತಲೂ ಬೌದ್ಧ ಧರ್ಮದ ಸ್ಮಾರಕಗಳು ಹಲವಾರು ದೊರೆತಿವೆ. ಮೌರ್ಯರ ಕಾಲದ ಕಲೆಯ ಅವಶೇಷಗಳು ಇಲ್ಲಿ ಕಂಡುಬಂದಿವೆ. ಮೊಳಕಾಲ್ಮೂರು ತಾಲ್ಲೂಕಿನ ಪರಿಸರದಲ್ಲಿ ಬೌದ್ಧ ಧರ್ಮದ ಕುರುಹುಗಳು ಬ್ರಹ್ಮಗಿರಿಯಲ್ಲಿ ದೊರೆತಿರುವುದರಿಂದ ಇವೆರಡೂ ಪ್ರದೇಶಗಳ ನಡುವಿನ ಪ್ರದೇಶವಾದ ಚಳ್ಳಕೆರೆ ಪರಿಸರದಲ್ಲಿ ಬೌದ್ಧಧರ್ಮ ನೆಲೆಗೊಂಡಿರಬಹುದೆಂದು ಹೇಳಬಹುದು. ಆದರೆ ಇದಕ್ಕೆ ಪುಷ್ಠಿ ನೀಡುವಂತ ಯಾವುದೇ ಕುರುಹುಗಳು ನಮಗೆ ದೊರೆತಿಲ್ಲ. ಇದರಿಂದ ಬೌದ್ಧಧರ್ಮವು ಈ ಪ್ರದೇಶದಲ್ಲಿ ಅಷ್ಟಾಗಿ ಪ್ರಭಾವ ಬೀರಿಲ್ಲ ಎನ್ನಬಹುದು.

ಜೈನ ಪಂಥ

ಪ್ರಾಚೀನ ಕಾಲದಲ್ಲಿ ಜೈನಧರ್ಮ ಇಲ್ಲಿ ನೆಲೆಯೂರಿರುವ ಸಾಧ್ಯತೆಗಳಿವೆ. ಈ ಪ್ರದೇಶ ಗಂಗರಸರ ಆಳ್ವಿಕೆಗೆ ಒಳಪಟ್ಟಿತ್ತು. ಗಂಗರು ಜೈನ ಮತಾವಲಂಬಿಗಳಾಗಿದ್ದರಿಂದ ಇಲ್ಲಿ ಜೈನ ಧರ್ಮದ ಪ್ರಭಾವವನ್ನು ತಳ್ಳಿ ಹಾಕುವಂತಿಲ್ಲ. ಆದರೆ ನಂತರದ ದಿನಗಳಲ್ಲಿ ಈ ಪ್ರದೇಶದಲ್ಲಿ ಹೊಯ್ಸಳರು ಆಳ್ವಿಕೆಯನ್ನು ನಡೆಸಿದರು. ಅವರು ಮೊದಲು ಜೈನ ಧರ್ಮದ ಅನುಯಾಯಿಗಳಾಗಿದ್ದರಿಂದ ಈ ಪರಿಸರದಲ್ಲಿ ಜೈನ ಧರ್ಮದ ಪ್ರಭಾವವನ್ನು ಕಾಣಬಹುದು.

ಚಳ್ಳಕೆರೆ ತಾಲ್ಲೂಕಿನ ಪರುಶರಾಮಪುರ ಹೋಬಳಿ ಪ್ರದೇಶದಲ್ಲಿ ಹೆಚ್ಚಾಗಿ ಜೈನ ಧರ್ಮದ ಪ್ರಭಾವವಿದ್ದ ಕುರುಹುಗಳು ಸಿಗುತ್ತವೆ. ಅಂದರೆ ಕೆಲವು ಗ್ರಾಮಗಳ ಹೆಸರುಗಳು, ದೇವಾಲಯಗಳ ಕಲಾಶೈಲಿ ಇವುಗಳಿಂದ ಇಲ್ಲಿ ಜೈನ ಧರ್ಮ ನೆಲೆಯೂರಿತ್ತೆಂದು ಊಹಿಸಬಹುದು.

ಶೈವ ಪಂಥ

ಶೈವ ಧರ್ಮವು ದಕ್ಷಿಣ ಭಾರತದಲ್ಲಿ ಹೆಚ್ಚು ಪ್ರಚಲಿತದಲ್ಲಿತ್ತು. ಕರ್ನಾಟಕದ ಶೈವ ಇತಿಹಾಸದಲ್ಲಿ ಕಾಪಾಲಿಕರ ಸಂಖ್ಯೆ ಕಡಿಮೆಯಿದ್ದು, ಕಾಳಮುಖ ಪಾಳುಪತರ ಸಂಖ್ಯೆ ಸಾಕಷ್ಟಿದೆ. ಶಿವನನ್ನು

ಸತ್ಯದ ಸಾಕಾರಮೂರ್ತಿ ಎಂದು ಪ್ರತಿಪಾದಿಸಲಾಗುತ್ತದೆ. ಜನನ-ಮರಣಗಳಿಂದ ರಕ್ಷಿಸುವವನೇ 'ಶಿವ' ಎಂಬ ಭಾವನೆ ಜನರಲ್ಲಿ ಮೂಡಿದೆ. ಸತತ ಭಕ್ತಿಯಿಂದ ಶಿವನ ಪ್ರೀತಿಗೆ ಪಾತ್ರರಾಗಿ ಮೋಕ್ಷ ಪಡೆಯಬಹುದು ಎಂಬ ನಂಬಿಕೆ ಶೈವ ಧರ್ಮದಲ್ಲಿದೆ. ಈ ಪ್ರದೇಶದಲ್ಲಿ ಆಡಳಿತ ನಡೆಸಿದ ಎಲ್ಲಾ ಮನೆತನದವರು ಕೂಡ ಈ ಶೈವ ದೇವಾಲಯಗಳ ನಿರ್ಮಾಣಕ್ಕೆ, ಪೂಜಾ ಕಾರ್ಯಗಳಿಗೆ, ನೈವೇಧ್ಯ, ನಂದಾದೀಪ, ಜೀರ್ಣೋದ್ಧಾರ, ಅಗ್ರಹಾರಗಳಿಗೆ ದಾನ-ದತ್ತಿಗಳನ್ನು ನೀಡಿರುವುದು ಶಾಸನಗಳಿಂದ ತಿಳಿದುಬರುತ್ತದೆ. ಇದರಿಂದ ಶೈವ ಧರ್ಮದ ಪ್ರಾಬಲ್ಯವನ್ನು ಹೆಚ್ಚಾಗಿ ಕಾಣಬಹುದು.

ಉದಾಹರಣೆಗೆ ರಾಷ್ಟ್ರಕೂಟರ ಸಾಮಂತರಾಗಿ ನೊಳಂಬರು ಮದರಿಕಲ್ಲನ್ನು ಆಳುತ್ತಿರುವಾಗ ಪರಮೇಶ್ವರನ ರಾಣಿ ಗಾವಗಣಬ್ಬೆಯು ಮದರಿಕಲ್ಲಿನ (ಚಿಕ್ಕ ಮಧುರೆ) ಗಾವಗಣೇಶ್ವರ ದೇವಾಲಯ ಕಟ್ಟಿಸಿ ಅದಕ್ಕೆ ಉದಾರವಾಗಿ ಭೂಮಿಯನ್ನು ದತ್ತಿ ನೀಡಿದಳೆಂದು ಅಲ್ಲಿನ ಶಾಸನ[೧೧] ತಿಳಿಸುತ್ತದೆ. ಮತ್ತೊಂದು ಶಾಸನವು ಪರಮೇಶ್ವರನ ಮತ್ತೊಬ್ಬ ರಾಣಿಯಾದ ನಾಗಮಾರಬ್ಬೆ ಶಿವಾಲಯಕ್ಕೆ ಭೂದತ್ತಿಯನ್ನು ನೀಡಿದ್ದರ ಉಲ್ಲೇಖವನ್ನು ಕಾಣಬಹುದು. ಹಂಪಿಯ ವಿರೂಪಾಕ್ಷ ದೇವರ ನಿತ್ಯ ನೈವೇದ್ಯ ನಂದಾ ದೀಪ್ತಿಗಾಗಿ ರಾಯದುರ್ಗ ರಾಜ್ಯದ ದೊಡ್ಡೇರಿ ಸೀಮೆಯ ಚಿತ್ರಗೊಂಡನಹಳ್ಳಿ ಗ್ರಾಮ ದಾನವನ್ನು ಹರತಿಯ ಹೊಟ್ಟೆಪ್ಪನಾಯಕನು ನೀಡಿರುವನೆಂದು ಚಳ್ಳಕೆರೆಯ ೫೪ನೇ ಶಾಸನ ತಿಳಿಸುತ್ತದೆ.

ವೈಷ್ಣವ ಧರ್ಮ

ಈ ಪರಿಸರದಲ್ಲಿ ವೈಷ್ಣವ ಧರ್ಮ ಆಚರಣೆಯಲ್ಲಿದುದಕ್ಕೆ ಹಲವಾರು ಶಾಸನಗಳು ಮಾಹತಿಯನ್ನು ನೀಡುತ್ತವೆ. ಹೊಯ್ಸಳ ವಿಷ್ಣುವರ್ಧನನು ವೈಷ್ಣವ ಮತವನ್ನು ಸ್ವೀಕರಿಸಿ ಅದರ ಏಳಿಗೆಗಾಗಿ ಶ್ರಮಿಸಿದನು. ಇದರಿಂದ ಹೊಯ್ಸಳರು ಈ ಪ್ರದೇಶದಲ್ಲಿ ಆಡಳಿತ ನಡೆಸಿದ್ದರಿಂದ ಇಲ್ಲಿ ವೈಷ್ಣವ ಪಂಥದ ಪ್ರಭಾವವನ್ನು ಕಾಣಬಹುದು. ಮುಂದುವರೆದು ವಿಜಯನಗರದ ಅರಸರಾದ ಕೃಷ್ಣದೇವರಾಯ, ಅಚ್ಯುತರಾಯ ಇವರು ವೈಷ್ಣವ ಮತಾವಲಂಬಿಗಳಾದ ಕೂಡಲೇ ಈ ಪರಿಸರದಲ್ಲಿ ಅದರ ಪ್ರಭಾವ ಬೀರಿತೆಂದೇ ಹೇಳಬೇಕು. ಕಾರಣ ವಿಜಯನಗರದರಸರು ಇಲ್ಲಿ ತಮ್ಮ ಸಾಮಂತರಸರನ್ನು ನೇಮಿಸಿದ್ದರು. ಇದರಿಂದ ಇಂದಿಗೂ ಇಲ್ಲಿ ವೈಷ್ಣವ ಧರ್ಮದ ಪ್ರಭಾವವನ್ನು ಕಾಣಬಹುದು.

ವೀರಶೈವ ಪಂಥ

ಕ್ರಿ.ಶ. ಹನ್ನೊಂದನೆಯ ಶತಮಾನದ ಮಧ್ಯಭಾಗದಿಂದ ಪಾಶುಪತ ಕಾಳಾಮುಖರ ಚಟುವಟಿಕೆಗಳ ಒಂದು ಪಂಗಡವಾಗಿ ಹೊಸ ರೂಪವನ್ನು ಪಡೆದು ವೀರಶೈವ ಧರ್ಮವಾಯಿತು. ಇಲ್ಲಿ ಕಲ್ಯಾಣಿ ಚಾಲುಕ್ಯರು ಆಡಳಿತ ನಡೆಸಿದ ಪರಿಣಾಮ ವೀರಶೈವ ಧರ್ಮವು ಅಸ್ತಿತ್ವಕ್ಕೆ ಬಂದಿತು. ನಂತರ ಆಡಳಿತ ವಹಿಸಿಕೊಂಡ ಪಾಳೆಯಗಾರರು ಮೂಲದಲ್ಲಿ ಶೈವ ಪಾಲಕರಾಗಿದ್ದು ಆನಂತರ ವೀರಶೈವ ಧರ್ಮವನ್ನು ಅನುಸರಿಸಿದರು.

ಕ್ರಿ.ಶ. ೧೬೭೬ರಲ್ಲಿ ಅಧಿಕಾರಕ್ಕೆ ಬಂದ ಚಿಕ್ಕಣ್ಣನಾಯಕನ ಕಾಲ ಧಾರ್ಮಿಕ ದೃಷ್ಟಿಯಿಂದ ಮುಖ್ಯವಾದುದು. ಇವನ ಅವಧಿಯಲ್ಲಿ ಚಿತ್ರದುರ್ಗದ ಪಾಳೆಯಗಾರರ ಅರಸು ಮನೆತನದವರು

ವೀರಶೈವ ಧರ್ಮವನ್ನು ಸ್ವೀಕರಿಸಿದರೆಂತಲೂ, ಅನಂತರ ಅದನ್ನು ತ್ಯಜಿಸಿದರೆಂತಲೂ ತಿಳಿದುಬರುತ್ತದೆ. ಆದರೆ ಮಲ್ಲವ್ವನಾಗತಿ ಎಂಬುವವಳು ವೀರಶೈವಳಾಗಿಯೇ ಉಳಿದಳೆಂದು ತಿಳದುಬರುತ್ತದೆ. ಬಹುಶಃ ಹಟ್ಟಿ ಪಾಳೆಯಗಾರರು ವೀರಶೈವರಾಗಿದ್ದರಬೇಕು. ಮಲ್ಲವನಾಗತಿ ಹಟ್ಟಿ ಮಲ್ಲಪ್ಪನಾಯಕನ ಮಗಳೆಂದು ಹೇಳಲಾಗಿದೆ.[೨]

ಚಿತ್ರದುರ್ಗದ ಪಾಳೆಯಗಾರರು ಶೃಂಗೇರಿ ಮಠಾದೀಶರ ಅನನ್ಯಭಕ್ತರಾಗಿದ್ದರು. ಇವರು ಈ ಮಠಕ್ಕೆ ಅನೇಕ ದಾನ ದತ್ತಿಗಳನ್ನು ನೀಡಿದ್ದಾರೆ. ಶೃಂಗೇರಿ ಜಗದ್ಗುರುಗಳವರು ಪಾಳೆಯಗಾರರ ಮೂಲ ಗುರುಗಳಾಗಿದ್ದರಿಂದ ಮಠದ ಒಂದು ಶಾಖೆಯನ್ನು ಚಿತ್ರದುರ್ಗದಲ್ಲಿ ಸ್ಥಾಪಿಸಿದರು, ಬರಮಣ್ಣನಾಯಕನು ಶ್ರೀ ಮುರುಘಾರಾಜೇಂದ್ರರಿಂದ ಉಪಕೃತನಾಗಿ ಅವರಿಗೆ ಚಿತ್ರದುರ್ಗದಲ್ಲಿ ಬೃಹನ್ಮಠವನ್ನು ಕಟ್ಟಿಸಿಕೊಟ್ಟನು. ಈ ಮಠಕ್ಕೆ ದಾನ-ದತ್ತಿಗಳನ್ನು ನೀಡಿದನು. ಈ ಪ್ರದೇಶವು ವೀರಶೈವ ಪಂಥವನ್ನು ಸ್ವೀಕರಿಸಿ ಆಚರಣೆಯಲ್ಲಿ ತಂದಿದ್ದನ್ನು ಗಮನಿಸಬಹುದು.

ಶಾಕ್ತ ಪಂಥ

ಮೂಲತಃ ಪಾಳೆಯಗಾರರು ಶಕ್ತಿ ದೇವತೆಗಳ ಆರಾಧಕರಾಗಿದ್ದರು. ಅವರು ತಮ್ಮ ಕುಲದೈವಗಳಾಗಿ ದೇವತೆಗಳನ್ನು ಆರಾಧಿಸುತ್ತಿದ್ದರು. ಹೀಗಾಗಿ ಈ ಪ್ರದೇಶದಲ್ಲಿ ಶಾಕ್ತಪಂಥವೂ ಕೂಡ ನೆಲೆಸಿತ್ತೆಂದು ನಾವು ತಿಳಿಯಬಹುದು. ಚಿತ್ರದುರ್ಗ ಪಾಳೆಯಗಾರರ ಶಕ್ತಿದೇವತೆಯಾದ ಉಚ್ಚಂಗೆಮ್ಮನನ್ನು ಕುಲದೇವತೆಯಾಗಿ ಸ್ವೀಕರಿಸಿದ್ದರು.

ಹೀಗೆ ಇಲ್ಲಿ ಆಳ್ವಿಕೆ ನಡೆಸಿದ ಹಲವು ರಾಜಮನೆತನಗಳು ಮಠ, ದೇವಸ್ಥಾನ, ಬ್ರಾಹ್ಮಣ ಹಾಗೂ ವೀರರಿಗೆ ಯಥೋಚಿತವಾಗಿ ಭೂದಾನ, ನೆತ್ತರದ ಕೊಡುಗೆ, ಗ್ರಾಮದಾನ, ಅಗ್ರಹಾರ ದಾನಗಳನ್ನು ನೀಡುತ್ತಿದ್ದರು. ಇವರುಗಳು ಧರ್ಮಶ್ರದ್ಧೆಯನ್ನು ಹೊಂದಿದ್ದು, ಅನೇಕ ದೇವಾಲಯಗಳಿಗೆ ದೇವರ ನಿತ್ಯ ಪೂಜೆ, ಉತ್ಸವಗಳಿಗೆ, ಮಠಗಳಿಗೆ ದಾನ-ದತ್ತಿಗಳನ್ನು ನೀಡಿದ್ದಾರೆ. ಹೀಗೆ ಜೈನ, ಶೈವ, ಕಾಳಮುಖ, ವೈಷ್ಣವ, ಶಾಕ್ತ ಧರ್ಮಗಳಿಗೂ, ದೇವತೆಗಳಿಗೂ ಭಕ್ತಿಯಿಂದ ನಡೆದುಕೊಂಡು ಆ ಧರ್ಮಗಳ ಸಂರಕ್ಷಣೆ ಹಾಗೂ ಪುರೋಭಿವೃದ್ಧಿಯನ್ನು ಸ್ಥಾಪಿಸಿ ಧಾರ್ಮಿಕ ಸಹಿಷ್ಣುತೆಯನ್ನು ಸಾಧಿಸಿದರು.

೩.೩ ಆರ್ಥಿಕ ಸ್ಥಿತಿಗತಿ

ಸಮಾಜದಲ್ಲಿ ಆರ್ಥಿಕ ವ್ಯವಸ್ಥೆಯು ಪ್ರಮುಖ ಪಾತ್ರವಹಿಸುವ ಸಾಧನವಾಗಿದೆ. ಉಳಿದ ಕ್ಷೇತ್ರಗಳ ಸ್ಥಿತಿಗತಿಗಳು ಆರ್ಥಿಕತೆಯನ್ನು ಅವಲಂಬಿಸಿ ವ್ಯವಸ್ಥಿತಗೊಂಡಿದೆ. ಪ್ರಕೃತಿದತ್ತವಾದ ಮಣ್ಣು, ನೀರು, ಖನಿಜ, ಅರಣ್ಯ ಮುಂತಾದವುಗಳನ್ನು ನೈಸರ್ಗಿಕ ಸಂಪನ್ಮೂಲಗಳು ಎನ್ನುವರು. ಒಂದು ನಾಡಿನ ನೈಸರ್ಗಿಕ ಸಂಪನ್ಮೂಲಗಳು ಮತ್ತು ಅವುಗಳನ್ನು ಬಳಸಿಕೊಳ್ಳುವ ಉಪಯೋಗಪಡಿಸಿಕೊಳ್ಳುವ ಜನರ ಪರಿಶ್ರಮದಿಂದ ಆ ನಾಡಿನ ಆರ್ಥಿಕ ವ್ಯವಸ್ಥೆಯನ್ನು ತಿಳಿದುಕೊಳ್ಳಬಹುದು. ಈ ಪ್ರದೇಶದಲ್ಲಿ ಅಧಿಕಾರ ನಡೆಸಿದ ಹಲವು ಪ್ರಮುಖ ರಾಜಮನೆತನಗಳಿಗೆ ಸಂಬಂಧಿಸಿದ ಶಾಸನಗಳಲ್ಲೂ ಅಂದಿನ ಆರ್ಥಿಕ ವ್ಯವಸ್ಥೆಯನ್ನು ತಿಳಿಯಲು ನಮಗೆ ಸಹಾಯಕಾರಿಯಾಗಿವೆ.

ಭೂ ಸಂಪತ್ತು

ಭೂಮಿಯನ್ನು 'ಕೃಷಿಗೆ ಯೋಗ್ಯವಾದ ಭೂಮಿ' ಮತ್ತು 'ಬೀಳು ಭೂಮಿ' ಎಂದು ವಿಭಾಗಿಸಬಹುದು. ಬೀಳು ಭೂಮಿಯೆಂದರೆ ಕೃಷಿಗೆ ಯೋಗ್ಯವಲ್ಲದ ಭೂಮಿ. ಬೀಳು ಭೂಮಿಯನ್ನು ಪಶುಪಾಲನೆಗಾಗಿ ಹುಲ್ಲುಗಾವಲು ಎಂದು ಉಪಯೋಗಿಸುತ್ತಿರುವಂತೆ ಕಾಣುತ್ತದೆ. ಊರಿಗೊಂದು 'ಗೋಮಾಳ' ಇರುತ್ತಿತ್ತು. ಇಲ್ಲಿ ದೊರಕಿರುವ ಶಾಸನಗಳಲ್ಲಿ ಭೂ ದಾನವೇ ಹೆಚ್ಚಾಗಿರುವುದನ್ನು ಕಾಣಬಹುದು. ಪ್ರಾಂತ್ಯಗಳ ನಾಯಕರು ವಿಜಯನಗರದ ಅರಸರ ಒಪ್ಪಿಗೆಯನ್ನು ಪಡೆದು ಕಾಡುಗಳನ್ನು ಕಡಿದು ಊರುಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಉದಾ: ಹರತಿ, ದೊಡ್ಡೇರಿ ಊರುಗಳನ್ನು ತಿಪ್ಪಣ್ಣನಾಯಕನು ತನ್ನ ಪೂರ್ವಿಕರ ನೆನಪಿಗಾಗಿ ನಿರ್ಮಿಸಿದನು.

ಭೂಮಿಯ ಗೇಣಿ ಅಥವಾ ಹಿಡುವಳಿ

ಭೂಮಿಯ ಹಿಡುವಳಿಗಳಲ್ಲಿ 'ಉಪಕಾರಿ' ಮತ್ತು 'ಸೇವೆಗಾಗಿ' ಎಂದು ಎರಡು ವಿಭಾಗ ಮಾಡಬಹುದು. ಉಪಕಾರಿ ಹಿಡುವಳಿಯಲ್ಲಿ ಬ್ರಹ್ಮದಯಾ, ದೇವದಯಾ ಮತ್ತು ಮಹಾಪುರುಷರೆಂಬ ಮೂರು ರೀತಿಗಳಿದ್ದವು. ಬ್ರಾಹ್ಮಣನಿಗೆ ಅಥವಾ ಬ್ರಾಹ್ಮಣ ಸಮುದಾಯಕ್ಕೆ ದಾನವಾಗಿ ಕೊಟ್ಟ ಭೂದಾನಕ್ಕೆ ಬ್ರಹ್ಮದಯಾ ಎಂದು ಕರೆಯುವರು. ಸರ್ವಸೇವೆಗಾಗಿ ಕೊಡುವ ಭೂದಾನಕ್ಕೆ ದೇವದಯಾ ಎಂದೂ ಮಠಾಪುರವೆಂದರೆ ಮಟಗಳು ಧಾರ್ಮಿಕ ಪರಂಪರೆಯನ್ನು ಕಾಪಾಡಿಕೊಂಡು ಬರುವುದಕ್ಕಾಗಿ ನೀಡುತ್ತಿದ್ದ ಭೂದಾನವಾಗಿದೆ.[೧೩]

ಭೂಮಿಯ ಪ್ರಕಾರಗಳು

ಭೂಮಿಯನ್ನು ಎರಡು ಪ್ರಕಾರವಾಗಿ ವಿಭಾಗಿಸಿರುವುದನ್ನು ಗಮನಿಸಬಹುದು. ೧. ದೇವ ಮಾತೃಕೆ ೨. ನದಿ ಮಾತೃಕೆ. ದೇವ ಮಾತೃಕೆ ಎಂದರೆ ಮಳೆಯನ್ನವಲಂಬಿಸಿ ಸಾಗುವಳಿ ಮಾಡುವ ಭೂಮಿ, ನದಿ ಮಾತೃಕೆಯೆಂದರೆ ನದಿ-ಕೆರೆ-ಬಾವಿಗಳನ್ನು ಅವಲಂಬಿಸಿ ಸಾಗುವಳಿ ಮಾಡುವ ಭೂಮಿ ಅಂದರೆ ನೀರಾವರಿ. ಬುಕಾನನ್ನನು ಈ ಪ್ರದೇಶಗಳ ಮಣ್ಣಿನ ಲಕ್ಷಣವನ್ನು ವರ್ಣಿಸುತ್ತಾ – ಚಿತ್ರದುರ್ಗ ಪ್ರದೇಶದಲ್ಲಿ ಹೆಚ್ಚಾಗಿ ಸಾಗುವಳಿಯಾಗದ ಕಪ್ಪು ಮಣ್ಣಿನ ಭೂಮಿಯಿದೆ ಎಂದು ಹೇಳುತ್ತಾ ಈ ರೀತಿಯ ಭೂಮಿ ಪೂರ್ವ ಮೈದಾನದಲ್ಲಿದೆ ಎಂದು ಹೇಳಿದ್ದಾನೆ.

ಭೂ ಮಾಪನ

ಭೂಮಿಯ ಅಳತೆಯ ಕುರಿತು ಶಾಸನಗಳಲ್ಲಿ ಮಾಹಿತಿ ವಿರಳವಾಗಿದೆ. ಶಾಸನಗಳಲ್ಲಿ ಖಂಡುಗ ಭೂಮಿ, ಕೊಳಗ ಭೂಮಿ, ಬಳ್ಳ ಭೂಮಿ ಎಂದು ವಿವರವಿದೆ. ಹೊಲಗಳನ್ನು ಅಳೆಯುವಾಗ ಬೀಜಾವರಿ ಪದ್ಧತಿಯನ್ನು ಅನುಸರಿಸುತ್ತಿದ್ದರೆಂದು ಕಾಣುತ್ತದೆ. 'ಬೀಜಾವರಿ ಹತ್ತು ಕೊಳಗ' ಎಂಬ ಪದವನ್ನು ಕಾಣಬಹುದು. ಅಳತೆಗೋಲಿನ ಸಹಾಯದಿಂದ ಹೊಲಗಳನ್ನು 'ಮತ್ತರು' ಮತ್ತು 'ಕಮ್ಮ' (ಕಂಬ)ಗಳೆಂಬುದಾಗಿ ಅಳೆಯುತ್ತಿದ್ದರು. ಇವುಗಳ ಪ್ರಮಾಣ ಊರಿಂದೂರಿಗೆ ಭಿನ್ನವಾಗಿರುತ್ತಿತ್ತು. ಚಿಕ್ಕ ಮಧುರೆಯ ಶಾಸನದಲ್ಲಿ ರಾಣಿಯಾದ ಗಾವಣಗಬ್ಬೆಯು ಶಿವಾಲಯವನ್ನು ಕಟ್ಟಿಸಿ ಅದಕ್ಕೆ ೧೪ ಮತ್ತರು[೧೪] ಭೂಮಿಯನ್ನು ದಾನವಾಗಿ ನೀಡಿದ್ದರ ಉಲ್ಲೇಖವಿದೆ.

ಕೃಷಿ

ಈ ಪರಿಸರದಲ್ಲಿ ಕೃಷಿಯು ಪ್ರಧಾನವಾದ ಕಸುಬಾಗಿದ್ದಂತೆ ತೋರುತ್ತದೆ. ಕೃಷಿ ಮಾಡುವನನ್ನು 'ಒಕ್ಕಲಿಗ' ಎಂದು ಕರೆಯುವುದು ರೂಢಿಯಲ್ಲಿತ್ತು. ಭೂಮಿಯ ಮಾಲಿಕರು ತಾವೇ ಸ್ವತಃ ಸಾಗುವಳಿ ಮಾಡುತ್ತಿರಲಿಲ್ಲ. ಕೂಲಿ ತೆಗೆದುಕೊಂಡು ಸಾಗುವಳಿ ಮಾಡುತ್ತಿದ್ದವರಿಗೆ ಗೇಣಿದಾರರು ಎಂದೂ ಗೇಣಿದಾರರ ಕೆಳಗೆ ಕೂಲಿಗಾಗಿ ದುಡಿಯುತ್ತಿದ್ದ ಜನರಿಗೆ ಜೀತದಾಳು ಎಂದೂ ಕರೆಯುತ್ತಿದ್ದರು. ಸಾಮಾನ್ಯ ಜನರು ಹೆಚ್ಚಾಗಿ ಕೃಷಿ ಚಟುವಟಿಕೆಯಲ್ಲೇ ತೊಡಗಿಕೊಂಡಿದ್ದಂತೆ ತೋರುತ್ತದೆ.

ಬೆಳೆಗಳು

ಚಳ್ಳಕೆರೆ ಪರಿಸರವು ಬಯಲು ಸೀಮೆಯಾಗಿದ್ದು, ಇಲ್ಲಿ ಮಳೆ ಆಶ್ರಿತ ವ್ಯವಸಾಯ ಹೆಚ್ಚು ಪ್ರಚಲಿತದಲ್ಲಿತ್ತೆಂದು ತೋರುತ್ತದೆ. ಆದ್ದರಿಂದ ಈ ಪರಿಸರದಲ್ಲಿ ಹೆಚ್ಚು ರಾಗಿ ಜೋಳ, ನವಣೆಗಳನ್ನು ಮೊದಲು ಬೆಳೆದು ಆನಂತರ ಸಜ್ಜೆ ಮತ್ತು ಹತ್ತಿಯನ್ನು ಬೆಳೆಯುತ್ತಿದ್ದರು. ನೀರಾವರಿ ಸೌಲಭ್ಯವಿದ್ದ ಕಡೆ ಮಾತ್ರ ಭತ್ತವನ್ನು ಬೆಳೆಯುತ್ತಿದ್ದರು. ಅಲ್ಲದೆ ಗೋಧಿ, ಜೋಳ, ಕಬ್ಬನ್ನು ಬೆಳೆಯುತ್ತಿದ್ದರು. ದ್ವಿದಳ ಧಾನ್ಯಗಳಾದ ತೊಗರಿ ಹೆಸರು, ಕಡಲೆ, ಕುಸುಬಿ, ಅಲಸಂದೆ, ಮುಂತಾದವುಗಳನ್ನು ಬೆಳೆಸುತ್ತಿದ್ದರು. ಈಗ ಈ ಪರಿಸರದಲ್ಲಿ ಪ್ರಧಾನವಾಗಿ ನೆಲಗಡಲೆ(ಶೇಂಗಾ) ಬೆಳೆಯುತ್ತಿದ್ದಾರೆ.

ಇವುಗಳ ಜೊತೆಗೆ ತೆಂಗು, ಬಾಳೆ, ಮಾವು, ಸೀಬೆ, ನಿಂಬೆ, ಅಡಿಕೆ, ವೀಳ್ಯದೆಲೆ ಮುಂತಾದ ತೋಟದ ಬೆಳೆಗಳನ್ನು ಬೆಳೆಯುತ್ತಿದ್ದರು. ಜೊತೆಗೆ ಮೆಣಸಿನ ಕಾಯಿ, ಬದನೆ, ಬೆಂಡೆ, ಸಿಹಿಗುಂಬಳ, ಹುರಳಿ, ಅವರೆ, ನಿಂಬೆ ಮುಂತಾದ ತರಕಾರಿಗಳನ್ನು ಬೆಳೆಯುತ್ತಿದ್ದರು.

ನೀರಾವರಿ

ಈ ಪರಿಸರವು ಬಯಲು ಸೀಮೆಯಾಗಿದ್ದು, ಇಲ್ಲಿ ಯಾವುದೇ ಜೀವಂತ ನದಿ ಪಾತ್ರಕ್ಕೆ ಒಳಗಾಗಿಲ್ಲ. ಆದ್ದರಿಂದ ಕೆರೆ-ಕಾಲುವೆಗಳು ಕೃಷಿ ಚಟುವಟಿಕೆಗಳಿಗೆ ನೀರೊದಗಿಸುವ ಪ್ರಮುಖ ತಾಣಗಳಾಗಿವೆ. ಇಲ್ಲಿನ ಶಾಸನಗಳಲ್ಲಿ ಕೆರೆಯನ್ನು ಕಟ್ಟಿಸಿದ್ದರ ಉಲ್ಲೇಖ ನಮಗೆ ಸಿಗುವುದಿಲ್ಲ. ಈ ತಾಲ್ಲೂಕಿನ ಪೂರ್ವ ಭಾಗದಲ್ಲಿ ದಕ್ಷಿಣೋತ್ತರವಾಗಿ ಹರಿಯುವ ವೇದಾವತಿ ನದಿಯು ತಕ್ಕಮಟ್ಟಿಗೆ ಕೃಷಿಗೆ ನೀರನ್ನು ಒದಗಿಸುತ್ತದೆ. ಇದರ ಜೊತೆಗೆ ಚಿಕ್ಕಮಧುರೆ, ಸಾಣಿಕೆರೆ, ಗಂಜಿಗಂಟೆ, ದೊಡ್ಡೇರಿ ಮೂಲಕ ಹರಿಯುವ ಗರಣಿ ಹಳ್ಳ ಕೂಡ ನೀರಿನ ಮೂಲವಾಗಿ ಕಾರ್ಯನಿರ್ವಹಿಸಿದೆ. ಇದಕ್ಕೆ ಪುರಾವೆಯಾಗಿ ಇಲ್ಲಿ ಪ್ರಾಗಿತಿಹಾಸ ಮಾನವನು ನೆಲೆಸಿದ ಅವಶೇಷಗಳು ದೊರಕುತ್ತಿವೆ.

ಈ ಪರಿಸರದಲ್ಲಿ ಕಂಡುಬರುತ್ತಿರುವ ಪ್ರಮುಖ ಕೆರೆಗಳೆಂದರೆ ಹಳೇದೊಡ್ಡೇರಿಯ ದೊಡ್ಡಕೆರೆ, ಸಾಣಿಕೆರೆಯ ಕೆರೆ, ಚಿಕ್ಕಮಧುರೆಯ ಕೆರೆ, ಚಳ್ಳಕರೆಯ ಕೆರೆ, ಮೀರಾಸಾಬಿಹಳ್ಳಿಯ ರಾಣಿಕೆರೆ ಪ್ರಧಾನವಾದವು. ಇವುಗಳಲ್ಲಿ ಇಂದು ರಾಣಿಕೆರೆಯು ಅತ್ಯಂತ ದೊಡ್ಡ ಕರೆಯಾಗಿದ್ದು, ಸಾವಿರಾರು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುತ್ತಿದೆ. ಈ ಮೇಲೆ ಉಲ್ಲೇಖಿಸಿದ ಎಲ್ಲಾ ಕೆರೆಗಳೂ ಸಹ ಮಳೆ ಆಶ್ರಿತ ಕೆರೆಗಳಾಗಿವೆ. ಇವು ಮಳೆಗಾಲದಲ್ಲಿ ತುಂಬಿ ನಂತರ ಬೇಸಿಗೆ

ಕಾಲದಲ್ಲಿ ಭತ್ತಿ ಹೋಗುತ್ತವೆ. ಹೀಗಾಗಿ ಈ ಪರಿಸರದಲ್ಲಿ ವರ್ಷ ಪೂರ್ತಿ ನೀರೊದಗಿಸುವ ಯಾವ ಮೂಲವೂ ಇಲ್ಲದಿರುವುದನ್ನು ಗಮನಿಸಬಹುದು.

ಅಳತೆ ಮತ್ತು ತೂಕಗಳು

ಯಾವುದೇ ಒಂದು ವಸ್ತುವನ್ನು ತೆಗೆದುಕೊಳ್ಳುವಾಗ ಅಥವಾ ಕೊಡುವಾಗ ನಿಗದಿಪಡಿಸಿದ ಪ್ರಮಾಣವೊಂದಿರುತ್ತದೆ. ಅದರಂತೆ ಈ ಪರಿಸರಲ್ಲಿ ಖಂಡುಗ, ಕೊಳಗ, ಸೊಂಟಿಗ, ಮಣ, ಮಾನ, ಪಳಿಗೆ, ಪಂಚಕ ಮೊದಲಾದ ಅಳತೆಗಳಿದ್ದವು. ಕೊಳಗದಲ್ಲಿ ಧರ್ಮ ಕೊಳಗ, ದೇವರ ಕೊಳಗ ಇತ್ತೆಂಬುದು ಶಾಸನಗಳಿಂದ ತಿಳಿದುಬರುತ್ತದೆ. 'ಕೊಳಗ ಮಾನ್ಯ'ವೆಂಬ ಮರ್ಯಾದೆಯೂ ಇತ್ತು.

ಸಾಮಾನ್ಯವಾಗಿ ಪಾಳೆಯಗಾರರ ಕಾಲದಲ್ಲಿ ಹತ್ತಿ, ಶುಂಠಿ, ಅರಿಶಿಣ, ಮೆಣಸು, ಸಕ್ಕರೆ, ಮೆಣಸಿನಕಾಯಿ, ಬೆಲ್ಲ ಮೊದಲಾದವುಗಳು ಮಣದ ಅಳತೆಯಲ್ಲಿ ವ್ಯಾಪಾರವಾಗುತ್ತಿದ್ದವು. ಎಣ್ಣೆ-ತುಪ್ಪಗಳಂತಹ ದ್ರವ ಪದಾರ್ಥಗಳನ್ನು ಅಳೆಯಲು ಸೊಲುಗೆಯನ್ನು ಉಪಯೋಗಿಸುತ್ತಿದ್ದರು. ಬೆಲ್ಲದ ಅಚ್ಚು, ಅಡಿಕೆ, ಎಲೆ, ತೆಂಗಿನಕಾಯಿ, ಹಣ್ಣುಗಳನ್ನು ಎಣಿಸಿಕೊಡುತ್ತಿದ್ದರು.[೧೫]

ಕಂದಾಯ ವ್ಯವಸ್ಥೆ

ಕಂದಾಯವನ್ನು ಧಾನ್ಯ ಮತ್ತು ದ್ರವರೂಪಗಳಲ್ಲಿ ವಸೂಲು ಮಾಡುವ ಪದ್ಧತಿಯಿತ್ತು. ವಿವಿಧ ಕಸುಬುಗಳನ್ನು ಮಾಡುವವರ ಮೇಲೆ ತೆರಿಗೆಗಳನ್ನು ವಿಧಿಸುತ್ತಿದ್ದರು. ಉಪ್ಪಾರರ ಮೇಲೆ 'ಉಪ್ಪಿನ ತೆರಿಗೆ'ಯನ್ನು ನೇಕಾರರ ಮೇಲೆ 'ಮಗ್ಗದೆರೆ' ಗಾಣಿಗರ ಮೇಲೆ 'ಗಾಣದೆರಿಗೆ' ತೋಟಗಾರರ ಮೇಲೆ 'ತೋಟದ ಸುಂಕ' ಜೊತೆಗೆ ಸಂತೆ ಸುಂಕ, ಮಾರ್ಗ ಸುಂಕ, ವ್ಯಾಪಾರದ ಮೇಲಿನ ಸುಂಕ ಮೊದಲಾದವು ಆದಾಯದ ಮೂಲಗಳಾಗಿದ್ದವು. ಭೂಕಂದಾಯವು ರಾಜ್ಯದ ಮುಖ್ಯ ಆದಾಯವಾಗಿತ್ತು. ಭೂಕಂದಾಯವು ಪಾಳೆಯಗಾರರ ಅವಧಿಯಲ್ಲಿ ಭೂಮಿಯ ಹುಟ್ಟುವಳಿಯ ಮೂರನೇ ಒಂದು ಭಾಗವನ್ನು ಮೀರುತ್ತಿರಲಿಲ್ಲ. ಇವರು 'ರಸ್ತು' ಎಂಬ ಕಂದಾಯವನ್ನು ವಸೂಲಿ ಮಾಡುತ್ತಿದ್ದರೂ ಜೊತೆಗೆ ಗಾವುಂಡ ಸುಂಕ, ಪೆರ್ಜುಂಕ, ವಡ್ಡಾರಾಹುಳದ ಪನ್ನಯದ ಸುಂಕ ಮೊದಲಾದ ತೆರಿಗೆಗಳನ್ನು ಸಂಗ್ರಹಿಸುತ್ತಿದ್ದರು.[೧೬] ಸಂಗ್ರಹಿಸಿದ ಆದಾಯವನ್ನು ರಾಜ್ಯದ ಅಧಿಕಾರವನ್ನು ನಿರ್ವಹಿಸುವ ಸಲುವಾಗಿ ಅಂದರೆ ಅಧಿಕಾರಿಗಳಿಗೆ, ಸೈನ್ಯಕ್ಕೆ, ಲೋಕೋಪಯೋಗಿ ಕಾರ್ಯಗಳಿಗೆ, ಸಾಮಾಜಿಕ ಕಾರ್ಯಗಳಿಗೆ ವೆಚ್ಚವನ್ನು ಮಾಡುತ್ತಿದ್ದರು.

ಉತ್ಪಾದನೆ - ಕೈಗಾರಿಕೆಗಳು

ಚಳ್ಳಕೆರೆ ಪರಿಸರದಲ್ಲಿ ಹೆಚ್ಚಾಗಿ ಎಣ್ಣೆಕಾಳುಗಳನ್ನು ಬೆಳೆಯುತ್ತಿದ್ದರಿಂದ ಗಾಣಗಳಿದ್ದವು. ದೇವಾಲಯದ ನಂದಾದೀಪಗಳಿಗೆ ಗಾಣಗಳನ್ನು ದತ್ತಿ ಬಿಡುತ್ತಿದ್ದರು. ಉಪ್ಪಾರರು ಉಪ್ಪನ್ನು ತಯಾರು ಮಾಡುತ್ತಿದ್ದರು. ನೇಕಾರರು ಹತ್ತಿ ಬಟ್ಟೆಯನ್ನು, ಜೇಡರು ರೇಷ್ಮೆ ಬಟ್ಟೆಯನ್ನು ನೇಯುತ್ತಿದ್ದರು. ಒಣ ಕೊಬ್ಬರಿ ಮಾಡುವುದು, ಎಣ್ಣೆ ತೆಗೆಯುವುದು, ಗರಿಗಳಿಂದ ಚಾಪೆ, ತಡಿಕೆ, ಕಸಬರಿಗೆ,

ನಾರಿನಿಂದ ಹಗ್ಗ ಮಾಡುವುದು, ಆಟಿಕೆ ವಸ್ತುಗಳನ್ನು ತಯಾರಿಸುವ ವಿವಿಧ ಬಗೆಯ ಉತ್ಪಾದನೆಯನ್ನು ಮಾಡುವ ಕಸುಬುದಾರರು ನೆಲೆಸಿದ್ದರು. ಕೆಲವು ಪ್ರದೇಶಗಳಲ್ಲಿ ಬಳೆಗಾರರು ಬಳೆಗಳನ್ನು ತಯಾರಿಸುತ್ತಿದ್ದರು.

ಈ ಪ್ರದೇಶವು ಶ್ರೇಷ್ಠವಾದ ಶಾಲುಗಳಿಗೆ ಪ್ರಸಿದ್ಧಿ ಪಡೆದಿತ್ತು. ಅವು ಎಷು ಅಂದವಾಗಿದ್ದವೋ ಅಷ್ಟೇ ನವಿರಾಗಿ ಬೆಚ್ಚಗೂ ಇರುತ್ತಿದ್ದ ಉಲ್ಲೇಖವು ಶಾಸನದಲ್ಲಿ ಸಿಗುತ್ತದೆ.[೧೭] ಹಿಂದೆ ದೊಡ್ಡೇರಿಯು ಕಾಗದದ ತಯಾರಿಕೆಗೆ ಪ್ರಸಿದ್ಧವಾಗಿತ್ತು. ಆ ಕಾಗದ ದೊಡ್ಡೇರಿ ಕಾಗದ ಎಂದೂ ಹಾಳೆಯ ಗಾತ್ರ ಸರ್ವತ್ರ ಅಂಗೀಕೃತವಾದ ಅಳತೆಯ ಮಾಪನವಾಗಿ 'ದೊಡ್ಡೇರಿ ಗಜ' ಎಂದು ಪ್ರಸಿದ್ಧವಾಗಿದ್ದವು.[೧೮]

ವಾಣಿಜ್ಯ ವ್ಯವಹಾರ

ಚಳ್ಳಕೆರೆ ಪರಿಸರವು ಕೂಡ ಹಲವು ಪ್ರಾಂತಗಳೊಂದಿಗೆ ವಾಣಿಜ್ಯ ವ್ಯವಹಾರವನ್ನು ಹೊಂದಿತ್ತೆಂದು ತಿಳಿಯಬಹುದು. ಜೊತೆಗೆ ಕ್ರಿ.ಶ. ೧–೨ನೇ ಶತಮಾನದಲ್ಲಿ ಚಿತ್ರದುರ್ಗ ಪ್ರದೇಶವು ವಿದೇಶಿಯರೊಂದಿಗೆ ವಾಣಿಜ್ಯ ಸಂಬಂಧ ಹೊಂದಿದ್ದರ ಆಧಾರಗಳು ನಮಗೆ ಸಿಗುತ್ತವೆ. ಆ ಕಾಲದ ಚಂದ್ರವಳ್ಳಿಯಲ್ಲಿ ನಡೆಸಿದ ಭೂ ಉತ್ಖನನದಿಂದ ರೋಮ್ ದೇಶದೊಡನೆ ವ್ಯಾಪಾರ ಸಂಪರ್ಕ ಇಟ್ಟುಕೊಂಡಿದ್ದರೆಂಬುದಕ್ಕೆ ಅಲ್ಲಿ ದೊರೆತಿರುವ ನಾಣ್ಯಗಳು ನಮಗೆ ಆಧಾರವಾಗಿವೆ. ಅಲ್ಲದೆ ಭೌಗೋಳಿಕವಾಗಿ ಈ ಪರಿಸರವೂ ಚಂದ್ರವಳ್ಳಿಯ ಜೊತೆಗೆ ಪರಸ್ಪರ ಸಂಪರ್ಕವಿಟ್ಟುಕೊಂಡಿರುವ ಸಾಧ್ಯತೆ ಉಂಟು. ಈ ದಿಶೆಯಲ್ಲಿ ಇನ್ನೂ ಹೆಚ್ಚಿನ ಹಾಗೂ ವ್ಯಾಪಕವಾದ ಸಂಶೋಧನೆಗಳು ನಡೆಯಬೇಕಾಗಿದೆ.

ಪಾಳೆಯಗಾರರ ಕಾಲದಲ್ಲಿ ಚಳ್ಳಕೆರೆ ತಾಲ್ಲೂಕಿನ ಜಾಜೂರು, ಕಾಮಸಮುದ್ರ ಗ್ರಾಮದಲ್ಲಿದ್ದ ಕುಂಚಿಗಾರ ಕಾಳಶೆಟ್ಟಿ ಎಂಬುವವನು ಕಬ್ಬಿಣ ಮತ್ತು ತಾಮ್ರ ಲೋಹಗಳಲ್ಲಿ ಬಂಗಾರ ಮಾಡುವ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದನೆಂದೂ ತಾನು ತಯಾರಿಸಿದ ಬಂಗಾರದ ವರಹಾಗಳನ್ನು ಮಾಡಿಸಿಕೊಂಡು ಬರಲು ತನ್ನ ತಮ್ಮನನ್ನು ಸಿರಾ, ಚಿತ್ರದುರ್ಗ ಮತ್ತು ಹೊಸದುರ್ಗಗಳಿಗೆ ಕಳುಹಿಸುತ್ತಿದ್ದನೆಂದು ತಿಳಿದುಬರುತ್ತದೆ.[೧೯] ಇದರಿಂದ ತಿಳಿದುಬರುವ ವಿಷಯವೆಂದರೆ ಖೋತಾ ಬಂಗಾರದ ನಾಣ್ಯಗಳು ಚಲಾವಣೆಯಲ್ಲಿದ್ದವು.

ಈ ಪರಿಸರದಲ್ಲಿ ಹಲವು ಪ್ರಮುಖ ರಾಜ ಮನೆತನಗಳು ಆಳ್ವಿಕೆಯನ್ನು ನಡೆಸಲು ಪರಸ್ಪರ ಕಾದಾಟಗಳು ನಡೆದಿವೆ ಎನ್ನಬಹುದು. ಕೆಲವು ಸಾಮಂತರು ಸ್ವತಂತ್ರ ಪಾಳೆಯಪಟ್ಟನ್ನು ಕಟ್ಟಿಕೊಂಡು ಆಡಳಿತ ನಡೆಸಿದರು. ಆದ್ದರಿಂದ ಇಲ್ಲಿ ಧಾರ್ಮಿಕ ಸಂಘರ್ಷ ಏರ್ಪಟ್ಟಿರಬಹುದೆಂದು ತಿಳಿದುಬರುತ್ತದೆ. ಹಲವು ಧರ್ಮಗಳು ಪ್ರಭಾವ ಬೀರಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಶ್ಯಾಮಲಾ .ಸಿ.ಆರ್: ೨೦೦೮, ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ, ಪು–೧೭೮

2. Epigraphia Carnatica- XI: Challakere-33

3. Epigraphia Carnatica– XI: Challakere-33

4. Epigraphia Carnatica- XI: Molakalmuru-12

೫. ಚಿದಾನಂದಮೂರ್ತಿ .ಎಂ: ೧೯೬೬, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು–೩೦೮, ೩೦೯

೬. ಶೇಷಶಾಸ್ತ್ರಿ .ಆರ್: ಕರ್ನಾಟಕದ ವೀರಗಲ್ಲುಗಳು, ಪು–೧೩

೭. ಶೇಷಶಾಸ್ತ್ರಿ .ಆರ್: ಪೂರ್ವೋಕ್ತ, ಪು–೧೪

೮. ಶೇಷಶಾಸ್ತ್ರಿ .ಆರ್: ಪೂರ್ವೋಕ್ತ, ಪು–೧೮

೯. ಶೇಷಶಾಸ್ತ್ರಿ .ಆರ್: ಪೂರ್ವೋಕ್ತ, ಪು–೩೮

೧೦. ಪರಮಶಿವಮೂರ್ತಿ: ೧೯೯೯, ಕನ್ನಡ ಶಾಸನಶಿಲ್ಪ, ಕ.ವಿ.ವಿ. ಹಂಪಿ, ವಿದ್ಯಾರಣ್ಯ ಪು–೧೫೬

11. Epigraphia Carnatica- XI: Challakere-33–34

೧೨. ಶ್ರೀನಿವಾಸ .ಎಂ.ವಿ, ಲಕ್ಷ್ಮಣ್ ತೆಲಗಾವಿ(ಸಂ): ೧೯೭೬, ಚಂದ್ರವಳ್ಳಿ, ಪು– ೭೨

೧೩. ಶ್ಯಾಮಲಾ .ಸಿ.ಆರ್: ಪೂರ್ವೋಕ್ತ, ಪು–೧೬೨, ೧೬೩

14. Epigraphia Carnatica- XI: Challakere-34

೧೫. ಶ್ಯಾಮಲಾ .ಸಿ.ಆರ್: ಪೂರ್ವೋಕ್ತ, ಪು–೧೭೦

16. Epigraphia Carnatica- XI: Challakere-78

17. Epigraphia Carnatica- XI: Hiriyuru-87 (1313 AD)

೧೮. ಗಿರಿಜಾ .ಟಿ: ೧೯೯೧, ಚಿತ್ರದುರ್ಗ ಜಿಲ್ಲಾ ದರ್ಶಿನಿ, ಪು–೧೬೪

೧೯. ವಸು .ಎಂ.ವಿ: ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕ.ವಿ.ವಿ, ಹಂಪಿ, ವಿದ್ಯಾರಣ್ಯ, ಪು–೧೭೮

ಅಧ್ಯಾಯ : ನಾಲ್ಕು

ಪುರಾತತ್ವ ಆಕರಗಳು

ಅಧ್ಯಾಯ : ನಾಲ್ಕು

ಪುರಾತತ್ವ ಸ್ಮಾರಕಗಳು

೪.೧ ದೇವಾಲಯ ವಾಸ್ತುಶಿಲ್ಪ

ವಾಸ್ತವವಾಗಿ ಕಲೆ ಎಂದರೆ ಮನುಷ್ಯನ ಭಾವನೆಗಳನ್ನು ಚಿತ್ರ ಮತ್ತು ಶಿಲ್ಪಕಲೆಗಳ ರೂಪದಲ್ಲಿ ತೋರಿಸುವುದೇ ಆಗಿದೆ. ಸಾಂಸ್ಕೃತಿಕ ಘಟನಾವಳಿಗಳ ವಿಶಿಷ್ಟ ರೂಪವೇ ಕಲೆ ಎಂದು ಹೇಳಬಹುದು. ಮಾನವನು ಅಲೆದಾಡುವ ಪ್ರವೃತ್ತಿಯಿಂದ ಒಂದೆಡೆ ನೆಲೆ ನಿಲ್ಲಲು ಆರಂಭಿಸಿದಾಗಿನಿಂದ ಅವನು ವಾಸಿಸಲು ತನಗೆ ಅನುಕೂಲವಾಗುವ ರೀತಿಯಲ್ಲಿ ಗೃಹ ನಿರ್ಮಿಸಲು ಆರಂಭಿಸಿದನು. ಇಲ್ಲಿಂದಲೇ ವಾಸ್ತುಶಿಲ್ಪವು ಆರಂಭವಾಯಿತೆನ್ನಬಹುದು. ಸಾಮಾನ್ಯವಾಗಿ ವಾಸ್ತು ಎಂದರೆ ಕಟ್ಟಡ. ಮನುಷ್ಯ ಹಾಗೂ ದೇವತೆಗಳು ವಾಸ ಮಾಡುವ ಸ್ಥಳ ಅಥವಾ ವಾಸಕ್ಕೆ ಮನೆಯನ್ನು ಕಟ್ಟಲು ಯೋಗ್ಯವಾದ ಭೂಮಿ. ಇಂತಹ ಕಟ್ಟಡಗಳು ದೇವಾಲಯಗಳಾಗಿರಬಹುದು, ಕೋಟೆ ಕೊತ್ತಲುಗಳಾಗಿರಬಹುದು.

ವಾಸ್ತುಶಿಲ್ಪ ಎಂಬ ಪರಿಭಾಷೆಗೆ ವಿಶಾಲವಾದ ಅರ್ಥವ್ಯಾಪ್ತಿ ಇದ್ದರೂ, ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತು ಶಿಲ್ಪಗಳಾಗಿ ಕಣ್ಮುಂದೆ ನಿಲ್ಲುತ್ತವೆ. ಗಟ್ಟಿಯಾದ ವಸ್ತುವಿನಿಂದ ವಾಸ್ತು (ನಿವೇಶನ)ವಿನ ಮೇಲೆ ರಚನೆಗೊಂಡ ಎಲ್ಲಾ ವಾಸಯೋಗ್ಯ ರಚನೆಗಳೂ ವಾಸ್ತು ರಚನೆ ಎನಿಸಿಕೊಳ್ಳುತ್ತವೆ. ಈ ರೀತಿಯ ವಾಸ್ತುರಚನೆಗಳು ಮಾನವನ ನಾಗರೀಕತೆಯ ಮಾನದಂಡ ಎಂದರೂ ತಪ್ಪಾಗಲಾರದು. ಕಾಲಾಂತರದಲ್ಲಿ ಮಾನವನ ಬೌದ್ಧಿಕ ವಿಕಸನದ ರೀತಿಯ ಖಚಿತತೆಯಿಂದ ಪ್ರತ್ಯಕ್ಷ ಸಾಕ್ಷಿಗಳೆಂದು ಹೇಳಬಹುದು.[೧]

ಸ್ತೂಪ, ಚೈತ್ಯ, ವಿಹಾರ, ಬಸದಿ, ಮಸೀದಿ, ಚರ್ಚು, ಕೆರೆ, ಕಟ್ಟೆ, ಬುರುಜು, ಕೋಟೆ ಹಾಗು ಮನೆಗಳಂತಹ ಎಲ್ಲಾ ರಚನೆಗಳು ವಾಸ್ತುಶಿಲ್ಪಗಳೇ ಆಗಿವೆ.[೨] ಶುಕ್ರನ ನೀತಿಸಾರ ಗ್ರಂಥವು ದೇವಾಲಯ, ಅರಮನೆ ಅಥವಾ ರಾಜಗೃಹ, ದೇವತಾ ಮೂರ್ತಿಗಳ ರಚನೆ, ಸರ್ವಜನೋಪಯೋಗಿ ಗೃಹಗಳು, ಬಾವಿ, ಪುಷ್ಕರಣಿ ಮುಂತಾದವುಗಳನ್ನು ಶಿಲ್ಪಶಾಸ್ತ್ರದಡಿಯಲ್ಲಿ ಗುರುತಿಸುತ್ತದೆ.[೩] ವಾಸ್ತುವಿನ ಜೊತೆಜೊತೆಗೆ ಶಿಲ್ಪವು ಶಿಲ್ಪಿಯ ಅಭಿರುಚಿಗೆ ಅನುಗುಣವಾಗಿ ವಾಸ್ತುವಿಗೆ ವಿವಿಧ ಭಾಗಗಳಲ್ಲಿ ವ್ಯಕ್ತವಾಗಿರುವುದನ್ನು ನಾವು ಕಾಣುತ್ತೇವೆ. ವಾಸ್ತು ಮತ್ತು ಶಿಲ್ಪಗಳೆರಡೂ ಕಲಾ ಸೌಂದರ್ಯದ ಪ್ರತೀಕವಾಗಿವೆ. ಇವು ಆರಂಭದಿಂದಲೂ ಜೊತೆ ಜೊತೆಯಾಗಿಯೇ ಬೆಳೆದುಬಂದಿರುವುದನ್ನು ಕಾಣಬಹುದು.

ಮಾನಸಾರ, ಮಯಮತ, ಕಶ್ಯಪ, ವೈಖಾನಸ, ವಿಶ್ವಕರ್ಮೀಯ ಇನ್ನೂ ಮೊದಲಾದ ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ದೇವಾಲಯಗಳ ನಿರ್ಮಾಣ ಕುರಿತ ಅನೇಕ ವಿವರಗಳು ದೊರೆಯುತ್ತವೆ. ದುರಾದೃಷ್ಟವಶಾತ್ ಈ ಎಲ್ಲಾ ಗ್ರಂಥಗಳು ಪೂರ್ಣ ಪ್ರಮಾಣದಲ್ಲಿ ದೊರೆಯದೇ ಇದ್ದುದ್ದು, ದೇವಾಲಯಗಳ ಬಗ್ಗೆ ಇನ್ನೂ ಹೆಚ್ಚಿನ ವಿವರಗಳು ತಿಳಿದುಕೊಳ್ಳಲು ಸಾಧ್ಯವಾಗುತ್ತಿಲ್ಲ.[೪] ಆದರೂ ಮಾನಸಾರ ಗ್ರಂಥವು ಪ್ರತಿ ಅಧ್ಯಾಯದಲ್ಲೂ ದೇವಾಲಯಗಳ ನಿರ್ಮಾಣದ ಉದ್ದೇಶ, ಶಿಲ್ಪಕ್ಕೆ ಇರಬೇಕಾದ ಅರ್ಹತೆಗಳು, ದೇವಾಲಯ ನಿರ್ಮಾಣಕ್ಕಿರುವ ಯೋಗ್ಯ ಸ್ಥಳ, ದೇವಾಲಯಗಳನ್ನು ಗ್ರಾಮದ ನಗರಗಳ ಯಾವ ಭಾಗದಲ್ಲಿ, ಯಾವ ದಿಕ್ಕಿನಲ್ಲಿ ಕಟ್ಟಬೇಕು, ಸ್ಥಳ ವಿನ್ಯಾಸ, ಅಧಿಷ್ಠಾನ, ಶಿಖರ, ದೇವರುಗಳ ಪ್ರತಿಷ್ಠಾಪನೆ, ಪರಿವಾರ ದೇವರುಗಳ ಪ್ರತಿಷ್ಠಾಪನೆ ಇನ್ನು ಮುಂತಾದ ವಿವರಗಳನ್ನು ತಿಳಿಸುತ್ತದೆ.[೫]

ಮಯಮತ ಗ್ರಂಥವೂ ಸಹ ಮಾನಸಾರ ಕೃತಿಯಲ್ಲಿರುವ ವಿವರಗಳನ್ನು ಹೇಳುತ್ತಾ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದಾಗ ವಾಸ್ತು ಪುರುಷನನ್ನು ತೃಪ್ತಿಪಡಿಸಲು ಮಾಡಬೇಕಾದ ಸಂಸ್ಕಾರ, ವಿಧಿ, ವಿಧಾನಗಳನ್ನು ತಿಳಿಸುತ್ತದೆ. ದೇವಾಲಯದ ಉಪಪೀಠ, ಅಧಿಷ್ಠಾನ, ಭಿತ್ತಿ, ಪ್ರಸ್ತರ, ಕಟ್ಟಡದ ಮೇಲ್ಛಾವಣಿ, ದೇವಾಲಯದ ಶಿಖರ, ಪ್ರಾಕಾರ, ಮಂಟಪಗಳು, ಬಲಪೀಠ ಇನ್ನು ಮುಂತಾದ ವಿವರಗಳನ್ನು ತಿಳಿಸುತ್ತದೆ. ಈ ಗ್ರಂಥದ ಕರ್ತೃ 'ಮಯ' ಇರಬಹುದೆಂದು ಹೇಳಲಾಗುತ್ತದೆ.[೬]

ದೇವಾಲಯಗಳು ಚರಿತ್ರೆಯ ರಚನೆಯಲ್ಲಿ ಪರಿಣಾಮಕಾರಿ ಮಾಧ್ಯಮಗಳಾಗಿ ಕಾರ್ಯನಿರ್ವಹಿಸುತ್ತವೆ. ಇವುಗಳು ಮಾನವನ ಚರಿತ್ರೆ ಮತ್ತು ಅವನ ಕಾಲದ ವಿಭಿನ್ನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಸಾಮಾನ್ಯವಾಗಿ ದೇವಾಲಯ ಎಂದರೆ ದೇವರು ಇರತಕ್ಕ ಸ್ಥಾನ, ಎಡೆ, ಜಾಗ ಎಂದರ್ಥ.[೭] ದೇವಾಲಯವು ಧಾರ್ಮಿಕ ಶ್ರದ್ಧೆಯ ಪ್ರಮುಖ ಅಂಶವಾಗಿದೆ. ಇದಕ್ಕೆ ತನ್ನದೇ ಆದ ಸಂಸ್ಕೃತಿ, ಭವ್ಯ ಪರಂಪರೆ ಇದೆ. ಮಾನವ–ದೈವ, ಇಹ–ಪರ, ವಾಸ್ತವಿಕ–ಆದರ್ಶ ಇವುಗಳ ಮಿಲನದ ಸಂಕೇತವೇ ದೇವಾಲಯ.[೮] ಲೋಕ ಸಂರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸಮಾಡುವ ಸ್ಥಳವಾದ ದೇವಾಲಯವು ಜೀವಾತ್ಮ–ಪರಮಾತ್ಮದಲ್ಲಿ ಇರುವ ಅಂತರವನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ. ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವನ ಬಳಿಗೆ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೂ ದೇವಾಲಯವೇ ಆಗಿದೆ ಎಂದು ಹೇಳಬಹುದು.[೯]

ದೇವಾಲಯಗಳ ಉಗಮವು ಬಹುಪ್ರಾಚೀನತೆಯನ್ನು ಪಡೆದಿರುವುದು. ಆದರೆ ಅವುಗಳ ನಿರ್ದಿಷ್ಟ ಸ್ವರೂಪ ವ್ಯಕ್ತವಾಗಿರುವುದಿಲ್ಲ. ಕ್ರಿ.ಪೂ. ೩೦೦೦ ವರ್ಷಗಳಷ್ಟು ಹಿಂದಿನ ಹರಪ್ಪ ಮತ್ತು ಮೆಹಂಜೊದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳು ದೊರೆತರೂ ದೇವಾಲಯಗಳು ಎನ್ನಬಹುದಾದ ರಚನೆ ಕಾಣುವುದಿಲ್ಲ. ಈ ನಿವೇಶನಗಳಲ್ಲಿ ದೊರೆತಿರುವ ಸುಮಾರು ೨೦೦೦ಕ್ಕೂ ಅಧಿಕ ಮುದ್ರೆಗಳು, ಮೆಹೆಂಜೋದಾರೋದಲ್ಲಿ ದೊರೆತ ನರ್ತಕಿಯ ಕಂಚಿನ ವಿಗ್ರಹ, ಪುರೋಹಿತನ ಶಿಲ್ಪ, ಪಶುಪತಿ, ಶಿವ, ಗೂಳಿ ಹಾಗೂ ಇನ್ನಿತರ ಪ್ರಾಣಿ–ಪಕ್ಷಿಗಳ ಆಟಿಕೆ ವಸ್ತುಗಳು ಮತ್ತು ಚಿತ್ರಿತ

ಮಡಿಕೆಗಳು ಅವರ ಕಲಾಸಕ್ತಿಗೆ ಸಾಕ್ಷಿಗಳಾಗಿವೆ. ಇವುಗಳಿಂದ ನಮಗೆ ಒಂದಂಶ ಸ್ಪಷ್ಟವಾಗುತ್ತದೆ. ಏನೆಂದರೆ, ದೇವಾಲಯಗಳ ರಚನೆಗೂ ಪೂರ್ವದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆ ಹಾಗೂ ಆರಾಧನೆ ಇತ್ತೆಂದು ಹೇಳಬಹುದು. ಮೂರ್ತಿ ಆರಾಧನೆಯು ಆರಂಭವಾದ ಬಳಿಕ ಅದರ ರಕ್ಷಣೆಗಾಗಿ ವಾಸ್ತುರೂಪ ನೀಡಲಾಯಿತು.

ಕ್ರಿ.ಪೂ. ೩ನೇ ಶತಮಾನದ ವೇಳೆಗೆ ಪಶ್ಚಿಮ ಘಟ್ಟಗಳಲ್ಲಿ ಗುಹಾ ವಾಸ್ತುಶಿಲ್ಪ ಬೆಳವಣಿಗೆಯಾದುದನ್ನು ಗಮನಿಸಿದರೆ, ಈ ವೇಳೆಗಾಗಲೇ ಮಾನವನು ಸಂಪೂರ್ಣವಾಗಿ ಕಲಾ ಆರಾಧಕನಾದಂತೆ ಕಾಣುತ್ತದೆ. ಬಿಹಾರಿನ ಬರಾಬರ್ ಬೆಟ್ಟಗಳಲ್ಲಿನ ಲೋಮಸ್ ಋಷಿ ಮತ್ತು ಸುಧಾಮ ಗುಹಾಲಯಗಳೆರಡು ಸಂಪೂರ್ಣವಾಗಿ ಮರದ ವಾಸ್ತುವಿನ ಪ್ರತಿರೂಪದಂತಿವೆ. ಅಂದರೆ ಇದಕ್ಕೂ ಪೂರ್ವದಲ್ಲಿ ಕಲಾವಶೇಷಗಳು ಬಹುಶಃ ಮರದಿಂದ ಅಥವಾ ಬೇಗ ನಶಿಸಿಹೋಗುವ ಸಾಧನೆಗಳಿಂದ ನಿರ್ಮಾಣವಾಗುತ್ತಿದ್ದರಬೇಕು. ವಾಸ್ತುಕೃತಿಗಳನ್ನು ಮುಂದಿನ ಪೀಳಿಗೆಯವರೆಗೆ ಉಳಿಸುವ ಅಥವಾ ಶಾಶ್ವತವಾಗಿ ನಿರ್ಮಿಸುವ ಉದ್ದೇಶದಿಂದ ಗುಹಾವಾಸ್ತುವಿಗೆ ಕೈಹಾಕಿದಂತೆ ಕಾಣುತ್ತದೆ. ಆದ್ದರಿಂದ ಪಶ್ಚಿಮ ಘಟ್ಟಗಳಲ್ಲಿ ಮೊದಲು ನಿರ್ಮಾಣಗೊಂಡ ವಾಸ್ತುಕೃತಿಗಳೆಲ್ಲ ಸ್ತೂಪ ಮತ್ತು ಚೈತ್ಯಾಲಯಗಳೇ ಆಗಿವೆ.[೧೦]

ಭಾರತೀಯ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಭದ್ರವಾದ ಬುನಾದಿಯನ್ನು ಹಾಕಿದ ಕೀರ್ತಿ ಮೌರ್ಯ ಅರಸರಿಗೆ ಸಲ್ಲುತ್ತದೆ. ಅವರ ಅವಧಿಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳು ಬಿರುಸುಗೊಂಡು ಬೌದ್ಧಧರ್ಮವು ಅತ್ಯಂತ ಪ್ರಭಲವಾದ ಧರ್ಮವಾಗಿ ತಲೆಯೆತ್ತಿತು. ಬುದ್ಧನ ಅವಶೇಷಗಳನ್ನಿಟ್ಟು ಅವುಗಳ ರಕ್ಷಣೆಗಾಗಿ ಕಟ್ಟಿದ ಕಟ್ಟಡವಾದ 'ಸ್ತೂಪ'ಗಳು ನಿರ್ಮಾಣವಾದವು. ಇದನ್ನು ಬೃಹತ್ತ ಶಿಲಾಸಂಸ್ಕೃತಿಯ ಸಮಾಧಿಯ ಮುಂದುವರೆದ ಹಂತವಾಗಿರುವುದನ್ನು ಗುರುತಿಸಬಹುದು. ದಕ್ಷಿಣ ಭಾರತದಲ್ಲಿ ವೃತ್ತಾಕಾರದ ಈ ರೀತಿಯ ಸಮಾಧಿ ದಿಬ್ಬಗಳನ್ನು ಅವುಗಳ ಸುತ್ತಲೂ ಕಲ್ಲುಗಳಿಂದ ನಿರ್ಮಿತವಾದ ವೃತ್ತವನ್ನು ಕಾಣಬಹುದು.[೧೧] ಕರ್ನಾಟಕದಲ್ಲಿ ಈ ರೀತಿಯ ಕಟ್ಟಡಗಳು ಶಾತವಾಹನರ ಅವಧಿಯಲ್ಲಿ ಅನೇಕ ನೆಲೆಗಳಲ್ಲಿ ಕಂಡುಬಂದಿವೆ.

ಗುಪ್ತರು ಮೊಟ್ಟಮೊದಲ ಬಾರಿಗೆ ಕಲ್ಲಿನಿಂದ, ಕಟ್ಟಡ ರೂಪದ ದೇವಾಲಯಗಳನ್ನು ಕಟ್ಟಲು ಪ್ರಾರಂಭಿಸಿದರು. ಅದುವರೆಗೂ ಸಾಧಾರಣವಾಗಿ ಇಟ್ಟಿಗೆ, ಮರ, ಮಣ್ಣು, ಕಟ್ಟಿಗೆಗಳಿಂದ ದೇಗುಲಗಳನ್ನು ನಿರ್ಮಿಸಿಸುತ್ತಿದ್ದರು. ಅಂದರೆ ಬೇಗ ನಾಶಹೊಂದುವಂತಹ ವಸ್ತುಗಳಿಂದ ವಾಸ್ತುಕೃತಿಗಳನ್ನು ನಿರ್ಮಿಸುವ ಪದ್ಧತಿ ಇತ್ತು. ಗುಪ್ತರ ದೇವಾಲಯಗಳು ಸರಳತೆ, ನಿರಾಲಂಕೃತದಿಂದ ನಿರ್ಮಾಣಗೊಂಡಿವೆ. ಕರ್ನಾಟಕದಲ್ಲಿ ಕದಂಬರ ಅವಧಿಯಲ್ಲಿ ಶಿಲಾವಸ್ತುವಿನಿಂದ ನಿರ್ಮಿಸಿದ ದೇವಾಲಯಗಳನ್ನು ಕಾಣಬಹುದು. ಕ್ರಿ.ಶ. ೩ನೇ ಶತಮಾನದಿಂದ ಮೈಸೂರು ಒಡೆಯರವರೆಗಿನ ಅವಧಿಯ ವಾಸ್ತುಶಿಲ್ಪಕಲೆಯ ಉಗಮ ಮತ್ತು ವಿಕಾಸದ ಹೆಜ್ಜೆಗಳನ್ನು ಗುರುತಿಸಬಹುದು.

ಗುಪ್ತರು ಕಲ್ಲಿನಿಂದ ದೇವಾಲಯಗಳನ್ನು ನಿರ್ಮಾಣಮಾಡಿದಂತೆ ಬಾದಾಮಿ ಚಾಲುಕ್ಯರು ಹಾಗೂ ಪಲ್ಲವರು ಸಹ ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಶಿಲೆಯಿಂದ ಬಿಡಿಬಿಡಿಯಾದ

ದೇವಾಲಯಗಳನ್ನು ನಿರ್ಮಿಸಿದರು. ನಂತರದ ರಾಷ್ಟ್ರಕೂಟರ ಅವಧಿಯಲ್ಲಿ ಕಲೆ ಮತ್ತು ವಾಸ್ತುಶಿಲ್ಪವು ಗಟ್ಟಿಯಾದ ಮತ್ತು ಸ್ಪಷ್ಟವಾದ ಸ್ವರೂಪವನ್ನು ಪಡೆಯಿತು. ಗೃಹ ನಿರ್ಮಾಣ ವಾಸ್ತುವಿನಲ್ಲಿ ಬಾದಾಮಿ ಚಾಲುಕ್ಯರಿಗಿಂತಲೂ ಉನ್ನತವಾದ ಕಲಾಕೃತಿಗಳು ಈ ಅವಧಿಯಲ್ಲಿ ನಿರ್ಮಾಣಗೊಂಡಿರುವುದನ್ನು ಗುರುತಿಸಬಹುದು. ಕಲ್ಯಾಣಿ ಚಾಲುಕ್ಯರು ದೇವಾಲಯಗಳನ್ನು ಸಾಮಾನ್ಯವಾಗಿ ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲಿನಲ್ಲಿ (ಕ್ಲೋರೈಟಿಕ್ ಸಿಸ್ಟ್) ನಿರ್ಮಿಸಿದ್ದಾರೆ. ಆದುದರಿಂದ ಇವರ ದೇವಾಲಯಗಳಲ್ಲಿ ಅತ್ಯಂತ ಸೂಕ್ಷ್ಮ ಕೆತ್ತನೆ ಹಾಗೂ ಹೆಚ್ಚಿನ ಅಲಂಕಾರಿಕ ಅಂಶಗಳನ್ನು ಕಾಣುತ್ತೇವೆ.

ಹೊಯ್ಸಳರ ಕಾಲವು ದೇವಾಲಯಗಳ ವಿಕಾಸದಲ್ಲಿ ಆಕರ್ಷಕವಾದ ಕಾಲಘಟ್ಟವೆನ್ನಬಹುದು. ಇವರು ತಮ್ಮ ದೇವಾಲಯಗಳನ್ನು ನಿರ್ಮಿಸಿಲು ಬಳಸಿದ ಮಾಧ್ಯಮ, ಅತ್ಯಂತ ಸೂಕ್ಷ್ಮ ಕೆತ್ತನೆಗಳು, ನಿರ್ಮಾಣ ಶೈಲಿ 'ಹೊಯ್ಸಳ ಶೈಲಿ' ಎಂದೇ ಪ್ರತ್ಯೇಕವಾಗಿ ಗುರುತಿಸುವಷ್ಟು ಮಟ್ಟಿಗೆ ವಿಶೇಷತೆಯಿಂದ ಕೂಡಿದೆ.[೧೨] ಹೊಯ್ಸಳರ ನಂತರ ದಕ್ಷಿಣ ಭಾರತದಲ್ಲಿ ಆಳ್ವಿಕೆ ನಡೆಸಿದ ವಿಜಯನಗರದ ಅರಸರ ಕಾಲಕ್ಕೆ ದ್ರಾವಿಡ ಶೈಲಿಯು ಉಚ್ಛ್ರಾಯ ಸ್ಥಿತಿ ತಲುಪಿದ್ದನ್ನು ಕಾಣುತ್ತೇವೆ. ಇವರು ದೇವಾಲಯಗಳನ್ನು ನಿರ್ಮಿಸಲು ಗ್ರಾನೈಟ್ ಶಿಲೆಯನ್ನು ಬಳಸಿದ್ದರಿಂದ ಹೆಚ್ಚಿನ ಅಲಂಕಾರಿಕ ಅಂಶಗಳು ಕಂಡುಬರುವುದಿಲ್ಲ. ವಿಜಯನಗರ ಸಾಮ್ರಾಜ್ಯದ ಏಳಿಗೆ ಮತ್ತು ಖ್ಯಾತಿಗೆ ಅವರ ಕಾಲದ ರಾಜಕೀಯ ಸಾಂಸ್ಕೃತಿಕ ಚರಿತ್ರೆಯಲ್ಲಿ ಅಮರ ನಾಯಕರು ಅಥವಾ ಪಾಳೆಗಾರರು ಪ್ರಮುಖ ಪಾತ್ರವಹಿಸಿದರು. ಅದರಲ್ಲೂ ಚಿತ್ರದುರ್ಗ ಜಿಲ್ಲೆಯ ಪರಿಸರದಲ್ಲಿ ಆಳ್ವಿಕೆಯನ್ನು ನಡೆಸಿದ ಚಿತ್ರದುರ್ಗದ ಪಾಳೆಯಗಾರರು, ಹರತಿ ಪಾಳೆಯಗಾರರು, ಹಟ್ಟಿಯ ದೊರೆಗಳು ಸಹ ಹಲವಾರು ದೇವಾಲಯಗಳನ್ನು ನಿರ್ಮಿಸಲು ಕಾರಣೀಭೂತರಾದರು.

ವಿಜಯನಗರದ ಅರಸರ ಆಶ್ರಿತರಾಗಿದ್ದ ಪಾಳೆಯಗಾರರು ಆ ಸಾಮ್ರಾಜ್ಯದ ಪತನಾ ನಂತರ ಅವರ ರಾಜ್ಯಾಡಳಿತ ಕ್ರಮ, ಅವರ ಸಂಸ್ಕೃತಿಯನ್ನು ಅನುಸರಿಸಿ ಕಾಪಾಡಿಕೊಂಡು ಬಂದರು. ಪಾಳೆಯಗಾರರ ಆಳ್ವಿಕೆಯಲ್ಲಿ ವಿಜಯನಗರ ಅರಸರ ವೈಭವವಿರದಿದ್ದರೂ ತಕ್ಕ ಮಟ್ಟಿಗೆ ನಡೆಸಿಕೊಂಡು ಉಳಿಸಿಕೊಂಡು ಬಂದಿದ್ದಾರೆ. ಇವರ ಶೈಲಿಯನ್ನು 'ವಿಜಯನಗರೋತ್ತರ ಶೈಲಿ'ಯೆಂದು ಕರೆಯಬಹುದು.[೧೩] ಚಳ್ಳಕೆರೆ ತಾಲೂಕು ಪರಿಸರದ ದೇವಾಲಯಗಳು ಹೆಚ್ಚಾಗಿ ನೊಳಂಬರು, ಚಿತ್ರದುರ್ಗದ ಪಾಳೆಯಗಾರರು, ನಾಯಕನಹಟ್ಟಿಯ ದೊರೆಗಳು, ಹರತಿ ಪಾಳೆಯಗಾರರ ಆಳ್ವಿಕೆಯ ಅವಧಿಯಲ್ಲಿ ನಿರ್ಮಾಣವಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವ ಮತ್ತು ವೈಷ್ಣವ ಪಂಥದ ದೇವಾಲಯಗಳು ಕಂಡುಬರುತ್ತವೆ. ಚಳ್ಳಕೆರೆ ಪರಿಸರದಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳನ್ನು ಅಧ್ಯಯನದ ಹಿನ್ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಚಳ್ಳಕೇರೆಮ್ಮನ ದೇವಾಲಯ

ಹೆಸರು : ಚಳ್ಳಕೇರೆಮ್ಮನ ದೇವಾಲಯ

ಸ್ಥಳ : ಚಳ್ಳಕೆರೆ ಪಟ್ಟಣ

ಕಾಲಮಾನ : ೧೮ ನೇ ಶತಮಾನ

ಚಳ್ಳಕೆರೆ ಪಟ್ಟಣದ ಉತ್ತರ ಭಾಗದಲ್ಲಿ ಬೆಂಗಳೂರು-ಬಳ್ಳಾರಿ ಹೆದ್ದಾರಿಯ ಎಡಭಾಗದಲ್ಲಿ ಕಂಡು ಬರುವ ಈ ದೇವಾಲಯ ಗ್ರಾಮದೇವತೆಯ ದೇವಸ್ಥಾನವಾಗಿದೆ. ಚಿತ್ರದುರ್ಗದ ಪಾಳೆಯಗಾರರ ಮನೆದೇವತೆಯಾದ್ದರಿಂದ ಅವರ ವಂಶಸ್ಥರು ಈ ದೇವತೆಯನ್ನು ಮನೆಯ ಹೆಣ್ಣು ಮಗಳಂತೆ ಕಾಣುತ್ತಾರೆ. ಇದು ಪೂರ್ವಾಭಿಮುಖವಾಗಿದ್ದು, ಚಿತ್ರದುರ್ಗದ ಪಾಳೆಯಗಾರರ ಕಾಲದಲ್ಲಿ ರಚನೆಯಾಗಿರುವಂತದ್ದಾಗಿದೆ. ಆದರೆ ಇದಕ್ಕೆ ಯಾವುದೇ ಲಿಖಿತ ದಾಖಲೆಗಳು ಲಭ್ಯವಿರುವುದಿಲ್ಲ. ಚಳ್ಳಕೇರೆಮ್ಮನಿಗೂ ಇಲ್ಲಿಯ ಪಾಳೆಯಗಾರರ ಅರಸುಮನೆತನಕ್ಕೂ ತಳಕು ಹಾಕಿಕೊಂಡಿರುವ ಅನೇಕ ಸಂಪ್ರದಾಯಗಳೇ ಅವರ ಸಂಬಂಧವನ್ನು ಹೇಳುತ್ತವೆ.

ಈ ದೇವಾಲಯವು ಗರ್ಭಗುಡಿ, ಅಂತರಾಳ ಹಾಗೂ ರಂಗಮಂಟಪ (ತೆರೆದ ಮಂಟಪ)ವನ್ನು ಒಳಗೊಂಡಿದೆ. ಈ ದೇವಾಲಯದ ಗರ್ಭಗುಡಿಯು ಅಲಂಕಾರ ರಹಿತವಾಗಿ, ಚೌಕಾಕಾರದಲ್ಲಿದೆ. ಗರ್ಭಗುಡಿಯೊಳಗೆ ಒಂದು ಜಗತಿಯಿದ್ದು, ಅದರ ಮೇಲೆ ಅಲಂಕಾರಗಳನ್ನು ಹೊಂದಿದ ಏಳು ಹೆಡೆ ಶಿರಸ್ತ್ರಾಣವಿರುವ ಎರಡು ಸುಂದರವಾದ, ಮೂಲ ಮೂರ್ತಿಯ ಸ್ತ್ರೀ ರುಂಡಗಳಿವೆ. ಒಂದು ಚಳ್ಳಕೇರೆಮ್ಮ ಮತ್ತೊಂದು ಬಿಡಾರದಮ್ಮ. ಅಚ್ಚರಿಯ ಸಂಗತಿಯೆಂದರೆ ಇವೆರಡೂ ವಿಗ್ರಹಗಳನ್ನು ಒಂದೇ ಪೀಠದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಹೀಗಾಗಿ ಇದೊಂದು ಶಕ್ತಿ ಆರಾಧನೆಯ ಪ್ರಾಚೀನ ನೆಲೆ ಇರಬಹುದೇ ಎಂಬ ಅನುಮಾನಗಳನ್ನು ಹುಟ್ಟುಹಾಕುತ್ತದೆ. ಸುಮಾರು ಒಂದೂವರೆ ಅಡಿ ಎತ್ತರ, ಅಗಲ ಇರುವ ಸ್ತ್ರೀ ರುಂಡದ ವಿಗ್ರಹಗಳು ನಮ್ಮನ್ನು ಪ್ರಾಚೀನ ನೆಲೆಯತ್ತ ಕೊಂಡೊಯ್ದರೆ ಆಶ್ಚರ್ಯವಿಲ್ಲ.[೧೪]

ಕೆಲ ವಿದ್ವಾಂಸರು ಈ ವಿಗ್ರಹಗಳನ್ನು ಜೈನ ಯಕ್ಷಿಯರಿರಬಹುದೆಂದು ಊಹಿಸುತ್ತಾರೆ. ಬಿಡಾರದಮ್ಮ ಎಂದು ಹೇಳುವ ವಿಗ್ರಹಕ್ಕೆ ಮಾತ್ರ ನಾಗರ ಹೆಡೆ ಪ್ರಭಾವಳಿ ಇದ್ದು, ಚಳ್ಳಕೇರೆಮ್ಮ ಎಂದು ಹೇಳುವ ವಿಗ್ರಹಕ್ಕೆ ಆ ಬಗೆಯ ಯಾವ ಪ್ರಭಾವಳಿಯು ಇಲ್ಲದಿರುವುದು ಸೋಜಿಗವನ್ನುಂಟುಮಾಡಿದೆ. ಅದೊಂದು ನಾಗದೇವತೆಯ ವಿಗ್ರಹವಿರಬಹುದೇ? ಈಗಾಗಲೇ ಅಲ್ಲಿದ್ದಿರಬಹುದಾದ ನಾಗದೇವತೆಯ ವಿಗ್ರಹದ ಪಕ್ಕದಲ್ಲೇ 'ಚಳ್ಳಕೇರಮ್ಮನ' ವಿಗ್ರಹವನ್ನು ಪ್ರತಿಷ್ಠಾಪಿಸಿ, ಈಗಾಗಲೇ ಅಲ್ಲಿದ್ದ ದೇವಾಲಯವನ್ನು ವಿಸ್ತರಿಸಿ ಅಭಿವೃದ್ಧಿ ಪಡಿಸಿರಬಹುದೇ?[೧೫] ಹೀಗೆ ನಮ್ಮನ್ನು ಊಹೆಗಳ ಲೋಕಕ್ಕೆ ಒಯ್ಯುತ್ತದೆ.

ದೇವಸ್ಥಾನದ ವಾಸ್ತುಶಿಲ್ಪವನ್ನು ಗಮನಿಸಿದರೆ ಇದು ವಿಜಯನಗರೋತ್ತರ ಶೈಲಿಯದು ಎನಿಸುತ್ತದೆ. ಸಿಂಹಮುಖದ ಚಿತ್ರ, ಒಂಟಿ ಸಂಗೀತದ ಕಂಬದ ಆಕೃತಿಯನ್ನು ಗಮನಿಸಿದರೆ ಇದು ೧೮೦೦ ಆಸುಪಾಸಿನಲ್ಲಿ ನಿರ್ಮಾಣವಾದಂತೆ ತೋರುತ್ತದೆ. ಎರಡೂ ರುಂಡಗಳಿಗೆ ಕಿವಿಯಲ್ಲಿ ಬಿಚ್ಚೋಲೆಯಂತಹ ಆಭರಣ, ಮೂಗುತಿ, ಹಣೆಯ ಮೇಲೆ ತಿಲಕವಿದೆ. ಚೆಳ್ಳಕೇರಮ್ಮನ ಹಿಂಭಾಗದಲ್ಲಿ ಕೀರ್ತಿಮುಖವಿರುವ ಹೂಬಳ್ಳಿಗಳಿಂದ ಕೂಡಿದ ಪ್ರಭಾವಳಿಯಿದೆ. ಬಿಡಾರದಮ್ಮನ ಮುಖ ವಿಶಾಲವಾಗಿದ್ದು ದೇವಿಯ ದೇಹವು ಭೂಮಿಯೊಳಗಿದೆ ಎಂದು ದೇವಸ್ಥಾನದ ಪೂಜಾರಿಗಳು ಹೇಳುತ್ತಾರೆ. ಕೋರೆಹಲ್ಲುಗಳಿರುವ ಮುಖವಾಡವನ್ನು ಅಳವಡಿಸಿ ಒಂದರ ಮೇಲೆ ಒಂದರಂತೆ

ಹತ್ತೊಂಬತ್ತು ಸೀರೆಗಳನ್ನು ಉಡಿಸಿ, ಕೈಗಳಲ್ಲಿ ಕತ್ತಿ ಗುರಾಣಿಗಳನ್ನು ಕೊಟ್ಟು, ಪಾದಗಳ ಮುಂಭಾಗದಲ್ಲಿ ಕವಚಗಳ ನಡುವೆ ಸಿಂಹಮುಖವನ್ನು ಇಟ್ಟು ದೇವತೆಯನ್ನು ಸಿಂಹವಾಹಿನಿಯನ್ನಾಗಿ ಮಾಡಿರುತ್ತಾರೆ. ಬಿಡಾರದಮ್ಮನಿಗೆ ಯಾವುದೇ ಅಲಂಕಾರವಾಗಲಿ ವಿಶೇಷ ಪೂಜೆಯಾಗಲೀ ಇಲ್ಲ.[೧೬] ಗರ್ಭಗುಡಿಯ ಹೊರಗೆ ಬಲಪಕ್ಕದಲ್ಲಿ ವೀರಭದ್ರಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದು, ಅದಕ್ಕೂ ನಿತ್ಯ ಪೂಜೆ ಸಲ್ಲುತ್ತದೆ. ಇವನನ್ನು ಚಳ್ಳಕೇರಮ್ಮನ ತಮ್ಮನೆಂದು ಕರೆಯಲಾಗುತ್ತದೆ.

ನವರಂಗದಲ್ಲಿ ಉಬ್ಬುಶಿಲ್ಪಗಳಿಂದ ಕೂಡಿದ ನಾಲ್ಕು ಕಂಭಗಳು ಮಧ್ಯಭಾಗದಲ್ಲಿವೆ. ಈ ಕಲ್ಲು ಕಂಭಗಳ ತುಂಬಾ ಸಿದ್ಧಭಂಗಿಯ ದಾಡಿ ಇರುವ ಸಿದ್ದಪುರುಷರ ಚಿತ್ರಗಳೇ ಇರುವುದು ನೋಡಿದರೆ ಇದೊಂದು ಶಾಕ್ತ ಪಂಥದ ಸಿದ್ದರ ಕೇಂದ್ರವಾಗಿದ್ದರಬಹುದೇ ಎಂಬ ಅನುಮಾನಗಳು ಸುಳಿಯುತ್ತವೆ.[೧೭], ಈ ದೇವಾಲಯದ ಶಿಲ್ಪಕಲಾ ಚಾತುರ್ಯವೆಲ್ಲಾ ಕಂಬಗಳಲ್ಲೇ ಅಡಗಿದೆ. ಕಂಬದ ಸಾಲು ಬದಿಗಳಲ್ಲಿ ಭೈರಾಗಿ, ಗಿಣಿಕೋತಿ, ಸಿಂಹ–ನಂದಿ, ಹೂಜಿ, ಕೃಷ್ಣ, ಹುಲಿ, ಮನುಷ್ಯ ಮುಖದ ಪಶು ಇಂತಹ ಚಿತ್ರಗಳನ್ನೇ ಕೆತ್ತಲಾಗಿದೆ.

ಈ ದೇವಾಲಯದ ವೈಶಿಷ್ಟ್ಯವೆಂದರೆ ನಾಲ್ಕೂ ಕಂಭಗಳ ಮಧ್ಯದಲಿಯ ಭುವನೇಶ್ವರಿ ಮಧ್ಯದಲ್ಲಿ ಚೌಕಾಕಾರವಾದ ಎರಡು ಚಪ್ಪಡಿ ಕಲ್ಲುಗಳನ್ನು ಒಂದರ ಮೇಲೆ ಒಂದು ಅಷ್ಟಕೋನವಾಗುವಂತೆ ಅಳವಡಿಸಿದೆ. ಒಂದೊಂದು ಕೋನಗಳಲ್ಲಿಯು ಮಾನವ ಶಿಲ್ಪಗಳು ಯೋಗ್ಯ ಭಂಗಿಗಳಲ್ಲಿ ವಿವಿಧ ವಾನಹಗಳ ಮೇಲೆ ಆಸೀನರಾಗಿದ್ದಾರೆ. ಅವುಗಳ ವಾಹನಗಳು ದಿಗ್ಭಾಗಗಳು ಇಂತಿವೆ. ಉತ್ತರ–ಆಮೆ, ಈಶಾನ್ಯ–ಮೀನು, ಪೂರ್ವ–ಮೊಲ, ಆಗ್ನೇಯ–ಹಾವು, ದಕ್ಷಿಣ–ನವಿಲು, ನೈರುತ್ಯ–ವೃಷಭ, ಪಶ್ಚಿಮ–ಸಿಂಹ, ವಾಯುವ್ಯ–ಇಲಿ. ಪ್ರತಿಯೊಂದು ಮೂರ್ತಿಗೂ ಕರ್ಣಕುಂಡಲಗಳು, ಹಾರಗಳು, ಬಳೆಗಳು, ವೈವಿಧ್ಯಮಯ ಕೇಶವಿನ್ಯಾಸಗಳಿವೆ. ಈ ಶಿಲ್ಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಯೋಗಸಿದ್ಧನಾಥರ ಸೌಮ್ಯತೆ ಕಂಡುಬರುತ್ತದೆ. ವಿಜಯನಗರೋತ್ತರ ಕಾಲದಲ್ಲಿ ನಾಥಪಂಥವು ವೀರಶೈವ ಹಾಗೂ ವೈದಿಕ ಪಂಥಗಳ ಸಂದಿಗ್ಧ ಕಾಲದಲ್ಲಿ ಈ ದೇವಾಲಯ ನಿರ್ಮಾಣವಾಗಿದೆ ಎಂದು ಹೇಳಬಹುದು.[೧೮]

ವಿಶಾಲವಾದ ಮುಖಮಂಟಪವು ಇದ್ದು ಇದರಲ್ಲಿ ಅನೇಕ ಬಗೆಯ ಚಿತ್ರಗಳನ್ನು ಕೆತ್ತಲಾಗಿದೆ. ದ್ವಾರದ ಎರಡೂ ಬದಿಯಲ್ಲಿ ದ್ವಾರ ಪಾಲಕಿಯರ ವಿಗ್ರಹಗಳನ್ನು ಕೆತ್ತಲಾಗಿದ್ದು ಇದೊಂದು ಶಕ್ತಿ ಆರಾಧನೆಯ ಕೇಂದ್ರವೆಂದು ಶೃತಪಡಿಸುತ್ತದೆ. ಈ ದ್ವಾರಕ್ಕೆ ಹೊಂದಿಕೊಂಡೇ ಆನೆ ಚಿತ್ರದ ಸೋಪಾನಗಳನ್ನು ನಿರ್ಮಿಸಿದ್ದಾರೆ. ನವರಂಗದಲ್ಲಿ ದಕ್ಷಿಣ ದಿಕ್ಕಿಗೆ ಒಂದು ದ್ವಾರ ಬಾಗಿಲು ಇದ್ದು ಆನೇ ಚಿತ್ರದ ಸೋಪಾನಗಳನ್ನು ನಿರ್ಮಿಸಿದ್ದಾರೆ.।ದೇವಸ್ಥಾನದ ಹೊರ ಕವಚದಲ್ಲಿ ಸಿಂಹ, ಸರ್ಪ ನುಂಗುತ್ತಿರುವ ಸಿಂಹ, ಹುಲಿ ಸವಾರಿ ಮಾಡುತ್ತಿರುವ ನರಸಿಂಹ, ಎರಡು ದೇಹ ಒಂದು ತಲೆಯ ಸಿಂಹ, ಚತುರ್ಮುಖ ನಂದಿ, ಮೃದಂಗ ಬಾರಿಸುತ್ತಿರುವ ಕಲಾವಿದ ಇಂತಹ ಅಪರೂಪದ ಚಿತ್ರಗಳ ಕೆತ್ತನೆಯೂ ಇದೆ. ಗರ್ಭಗುಡಿಯ ಮೇಲೆ ನಿರ್ಮಿಸಿರುವ ಶಿಖರ ಪ್ರಾರಂಭದಲ್ಲೇ ಚಚ್ಚಾಕವಾಗಿದ್ದು, ನಾಲ್ಕೂ ಬದಿ ಎರಡು ದೇಹ ಒಂದು ಸಿಂಹದ ಮುಖವುಳ್ಳ ಆಕೃತಿಗಳನ್ನು

ನಿರ್ಮಿಸಲಾಗಿದೆ. ಮೇಲಕ್ಕೆ ಹೋದಂತೆ ಶಿಖರ ವೃತ್ತಾಕಾರವಾಗಿ ಗುಮ್ಮಟದ ಆಕಾರವನ್ನು ತಳೆದು, ತುದಿಯಲ್ಲಿ ಕಂಚಿನ ಕಳಸದೊಂದಿಗೆ ಕಂಗೊಳಿಸುತ್ತ ಆಕರ್ಷಕವಾಗಿ ಕಾಣುತ್ತದೆ. ದೇವಸ್ಥಾನದ ಹೊರಗಡೆ ಗರ್ಭಗುಡಿಗೆ ಎದುರಾಗಿ ದೀಪ ಸ್ತಂಭವನ್ನು ನಿಲ್ಲಿಸಲಾಗಿದೆ.

ವೀರಭದ್ರಸ್ವಾಮಿ ದೇವಾಲಯ

ಹೆಸರು : ವೀರಭದ್ರಸ್ವಾಮಿ ದೇವಾಲಯ

ಸ್ಥಳ : ಚಳ್ಳಕೆರೆ

ತಾಲೂಕು : ಚಳ್ಳಕೆರೆ

ಕಾಲಮಾನ : ವಿಜಯನಗರೋತ್ತರ ಪಾಳೆಯಗಾರರ ಅವಧಿ

ಈ ದೇವಾಲಯವು ಚಳ್ಳಕೆರೆ ಪಟ್ಟಣದ ಉತ್ತರಕ್ಕೆ ಬೆಂಗಳೂರು ಬಳ್ಳಾರಿ ಹೆದ್ದಾರಿಯ ಬಲಭಾಗದಲ್ಲಿ ಕಂಡುಬರುತ್ತದೆ. ಈ ದೇವಾಲಯದ ಹಿಂದಿನ ಭಾಗದಲ್ಲಿ ಪ್ರಾಚೀನ ಈಶ್ವರ ದೇವಾಲಯದ ಕುರುಹುಗಳು ಕಂಡುಬರುತ್ತವೆ. ವೀರಭದ್ರಸ್ವಾಮಿ ದೇವಾಲಯುವು ಪೂರ್ವಾಭಿಮುಖವಾಗಿದ್ದು ಪಾಳೆಯಗಾರರ ಕಾಲದಲ್ಲಿ ರಚನೆಯಾದಂತದ್ದಾಗಿದೆ. ಆದರೆ ಈ ದೇವಾಲಯದ ನಿರ್ಮಾಣದ ಕುರಿತು ಯಾವುದೇ ಲಿಖಿತ ದಾಖಲೆಗಳು ಲಭ್ಯವಿಲ್ಲ.

ಈ ದೇವಾಲಯವು ಗರ್ಭಗುಡಿ, ಸುಖನಾಸಿ, ಅಂತರಾಳ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಮುಖಮಂಟಪಕ್ಕೆ ಹೊಂದಿಕೊಂಡಂತೆ ಪ್ರದಕ್ಷಣಾ ಪಥ ಹಾಗೂ ತೆರೆದ ಮಂಟಪಗಳು ದೇವಾಲಯದ ಈಶಾನ್ಯ ದಿಕ್ಕಿಗೆ ಕಂಡುಬರುತ್ತವೆ. ಈ ದೇವಾಲಯದ ಗರ್ಭಗುಡಿಯು ಚೌಕಾಕಾರವಾಗಿದ್ದು, ಸುಮಾರು ೩ ಅಡಿ ಎತ್ತರದ ಕಪ್ಪು ಗ್ರಾನೈಟ್ ಶಿಲೆಯ ನಿಂತಂತಹ ವೀರಭದ್ರನ ಮೂರ್ತಿಯಿದೆ. ವೀರಭದ್ರನ ಮೂರ್ತಿಯು ಚತುರ್ಭುಜವನ್ನು ಹೊಂದಿದೆ. ಗರ್ಭಗೃಹ ಯಾವುದೇ ಅಲಂಕಾರವಿಲ್ಲದೇ ಸಾಧಾರಣಾವಾಗಿದೆ. ಗರ್ಭಗೃಹದ ದ್ವಾರ ಬಾಗಿಲಿಗೆ ಈಗ ಲೋಹದ ಹೊದಿಕೆಯನ್ನು ಜೋಡಿಸಿರುವುದರಿಂದ ಲಾಲಾಟ ಬಿಂಬದ ಶಿಲ್ಪ ಕಂಡುಬುರುತ್ತಿಲ್ಲ.

ಗರ್ಭಗುಡಿಗೆ ಹೊಂದಿಕೊಂಡೇ ಸುಖನಾಸಿಯಿದ್ದ ಅಲ್ಲಿ ಉತ್ಸವ ಮೂರ್ತಿಗಳನ್ನು ಇಟ್ಟಿದ್ದಾರೆ. ಒಂದು ವೀರಭದ್ರನ ಉತ್ಸವ ಮೂರ್ತಿ, ಇನ್ನೊಂದು ಬೈರವನ ಉತ್ಸವ ಮೂರ್ತಿಗಳಾಗಿವೆ.ಅಂತರಾಳ ಭಾಗವು ವಿಶಾಲವಾಗಿದ್ದು ಸಾಧಾರಣ ಕಂಬಗಳನ್ನು ನಿಲ್ಲಿಸಿದ್ದಾರೆ. ಮುಖ ಮಂಟಪವು ಒಟ್ಟು ಹನ್ನೆರಡು ಕಂಬಗಳಿಂದ ಕೂಡಿದ್ದು ಯಾವುದೇ ರೀತಿಯ ಅಲಂಕಾರ ಕಂಡುಬರುವುದಿಲ್ಲ. ಅದರಲ್ಲಿ ೬ ಕಂಬಗಳು ನಮಗೆ ಗೋಚರಿಸುತ್ತವೆ. ಮುಖಮಂಟಪದಿಂದ ಅಂತರಾಳಕ್ಕೆ ಪ್ರವೇಶಿಸುವ ದ್ವಾರಬಾಗಿಲಲ್ಲಿ ಸಹ ಲಾಲಾಟ ಬಿಂಬ ಕಂಡುಬರದ ಹಾಗೆ ಲೋಹದ ಹೊದಿಕೆಯನ್ನು ತೊಡಿಸಿದ್ದಾರೆ.

ಪ್ರದಕ್ಷಿಣಾ ಪಥಕ್ಕೆ ಹೊಂದಿಕೊಂಡಂತೆ ಮಂಟಪವೊಂದರಲ್ಲಿ ಈಶಾನ್ಯ ದಿಕ್ಕಿನಲ್ಲಿ ಕಪ್ಪು ಗ್ರಾನೈಟ್ ಶಿಲೆಯ ಮಲಗಿರುವ ನಂದಿಯ ವಿಗ್ರಹವಿದ್ದು, ಕೊರಳಲ್ಲಿ ಗಂಟೆಗಳ ಸಾಲನ್ನು ಕೆತ್ತಿದ್ದಾರೆ. ಪ್ರಾಕಾರ ಗೋಡೆಯ ಪ್ರವೇಶ ದ್ವಾರದ ಮೇಲೆ ೬೦ ಅಡಿ ಎತ್ತರದ ರಾಜಗೋಪುರವನ್ನು ನಿರ್ಮಿಸಿದ್ದಾರೆ. ದೇವಾಲಯದ ಗರ್ಭಗುಡಿಯ ಮೇಲೆ ಶಿಖರವಿದ್ದು ನಾಲ್ಕೂ ಮೂಲೆಗಳಲ್ಲಿ

ಎರಡು ದೇಹ ಒಂದೇ ಮುಖವುಳ್ಳ ನಂದಿ ಶಿಲ್ಪಗಳನ್ನು ಗಾರೆಯಿಂದ ನಿರ್ಮಿಸಿದ್ದಾರೆ. ಪ್ರಾಕಾರ ಗೋಡೆಯ ದಕ್ಷಿಣ ದಿಕ್ಕಿನಲ್ಲಿ ಕೂಡ ಒಂದು ಪ್ರವೇಶ ದ್ವಾರವಿದ್ದು, ಅದರ ಮೇಲ್ಭಾಗದಲ್ಲಿ ಗಾರೆಯಿಂದ ನಿರ್ಮಿಸಿದ ಗಣೇಶನ ಮೂರ್ತಿಯಿದೆ. ಈ ದೇವಾಲಯದ ಉತ್ತರ ಭಾಗದಲ್ಲಿ ಪಾಪಿನಾಶಿನಿ ಎಂಬ ಚಿಕ್ಕ ತೊರೆಯು ಹರಿಯುತ್ತದೆ.

ಲಕ್ಷ್ಮಿನಾರಾಯಣ ದೇವಾಲಯ

ಹೆಸರು : ಲಕ್ಷ್ಮಿನಾರಾಯಣ ದೇವಾಲಯ

ಸ್ಥಳ : ಚಳ್ಳಕೆರೆ (ಹಳೆ ಟೌನ್)

ತಾಲೂಕು : ಚಳ್ಳಕೆರೆ

ಕಾಲಮಾನ : ವಿಜಯನಗರೋತ್ತರ ಪಾಳೆಯಗಾರರ ಅವಧಿ

ಈ ದೇವಾಯವು ಚಳ್ಳಕೆರೆಯ ಹಳೆಟೌನ್ ಸ್ಥಳದಲ್ಲಿ ನಿರ್ಮಾಣಗೊಂಡಿದೆ. ವೀರಭದ್ರಸ್ವಾಮಿ ದೇವಾಲಯದ ಪೂರ್ವಕ್ಕೆ ಈ ದೇವಾಲಯವು ಕಂಡುಬರುತ್ತದೆ. ಇದು ಪೂರ್ವಾಭಿಮುಖವಾಗಿದ್ದು, ಯಾವುದೇ ಅಲಂಕಾರವಿಲ್ಲದೇ ಸಾಧಾರಣವಾಗಿದೆ. ಈ ದೇವಾಲಯವು ಮೂರು ಚೌಕಾಕಾರದ ಗರ್ಭಗುಡಿಗಳನ್ನು ಹೊಂದಿದ್ದು, ಮಧ್ಯಭಾಗದ ಗರ್ಭಗುಡಿಯು ಸಾಧಾರಣಾವಾಗಿದೆ. ಅಲ್ಲಿ ಕಪ್ಪು ಗ್ರಾನೈಟ್ ಶಿಲೆಯ ನಿಂತಂತಹ ನರಸಿಂಹನ ವಿಗ್ರಹವು ಚತುರ್ಭುಜಧಾರಿಯಾಗಿದೆ. ಒಂದು ಕೈಯಲ್ಲಿ ಚಕ್ರ ಇನ್ನೊಂದು ಕೈಯಲ್ಲಿ ಶಂಖ ಪಾದವನ್ನು ಹೊಂದಿವೆ.

ಬಲಗಡೆಯ ಗರ್ಭಗಡಿಯು ಸಹ ಚೌಕಾಕಾರವಾಗಿದ್ದು ಮಲ್ಲಿಕಾರ್ಜುನನ ಕಂಚಿನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದಾರೆ. ಎಡಗಡೆಯ ಗರ್ಭಗುಡಿಯಲ್ಲೂ ಮಹಾಲಕ್ಷ್ಮಿಯ ಕಪ್ಪು ಗ್ರಾನೈಟ್ ಶಿಲೆಯ ವಿಗ್ರಹವಿದೆ. ತ್ರಿಕೂಟ ಮಾದರಿಯ ಗರ್ಭಗುಡಿಯ ಇಕ್ಕೆಲಗಳಲ್ಲಿ ನಾಗ ಶಿಲ್ಪಗಳನ್ನು ಪ್ರತಿಷ್ಠಾಪಿಸಿದ್ದಾರೆ. ದೇವಾಲಯದ ಮುಖ ಮಂಟಪದಲ್ಲಿ ಕಂಬಗಳಿದ್ದು, ಯಾವುದೇ ಅಲಂಕಾರವನ್ನು ಹೊಂದಿಲ್ಲದೆ ಸಾಧಾರಣಾವಾಗಿವೆ. ದೇವಾಲಯದ ಮುಂದೆ ಗರುಡು ಸ್ತಂಭಗಳಿದ್ದು ಅವು ಬಿಳಿ ಗ್ರಾನೈಟ್ ಶಿಲೆಯದ್ದಾಗಿವೆ. ಈ ಸ್ತಂಭಗಳು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಲ್ಪಟ್ಟಿವೆ. ಇಲ್ಲಿ ಹಲವು (೨೦) ನಾಗಪ್ರತಿಮೆಗಳನ್ನು ಹಾಗೂ ನಾಗಶಿಲ್ಪಗಳನ್ನು ಕಾಣಬಹುದು. ಈ ಅಧಿಷ್ಠಾನದ ಮೇಲೆ ತುಂಡಾಗಿ ಬಿದ್ದಿರುವ ಸ್ತಂಭದ ಮೇಲೆ ನೊಳಂಬರ ಕಾಲದ ಶಾಸನವು ಕಂಡುಬರುತ್ತದೆ. ಈ ದೇವಾಲಯದ ವಾಯುವ್ಯ ದಿಕ್ಕಿನ ಒಂದು ಮಂಟಪದಲ್ಲಿ ನಾಗಪ್ರತಿಮೆಗಳನ್ನು ಪ್ರತಿಷ್ಠಾಪಿಸಲಾಗಿದೆ.

ಪೇಟೆ ಆಂಜನೇಯ ಸ್ವಾಮಿ ದೇವಾಲಯ

ಹೆಸರು : ಪೇಟೆ ಆಂಜನೇಯ ಸ್ವಾಮಿ ದೇವಾಲಯ

ಸ್ಥಳ : ಚಳ್ಳಕೆರೆ (ಹಳೆ ಟೌನ್)

ಕಾಲಮಾನ : ಪಾಳೆಯಗಾರರ ಅವಧಿ

ಚಳ್ಳಕೆರೆಯ ಹಳೆ ನಗರ ಪ್ರದೇಶದಲ್ಲಿ ದಕ್ಷಿಣಾಭಿಮುಖವಾಗಿ ಈ ದೇವಾಲಯವಿದೆ. ಪ್ರಸ್ತುತ ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯು ಚೌಕಾಕಾರವಾಗಿದ್ದು ಆಂಜನೇಯನ ವಿಗ್ರಹವು ಪೂರ್ವ

ಭಾಗಕ್ಕೆ ತನ್ನ ಮುಖವನ್ನು ತಿರುಗಿಸಿದ್ದು, ರಾಕ್ಷಸನನ್ನು ಸಂಹಾರ ಮಾಡುತ್ತಿರುವಂತಹ ಉಗ್ರರೂಪದಲ್ಲಿ ಕೆತ್ತಲಾಗಿದೆ.

ಜಗಲೂರು ಪಾಪಯ್ಯನ ದೇವಾಲಯ

ಚಳ್ಳಕೆರೆ ಪಟ್ಟಣಕ್ಕೆ ಪಶ್ಚಿಮ ದಿಕ್ಕಿನಲ್ಲಿ 2 ಕಿ.ಮಿ. ದೂರದಲ್ಲಿ ಜಗಲೂರು ಪಾಪಯ್ಯನ (ಜಗಲೂರಜ್ಜ) ದೇವಾಲಯವಿದೆ. ಈ ದೇವಾಲಯವು ನೂತನವಾಗಿ ನಿರ್ಮಾಣಗೊಂಡಿದ್ದರೂ ಸಹ ಇದರ ಹಿನ್ನೆಲೆ ಕುರಿತು 500 ವರ್ಷಗಳ ಹಿಂದಿನ ಮೌಖಿಕ ಇತಿಹಾಸ ಹೊಂದಿದೆ. ಇದು ಮ್ಯಾಸಬೇಡರ ಆರಾಧನಾ ದೈವವಾಗಿದ್ದು ಸಸ್ಯ ಮತ್ತು ಮಾಂಸಾಹಾರದ ಎಡೆ ನೀಡುವ ಪದ್ಧತಿ ಬಹಳ ವಿನೂತನ ರೀತಿಯಾಗಿದೆ. ಜಾತಿಭೇದವಿಲ್ಲದ ಜನಕ್ಕೆ ಶ್ರೀ ಶ್ರೀನಿವಾಸ ತಿರುಪತಿ ತಿಮ್ಮಪ್ಪನ ಭಕ್ತನನ್ನು ನೆನಪಿಸಿಕೊಳ್ಳುವಂತಹ ಅನುಗ್ರಹ ದಯೆಪಾಲಿಸುವ ಸ್ವಾಮಿ ಎನಿಸಿಕೊಂಡಿರುವ ಕ್ಷೇತ್ರ

ಕನ್ನೇಶ್ವರ ದೇವಾಲಯ

ಕನ್ನೇಶ್ವರ ದೇವಾಲಯ ಚಳ್ಳಕೆರೆ ತಾಲೂಕಿನ ದೊಡ್ಡೇರಿ ಎಂಬ ಐತಿಹಾಸಿಕ ಗ್ರಾಮದಲ್ಲಿದೆ. ದೊಡ್ಡೇರಿ ಗ್ರಾಮದ ದಕ್ಷಿಣ ಭಾಗದಲ್ಲಿ ಊರ ಹೊರಗಡೆ ಒಂದು ಫರ್ಲಾಂಗು ದೂರದಲ್ಲಿ ಈ ದೇವಾಲಯವನ್ನು ನಿರ್ಮಿಸಲಾಗಿದೆ. ಈ ದೇವಾಲಯದ ಪೂರ್ವ ದಿಕ್ಕಿನಲ್ಲಿ ದೊಡ್ಡೇರಿಯ ಚಿಕ್ಕ ಕೆರೆಯು ನಿರ್ಮಾಣಗೊಂಡಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗುಡಿ, ಅಂತರಾಳವನ್ನು ಮಾತ್ರ ಹೊಂದಿದ್ದು ಇದು ಜೀರ್ಣೋದ್ಧಾರ ಹೊಂದಿದೆ. ಇದು ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಾಣ ವಾಗಿದ್ದು ಗರ್ಭಗೃಹವು ಚೌಕಾಕಾರವಾಗಿ ಯಾವುದೇ ಅಲಂಕಾರವಿಲ್ಲದೆ ಸಾಧಾರಣವಾಗಿದೆ. ಗರ್ಭಗೃಹದಲ್ಲಿ ೩–೪ ಅಡಿ ಎತ್ತರವಾದ ಪೀಠದ ಮೇಲೆ ಕಪ್ಪು ಗ್ರಾನೈಟ್ ಶಿಲೆಯ ಈಶ್ವರಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಇಲ್ಲಿರುವ ಬೃಹದಾಕಾರದ ಶಿವ ಲಿಂಗದಿಂದ ಇದು ಪುರಾತನವಾದದ್ದು ಎಂದು ತಿಳಿಯಬಹುದಾಗಿದೆ. ಈ ಶಿವ ಲಿಂಗದ ವೈಶಿಷ್ಟ್ಯವೆಂದರೆ ಇದು ಬೃಹದಾಕಾರವನ್ನು ಹೊಂದಿದ್ದು ಕಲ್ಯಾಣಿ ಚಾಲುಕ್ಯರ ಅಥವಾ ವಿಜಯನಗರ ಅರಸರ ಅವಧಿಯಲ್ಲಿ ನಿರ್ಮಾಣವಾದಂತೆ ತೋರುತ್ತದೆ.

ಅಂತರಾಳದಲ್ಲಿ ನಾಲ್ಕು ಸಾಧಾರಣ ಕಂಬಗಳಿವೆ. ವಿಶಾಲವಾದ ಅಧಿಷ್ಠಾನದ ಮೇಲೆ ಮಂಟಪವನ್ನು ನಿರ್ಮಿಸಿದ್ದಾರೆ. ದೇವಾಲಯದ ಎದುರುಗಡೆ ದೀಪಸ್ತಂಭವನ್ನು ನಿಲ್ಲಿಸಲಾಗಿದೆ. ದೀಪ ಸ್ತಂಭದ ಮುಂದೆ ಎರಡು ಕಪ್ಪು ಶಿಲೆಯ ನಂದಿಯ ವಿಗ್ರಹಗಳು ಗರ್ಭಗುಡಿಯ ಕಡೆಗೆ ಮುಖಮಾಡಿವೆ. ಈ ನಂದಿಯ ವಿಗ್ರಹಗಳ ಕೊರಳಲ್ಲಿ ಗಂಟೆಯ ಸಾಲುಗಳನ್ನು ಮತ್ತು ಭುಜದ ಹಿಂದಿನವರೆಗೆ ಗಂಟೆಗಳ ಸಾಲುಗಳು ಕಟ್ಟಿರುವಂತೆ ಕೆತ್ತಲಾಗಿದೆ. ಇದಕ್ಕೆ ಪ್ರಾಕಾರ ಗೋಡೆಯನ್ನು ನಿರ್ಮಿಸಿದ್ದು, ಇದರ ಪ್ರಾಂಗಣದಲ್ಲಿ ಹಲವು ವೀರಗಲ್ಲುಗಳನ್ನು, ಗಣೇಶನ ವಿಗ್ರಹಗಳ ಅವಶೇಷಗಳನ್ನು ನಿಲ್ಲಿಸಿದ್ದಾರೆ.

ಗವಗಣೇಶ್ವರ ದೇವಾಲಯ

ಹೆಸರು : ಗವಗಣೇಶ್ವರ ದೇವಾಲಯ

ಸ್ಥಳ : ಚಿಕ್ಕಮಧುರೆ

ತಾಲ್ಲೂಕು : ಚಳ್ಳಕೆರೆ,

ಕಾಲಮಾನ : ಸುಮಾರು ಕ್ರಿ.ಶ ೮೧೫

ಈ ದೇವಾಲಯವು ಚಳ್ಳಕೆರೆ ತಾಲೂಕಿನ ಚಿಕ್ಕಮಧುರೆ ಗ್ರಾಮದಲ್ಲಿದೆ. ಹಾಳೂರು ಎಂದು ಕರೆಯಲ್ಪಡುತ್ತಿರುವ ಈಗಿನ ಗ್ರಾಮದ ಮಧುರೆ ಹಳ್ಳದ ದಕ್ಷಿಣ ಭಾಗದ ಏರು ದಿಬ್ಬದಲ್ಲಿ ಇದರ ಅವಶೇಷಗಳಿವೆ. ಚಳ್ಳಕೆರೆ ಪರಿಸರದಲ್ಲಿ ಕಂಡುಬರುವ ಅತೀ ಪ್ರಾಚೀನ, ಶಾಸನ ಉಲ್ಲೇಖಿತ ದೇವಾಲಯವಾಗಿದೆ. ಇದು ದಕ್ಷಿಣಾಭಿಮುಖವಾಗಿದ್ದು, ಚೌಕಾಕಾರದ ಗರ್ಭಗುಡಿ, ಅಂತರಾಳ ಮತ್ತು ಮುಖಮಂಟಪವನ್ನು ಹೊಂದಿದ್ದ ಅವಶೇಷಗಳು ಕಂಡುಬಂದಿವೆ. ಇದು ಈಗ ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಗರ್ಭಗುಡಿಯಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿರಬೇಕೆಂದು ಶಾಸನದಿಂದ ತಿಳಿದು ಬರುತ್ತದೆ. ಗರ್ಭಗುಡಿ ಅಂತರಾಳದ ಅಧಿಷ್ಠಾನ ಎತ್ತರವಾಗಿದ್ದಂತೆ ತೋರುತ್ತದೆ. ಮುಖಮಂಪವನ್ನು ಕೂಡ, ಗುರುತಿಸುವಷ್ಟು ಅವಶೇಷಗಳು ನಮಗೆ ಸಿಗುವುದಿಲ್ಲ. ಎಲ್ಲಾ ಅವಶೇಷಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಚಿಕ್ಕಮಧುರೆಯಲ್ಲಿ ದೊರೆತಿರುವ ಶಾಸನಗಳ ಪ್ರಕಾರ ಈ ದೇವಾಲಯವು ಸುಮಾರು ೯ ನೇ ಶತಮಾನಕ್ಕೆ (ಕ್ರಿ.ಶ ೮೧೫) ಸೇರಿದೆ ಎಂದು ತಿಳಿದುಬರುತ್ತದೆ.

ಈ ಶಾಸನದಲ್ಲಿ ಉಲ್ಲೇಖಿಸಿರುವಂತೆ ನೊಳಂಬರ ರಾಜರುಗಳಲ್ಲಿ ಶ್ರೀ ಪೃಥ್ವೀವಲ್ಲಭ ಪರಮೇಶ್ವರ ಪಲ್ಲವಾದಿ ರಾಜನ ಪತ್ನಿ 'ಗವಗಣಾಂಬೆ' ಎಂಬ ರಾಣಿಯು ಮದರಿ ಕಲ್ಲನ್ನು (ಚಿಕ್ಕಮಧುರೆ ಹಾಗೂ ಹಿರೇಮಧುರೆ) ರಾಜಧಾನಿಯಾಗಿಟ್ಟುಕೊಂಡು ಈ ಪ್ರಾಂತ್ಯವನ್ನು ಆಳುತ್ತಿರುವಾಗ ಈಶ್ವರನ ದೇವಾಸ್ಥನವನ್ನು ಕಟ್ಟಿಸಿದಳು. ಅದನ್ನು 'ಗವಗಣೇಶ್ವರ' ದೇವಾಲಯವೆಂದು ಶಾಸನದಲ್ಲಿ ಹೆಸರಿಸಿದೆ. ತರುವಾಯ ಅವರ ಪುತ್ರ ಪಲ್ಲವಮಲ್ಲನು ಈಶ್ವರನ ಕರುಣೆಯಿಂದ ಅಧಿಪತಿಯಾಗಿ ವೈಭವದಿಂದ ಆಳುತ್ತಿದ್ದಾಗ ಈ ದೇವಾಲಯದ ಶ್ರೇಯಾಭಿವೃದ್ಧಿಗೆಂದು ೧೨ ಮತ್ತರು (೧೮ ಎಕರೆ) ಭತ್ತ ಬೆಳೆಯುವ ಭೂಮಿಯನ್ನು ದಾನ ಮಾಡಿದ್ದರ ಉಲ್ಲೇಖವಿದೆ.

ಈಗ ಈ ದೇವಾಲಯವನ್ನು ಗ್ರಾಮದ ನೈರುತ್ಯ ಭಾಗಕ್ಕೆ ಸ್ಥಳಾಂತರಮಾಡಿ ಮಲ್ಲೇಶ್ವರ ದೇವಾಲಯ (ಮಲ್ಲಿಕಾರ್ಜುನ ದೇವಾಲಯ) ಎಂದು ಕರೆಯುತ್ತಿದ್ದಾರೆ. ಈ ಮಲ್ಲಿಕಾರ್ಜುನ ದೇವಾಲಯವು ಪೂರ್ವಾಭಿಮುಖವಾಗಿದ್ದು ಜೀರ್ಣೋದ್ಧಾರಗೊಂಡಿದೆ. ಗರ್ಭಗುಡಿಯು ಚೌಕಾಕಾರರವಾಗಿ ಸರಳವಾಗಿದ್ದು ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯದ ಈಶಾನ್ಯ ಪ್ರಾಂಗಣದಲ್ಲಿ ೪ ಶಾಸನಗಳುಳ್ಳ ಸ್ತಂಭಗಳು, ಸಪ್ತಮಾತೃಕೆಯರ ವಿಗ್ರಹಗಳು, ಗಣೇಶನ ಭಗ್ನವಿಗ್ರಹ, ವಿಷ್ಣುವಿನ ವಿಗ್ರಹ, ಕೆಲವು ನಾಗಪ್ರತಿಮೆಗಳ ಅವಶೇಷಗಳನ್ನು ಸ್ಥಳಾಂತಿರಿಸಿ ಇಡಲಾಗಿದೆ.

ರಾಮಲಿಂಗೇಶ್ವರ ಗುಹಾಂತರ ದೇವಾಲಯ :

ಹೆಸರು : ರಾಮಲಿಂಗೇಶ್ವರ ಗುಹಾಲಯ

ಗ್ರಾಮ : ರಾಮದುರ್ಗ

ತಾಲ್ಲೂಕು : ಚಳ್ಳಕೆರೆ

ಕಾಲಮಾನ : ಕ್ರಿ ಶ ೧೬-೧೭ನೇ ಶತಮಾನ

ರಾಮದುರ್ಗ ಗುಹಂತಾರ ದೇವಾಲಯವು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ನಾಯಕನ ಹಟ್ಟಿಯಿಂದ ಆಗ್ನೇಯಕ್ಕೆ ಸುಮಾರು 4 ಕಿ.ಮೀ. ದೂರದಲ್ಲಿರುವ ರಾಮದುರ್ಗದಲ್ಲಿದೆ. ಇದನ್ನು ಸ್ಥಳೀಯರು 'ಹೊಸಗುಡ್ಡ'ವೆಂದು, ರಾಮದುರ್ಗದ ಗುಡ್ಡವೆಂದೂ ಕರೆಯುತ್ತಾರೆ. ಈ ಗುಹಾಲಯವು ಒಂದು ಸಾಧಾರಣವಾದ ಬಂಡೆಗಲ್ಲಿನ ಗುಡ್ಡದಲ್ಲಿದ್ದು, ಇಲ್ಲಿ ಎರಡು ಸುತ್ತಿನ ಕೋಟೆಯೂ ಇದೆ. ಪಶ್ಚಿಮಾಭಿಮುಖವಾಗಿರುವ ಈ ಗುಹಾಲಯವು ತಳವಿನ್ಯಾಸದಲ್ಲಿ ಸರಳವಾಗಿದ್ದು, ವೇದಿಕೆಯ ಮೇಲೆ ಚಿಕ್ಕದಾದ ಗರ್ಭಗೃಹ ಹಾಗೂ ಮುಂಭಾಗದಲ್ಲಿ ನಾಲ್ಕು ಕಂಬ ಮತ್ತು ಎಂಟು ಅರೆಕಂಬಗಳ ಹಜಾರವನ್ನು ಹೊಂದಿದೆ. ಬಿಳಿಯ ಗ್ರಾನೈಟ್ ಗುಡ್ಡವನ್ನು ಕಡಿದು ಗುಹಾಲಯವನ್ನು ನಿರ್ಮಿಸಿದ್ದಾರೆ.

ಗರ್ಭಗೃಹ

ಕಟ್ಟಡದ ದೇವಾಲಯವನ್ನೇ ಹೋಲುವಂತಿರುವ ಈ ಗುಹಾಂತರ ದೇವಾಲಯದ ಗರ್ಭಗೃಹವು ನಾಲ್ಕು ಅಡಿಎತ್ತರದ ಅಧಿಷ್ಠಾನದ ಮೇಲಿದೆ. ಗರ್ಭಗೃಹವನ್ನು ಪ್ರವೇಶಿಸಲು ಎರಡು ಮೆಟ್ಟಿಲುಗಳನ್ನು ಕಲ್ಪಿಸಲಾಗಿದೆ. ಚೌಕಾರಕಾರವಾಗಿರುವ ಗರ್ಭಗೃಹದ ಮಧ್ಯದಲ್ಲಿರುವ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ಹಿಂಬದಿಯ ಒಳಭಿತ್ತಿಯಲ್ಲಿ ಮೂರು ಕೋಷ್ಟಕಗಳಿದ್ದು, ಮಧ್ಯದ ಕೋಷ್ಟಕದಲ್ಲಿ ನಾಗಶಿಲ್ಪವಿದೆ. ಪಾರ್ಶ್ವಗಳಲ್ಲಿರುವ ದೇವರ ಕೋಷ್ಟಕಗಳಲ್ಲಿ ಯಾವುದೇ ರೀತಿಯ ಶಿಲ್ಪಗಳಿಲ್ಲ. ಈ ಕೋಷ್ಟಕಗಳ ಮೇಲೆ ಎರಡು ಅಡ್ಡ ಪಟ್ಟಿಕೆಗಳಿದ್ದು, ಕೆಳಗಿನ ಪಟ್ಟಿಕೆಯಲ್ಲಿ ಪ್ರತಿಯೊಂದು ಕೋಷ್ಟಕದ ಮೇಲೆ ನಾಲ್ಕು ಕೋಷ್ಟಕಗಳಂತೆ ಒಟ್ಟು ಹನ್ನೆರಡು ಚಿಕ್ಕ ಚಿಕ್ಕ ಕೋಷ್ಟಕಗಳಿವೆ. ಆದರೆ ಇವುಗಳಲ್ಲಿ ಯಾವುದೇ ರೀತಿಯ ಶಿಲ್ಪಗಳಿಲ್ಲ. ಇದರ ಮೇಲಿನ ಪಟ್ಟಿಯಲ್ಲಿ ಸಾಲುಮರದ ಅಲಂಕರಣವಿದೆ. ಗರ್ಭಗೃಹದ ಬಾಗಿಲು ಸರಳವಾಗಿದ್ದು ಬಾಗಿಲು ತೋರಣ 5X2.5 ಅಡಿ ವಿಸ್ತೀರ್ಣದಲ್ಲಿದೆ.

ಬಾಗಿಲಿನ ತೋರಣದಲ್ಲಿ ಯಾವುದೇ ವಾಸ್ತುಶಿಲ್ಪದ ಅಲಂಕಾರವಿಲ್ಲ. ಗರ್ಭಗೃಹದ ಪ್ರವೇಶದ್ವಾರವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ. ಎಲ್ಲ ವಜ್ರ, ವಿಧ್ಯಾಥಕ ವಜ್ರ ಹಾಗೂ ವಲ್ಲಿ ಶಾಖೆಗಳಿವೆ. ಪೇದ್ಯ ಭಾಗದಲ್ಲಿ ಶೈವ ದ್ವಾರಪಾಲಕರಿರುವರು. ಶಾಖೆಗಳು ಲಾಲಟದಲ್ಲಿ ಮುಂದುವರಿದಿವೆ. ಗರ್ಭಗೃಹದ ಒಳ ಭಿತ್ತಿಯಲ್ಲಿರುವ ಅಲಂಕರಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಸ್ಲಾಮಿಕ್ ಶೈಲಿಯ ಪ್ರಭಾವವಿದ್ದಂತೆ ಕಾಣುತ್ತದೆ. ನೀರ್ಥಡಿ ರಂಗನಾಥಸ್ವಾಮಿ ದೇವಾಲಯದಲ್ಲಿ ಈ ರೀತಿಯ ಇಸ್ಲಾಂ ಶೈಲಿಯ ಸೂಕ್ಷ್ಮವಾದ ಪ್ರಭಾವರಿರುವುದನ್ನು ಇಲ್ಲಿ ಗಮನಿಸಬಹುದು.[೧೯]

ಲಿಂಗದ ಮೇಲಿನ ವಾಸ್ತುಶಿಲ್ಪ ಆಕರ್ಷಕವಾಗಿದ್ದು ಈ ತರಹದ ಕೆತ್ತನೆ ಇರುವ ಗುಹಾಲಯ ಬೇರೆಲ್ಲೂ ಇಲ್ಲ ಎಂದು ಡಾ. ಸಿ.ಎಸ್. ಪಾಟೀಲ್ ಅವರು ಹೇಳಿದ್ದಾರೆ.

ಗರ್ಭಗೃಹದ ಮುಂಭಾಗದಲ್ಲಿ ನಾಲ್ಕು ಪೂರ್ಣಕಂಬ ಮತ್ತು ಎಂಟು ಅರ್ಧ ಕಂಬಗಳ ಹಜಾರವಿದೆ. ಈ ಹಜಾರವು ಆರು ಅಂಕಣಗಳಿಂದ ಕೂಡಿದ ಮಧ್ಯದ ನಾಲ್ಕು ಕಂಬಗಳು ಬೃಹತ್ ಗಾತ್ರವಿದ್ದು ನಿರಾಲಂಕಾರವಾಗಿವೆ. ಚೌಕಾಕರದ ಪೀಠ, ಹಾಗೆಯೇ ಹಂತ ಹಂತವಾಗಿ ಚಿಕ್ಕದಾಗುತ್ತಾ ಚೌಕಾಕಾರವಾಗಿರುವ ದಿಂಡು ಹಾಗೂ ಮೇಲ್ಭಾಗದಲ್ಲಿ ನಾಲ್ಕೂ ಮೂಲೆಗಳಲ್ಲಿ ಇಳಿಬಿದ್ದಿರುವ ಕಮಲದ ಮೊಗ್ಗಿನ ಅಲಂಕಾರ ರೀತಿಯ ಬೋಧಿಗೆ ಭಾಗಗಳನ್ನು ಕಂಬಗಳಲ್ಲಿ ನೋಡಬಹುದು. ಪದ್ಮ ಅಲಂಕರಣದ ಸುತ್ತಲೂ ಅನೇಕ ಉಬ್ಬು ಶಿಲ್ಪಗಳಿವೆ. ಈ ಗುಹಾಲಯದ ಮೇಲ್ಭಾವಣಿಯಲ್ಲಿ ಮಹಾವತಾರ, ನರಸಿಂಹ, ಬೇಡರ ಕಣಪ್ಪ, ಮಹಿಷಮರ್ದಿನಿ, ಶಿವ, ಪಾರ್ವತಿ, ನಂದಿ, ರಾಮ, ಸೀತೆ, ಲಕ್ಷ್ಮಣ, ಸರಸ್ವತಿ ವಿವಿಧ ನಮೂನೆಯ ಆಂಜನೆಯ ಶಿಲ್ಪಗಳು, ಭೈರವ, ಷಣ್ಮುಖ, ಗಣಪತಿ, ವೀರಭದ್ರ ಶಿಲ್ಪಗಳು, ಕುದುರೆ ರಥವನ್ನು ಎರಡು ಕಾಲುಗಳಿಂದ ಎಳೆಯುತ್ತಿರುವ ಶಿಲ್ಪಗಳು, ಶಿವ, ವಿವಿಧ ಭಂಗಿಯಲ್ಲಿ ವಿವಿಧ ತರಹದ ಆಯುಧಗಳನ್ನು ಹಿಡಿದು ಕುಳಿತಿರುವ ದೃಶ್ಯದ ಶಿಲ್ಪ, ಕಾಳಿಂಗ ಮರ್ಧನ, ರಾಮಕೃಷ್ಣ, ನಂದಿ ಮುಂತಾದ ಶಿಲ್ಪಗಳು ಪ್ರಮುಖವಾಗಿವೆ. ಸುಮಾರು ೩೦ ಅಡಿ ಅಗಲ, ೨೦ ಅಡಿ ಉದ್ದ ವಿಸ್ತೀರ್ಣವಿರುವ ಈ ಹಜಾರ ಭಾಗವು ಗರ್ಭಗೃಹಕ್ಕಿಂತಲೂ ಸುಮಾರು ನಾಲ್ಕು ಅಡಿ ಆಳವಾಗಿದೆ. ಹಜಾರದ ಮುಂಭಾಗದಲ್ಲಿ ಶಿವಲಿಂಗಕ್ಕೆ ಅಭಿಮುಖವಾಗಿ ಕುಳಿತ ನಂದಿಯ ಶಿಲ್ಪವಿದೆ.

ಪ್ರಸ್ತುತ ಗಹಾಲಯವನ್ನು ನೋಡಿದ ತಕ್ಷಣ ನಮಗೆ ಬಾದಾಮಿಯ ಗುಹಾಲಯಗಳು ನೆನಪಿಗೆ ಬರುತ್ತವೆ. ಬಾದಾಮಿಯ ಗುಹಾಲಯಗಳಿಗೂ ಈ ಗುಹಾಲಯಕ್ಕೂ ಹೋಲಿಕೆಗಳಿದ್ದರೂ ಸಹ ಬಹಳಷ್ಟು ವ್ಯತ್ಯಾಸಗಳನ್ನು ಗುರುತಿಸಬಹುದಾಗಿದೆ. ನೋಡಲು ಒಂದೇ ರೀತಿ ಎನಿಸಿದರೂ ಕಾಲಮಾನ, ಶೈಲಿ, ಅಲಂಕರಣ ದಷ್ಟಿಯಿಂದ ಭಿನ್ನಾವಾಗಿರುವುದನ್ನು ಕಾಣುತ್ತವೆ.

ಕಾಲಮಾನ :

ರಾಮಲಿಂಗೇಶ್ವರ ಗುಹಾಲಯವನ್ನು ಉಲ್ಲೆಖಿಸುವ ಯಾವುದೇ ಶಾಸನಗಳು ಲಭ್ಯವಿಲ್ಲದ ಕಾರಣ ಇದರ ನಿರ್ಮಾಣ ಕಾಲವನ್ನು ಖಚಿತವಾಗಿ ಹೇಳುವುದು ಕಷ್ಟ. ಆದರೂ ಗುಹಾಲಯದ ವಾಸ್ತುಶೈಲಿ ಹಾಗೂ ಉಬ್ಬು ಶಿಲ್ಪಗಳ ಅಲಂಕರಣವನ್ನು ಗಮನಿಸಿದರೆ ಸುಮಾರು ಕ್ರಿ.ಶ. ೧೬-೧೭ ನೇ ಶತಮಾನದಲ್ಲಿ ಇದು ನಿರ್ಮಾಣವಾಗಿರಬಹುದೆಂದು ಅಂದಾಜಿಸಬಹುದಾಗಿದೆ. ಈ ಕಾಲಮಾನದಲ್ಲಿ ಹಟ್ಟಿ ಪಾಳಿಯಗಾರರು ಪ್ರಸ್ತುತ ಪ್ರದೇಶದಲ್ಲಿ ಆಳ್ವಿಕೆ ನಡೆಸುತ್ತಿದ್ದರಿಂದ ಬಹುಶಃ ಅವರೇ ಇದರ ನಿರ್ಮಾಪಕರಿರಬೇಕು.[೨೦] ನಾಯಕನ ಹಟ್ಟಿಯ ಬಖೈರಿನ ಪ್ರಕಾರ ಕ್ರಿ.ಶ. ೧೬೦೦ ರ ಕಾಲಾವಧಿಯಲ್ಲಿ ನಿರ್ಮಾಣವಾಗಿದೆ ಎಂದು ತಿಳಿದು ಬಂದಿದೆ. ಡಾ. ಎನ್. ಎಸ್. ರಂಗರಾಜುರವರು ಇದೇ ಕಾಲಮಾನವನ್ನು ವ್ಯಕ್ತಪಡಿಸಿದ್ದಾರೆ.[೨೧]

ಉಮಾಮಹೇಶ್ವರ ದೇವಾಲಯ

ಹೆಸರು : ಉಮಾಮಹೇಶ್ವರ ದೇವಾಲಯ

ಸ್ಥಳ : ಗೌರಿಪುರ

ತಾಲೂಕು : ಚಳ್ಳಕೆರೆ

ಕಾಲಮಾನ : ೧೩-೧೪ ನೇ ಶತಮಾನ.

ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿಯಿಂದ ಪೂರ್ವದಿಕ್ಕಿನಲ್ಲಿ ಸುಮಾರು ೫ ಕಿ.ಮೀ. ಅಂತರದಲ್ಲಿ ಗೌರಿಪುರ ಗ್ರಾಮವಿದೆ. ಈ ಗ್ರಾಮದ ಉತ್ತರ ಭಾಗದಲ್ಲಿ ಉಮಾ ಮಹೇಶ್ವರ ದೇವಾಲಯವಿದ್ದು ಪೂರ್ಣಾಭಿಮುಖವಾಗಿದೆ. ಪ್ರಸ್ತುತ ದೇವಾಲಯಕ್ಕೆ ಸಂಬಂಧಿಸಿದಂತೆ ಈವರೆಗೂ ಯಾವುದೇ ಶಾಸನಗಳು ದೊರೆತಿಲ್ಲವಾದರೂ ದೇವಾಲಯದ ವಾಸ್ತು ಶೈಲಿಯನ್ನು ಆಧರಿಸಿ ಹೇಳುವುದಾದರೆ ಇದರ ಕಾಲಮಾನ ಕ್ರಿ.ಶ. ಸುಮಾರು ೧೩-೧೪ ನೇ ಶತಮಾನ.

ದೇವಾಲಯವು ನಾಯಕನಹಟ್ಟಿ ಕೆರೆಯಿಂದ ಹರಿದು ವೇದಾವತಿ ನದಿಗೆ ಹರಿದು ಹೋಗುವ ಹಳ್ಳದ ಬಲದಂಡೆಯ ಮೇಲೆ ಪೂರ್ವ-ಪಶ್ಚಿಮಾಭಿಮುಖವಾಗಿ, ಗ್ರಾಮದ ಉತ್ತರಕ್ಕಿದೆ. ದೇವಾಲಯವು ಹೊರ ನೋಟಕ್ಕೆ ಸರಳವಾಗಿದ್ದು ಗರ್ಭಗುಡಿ, ಸುಖನಾಸಿ, ನವರಂಗ, ಮುಖ ಮಂಟಪ, ಗೋಪುರ, ಕಂಬಗಳಿಂದ ನಿರ್ಮಾಣಗೊಂಡಿದೆ. ದೇವಾಲಯವನ್ನು 'ಗೌರಿಶಂಕರ ದೇವಾಲಯ', 'ಉಮಾಮಹೇಶ್ವರ' ದೇವಾಲಯ ಎಂದು ಕರೆಯುತ್ತಾರೆ.

ಗರ್ಭಗುಡಿ

ಗರ್ಭಗೃಹವು ಚೌಕಾಕಾರವಾಗಿದ್ದು ಮಧ್ಯದಲ್ಲಿ ಪೀಠದ ಮೇಲೆ ಕುಳಿತ ಉಮಾಮಹೇಶ್ವರ ಶಿಲ್ಪವಿದೆ. ಶಿಲ್ಪವು ಸುಮಾರು ೫ ಅಡಿ ಎತ್ತರವಾಗಿದ್ದು ಬಳಪದ ಶಿಲೆಯಲ್ಲಿ ಆಕರ್ಷಕವಾಗಿದೆ. ಶಿವ ಚತುರ್ಭಜ ಸ್ಥಾನದಲ್ಲಿದ್ದು ಶಿವ ಬಲಗೈಯಲ್ಲಿ ಗಂಡು ಕೊಡಲಿ, ಎಡಗೈಯಲ್ಲಿ ಚಿಗರೆ, ಇನ್ನೊಂದು ಎಡಗೈಯಲ್ಲಿ ಪಾರ್ವತಿಯ ಸೊಂಟ ಹಾಗೂ ಇನ್ನೊಂದು ಬಲಗೈಯಲ್ಲಿ ಅಭಯ ಹಸ್ತ ನೀಡಿದ್ದಾನೆ. ಶಿವ ಎಡಗಾಲನ್ನು ಅರಳಿದ ಕಮಲದ ಹೂವಿನ ಮೇಲೆ ಇಟ್ಟಿದ್ದಾನೆ. ಪಾರ್ವತಿಯು ಮಹೇಶ್ವರನ ಎಡಕಾಲಿನ ತೊಡೆಯ ಮೇಲೆ ಕುಳಿತ್ತಿದ್ದಾಳೆ. ಗರ್ಭಗೃಹದ ಪ್ರವೇಶ ದ್ವಾರವು ನವೀಕೃತಗೊಂಡಿದೆ.

ಅಂತರಾಳ

ಗರ್ಭಗೃಹಕ್ಕೆ ಹೊಂದಿಕೊಂಡಂತೆ ಚಿಕ್ಕದಾದ ಅಯತಾಕಾರದ ಅಂತರಾಳವಿದೆ. ಇಲ್ಲಿ ಯಾವುದೇ ರೀತಿಯ ಶಿಲ್ಪಗಳಿಲ್ಲ. ಇದರ ಪ್ರವೇಶ ದ್ವಾರವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ. ಲಾಲಾಟದಲ್ಲಿ ಗಜಲಕ್ಷ್ಮಿಯ ಉಬ್ಬು ಶಿಲ್ಪವಿದೆ. ಪೇದ್ಯ ಭಾಗದಲ್ಲಿ ಶೈವ ದ್ವಾರಪಾಲಕರು ಹಾಗೂ ಸ್ತಂಭ ಶಾಖೆಯ ಕೆಳಭಾಗದಲ್ಲಿ ಕುಂಭಲಂಕಾರವಿದೆ.

ನವರಂಗ :

೨೪ ಅಡಿ ವಿಸ್ತೀರ್ಣದ ಚೌಕಾಕಾರವಾದ ನವರಂಗವಿದ್ದು ಗರ್ಭಗುಡಿಯ ಎದುರಿಗೆ ದಷ್ಟ ಪುಷ್ಟವಾದ ನಂದಿ ಶಿಲ್ಪವಿದೆ. ನವರಂಗವು ಮಧ್ಯದಲ್ಲಿ ನಾಲ್ಕು ಕಂಬಗಳು ಹಾಗೂ ಒಂಭತ್ತು

ಅರೆಕಂಬಗಳಿಂದ ಕೂಡಿದೆ. ಕಂಬಗಳಲ್ಲಿ ವಿವಿಧ ನಮೂನೆಯ ಶಿಲ್ಪಗಳಿವೆ. ಪೀಠಕಂಬವು ಮೇಲ್ಭಾಗದಲ್ಲಿ ೪ ಪುಷ್ಪ ಬೋದಿಗೆಗಳಿಂದ ಅಲಂಕೃತವಾಗಿವೆ. ರಾಮ,ಲಕ್ಷ್ಮಣ,ಸೀತೆ, ಸರಸ್ವತಿ, ದುರ್ಗಿ, ನರಸಿಂಹ, ಆಂಜನೇಯ, ಷಣ್ಮುಖ, ಗಂಡಬೇರುಂಡ, ಗಣೇಶ, ಬೇಡರ ಕಣ್ಣಪ್ಪ, ಭೈರವ ಇನ್ನಿತರ ಶಿಲ್ಪಗಳು ಹಾಗೂ ಕಾಮಧೇನು ಎಂದು ಕರೆಯುವ ಒಂದೇ ದೇಹ ನಾಲ್ಕು ಹಸು ಮುಖಗಳಿರುವ ಶಿಲ್ಪವಿದೆ. ಅಂತರಾಳದ ಇಕ್ಕೆಲಗಳಲ್ಲಿ ಗಣೇಶ ಮತ್ತು ಪಾರ್ವತಿಯವರ ಶಿಲ್ಪಗಳಿವೆ. ನವರಂಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕುಗಳಲ್ಲಿ ಪ್ರವೇಶದ್ವಾರವನ್ನು ಕಲ್ಪಿಸಲಾಗಿದೆ. ಈ ಪ್ರವೇಶದ್ವಾರಗಳು ಸರಳವಾಗಿದ್ದು ನಿರಾಲಂಕೃತವಾಗಿವೆ. ಲಾಲಾಟದಲ್ಲಿ ಗಜಲಕ್ಷ್ಮಿ ಹಾಗೂ ಮಧ್ಯದಲ್ಲಿ ಶೈವದ್ವಾರ ಪಾಲಕರಿರುವರು. ಪೂರ್ವದ ಪ್ರವೇಶದ್ವಾರದ ಮುಂಭಾಗದಲ್ಲಿ ನಾಲ್ಕು ಕಂಬಗಳ ನವೀಕೃತ ಮುಖಮಂಟಪವಿದೆ.

ಏರು ವಿನ್ಯಾಸದಲ್ಲಿ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣಗೊಂಡಿದೆ. ಅದರೆ ಅಧಿಷ್ಠಾನವು ಸಂಪೂರ್ಣವಾಗಿ ನೆಲದಲ್ಲಿ ಹೂತು ಹೋಗಿದ್ದು, ಚಾಚು ಪಟ್ಟಿಕಾ ಮಾತ್ರ ಕಂಡುಬರುತ್ತದೆ. ದೇವಾಲಯದ ಬಾಹ್ಯ ಭಿತ್ತಿಯಲ್ಲಿ ಗರ್ಭಗೃಹ ಭಾಗದ ಬಾಹ್ಯ ಭಿತ್ತಿಯು ಒಂದು ರೀತಿಯಲ್ಲಿದ್ದರೆ ಅಂತರಾಳ ಮತ್ತು ನವರಂಗದ ಬಾಹ್ಯ ಭಿತ್ತಿಯು ಮತ್ತೊಂದು ರೀತಿಯಲ್ಲಿದೆ. ಗರ್ಭಗೃಹದ ಬಾಹ್ಯಭಿತ್ತಿಯಲ್ಲಿ ಕೃಷ್ಣ ಸ್ತಂಭಗಳ ಮಧ್ಯದಲ್ಲಿ ಉಬ್ಬು ಶಿಲ್ಪಗಳನ್ನು ಕಂಡರಿಸಲಾಗಿದೆ. ಅವು ವೀರಭದ್ರ, ಶಿವ ಹಾಗೂ ಇತರೆ ಶಿವಲಿಂಗ ಮೂರ್ತಿಗಳಿವೆ. ಗರ್ಭಗೃಹದ ಮೇಲ್ಭಾಗದಲ್ಲಿ ಮೂರು ಅಂತಸ್ತಿನ ವಿಮಾನವಿದೆ. ವಿಮಾನದ ಮಧ್ಯದ ಕೋಷ್ಠಗಳಲ್ಲಿ ಶಿವನ ವಿವಿಧ ಮೂರ್ತಿಗಳಿವೆ. ಸ್ತೂಪಿಯಲ್ಲಿ ಕಳಸವಿದೆ.

೪.೨ ಮೂರ್ತಿ ಶಿಲ್ಪಗಳು

ಭಾರತ ದೇಶದಲ್ಲಿರುವಷ್ಟು ದೇವಾಲಯಗಳು, ಮೂರ್ತಿಶಿಲ್ಪಗಳು ಬೇರೆ ಯಾವ ದೇಶಗಳಲ್ಲೂ ಕಂಡುಬರುವುದಿಲ್ಲ. ಪ್ರತಿಯೊಂದು ಗ್ರಾಮ, ಹಳ್ಳಿಗಳಲ್ಲಿ ದೇವಾಲಯಗಳು, ಗುಡಿಗಳು ಇದ್ದೇ ಇರುತ್ತವೆ. ಪ್ರತಿಯೊಂದೂ ಹಳ್ಳಿಯಲ್ಲಿ ಕನಿಷ್ಠಪಕ್ಷ ಪೂಜೆ ಇಲ್ಲದ ಹಾಳು ಬಿದ್ದ ಚಿಕ್ಕ ಗುಡಿಯಾದರೂ ಇದ್ದು ಸುಂದರವಾದ ಮೂರ್ತಿ ಶಿಲ್ಪಗಳು ಇದ್ದೇ ಇರುತ್ತವೆ. ಭಾರತೀಯರ ಜೀನದಲ್ಲಿ ದೇವಾಲಯಗಳು, ಮೂರ್ತಿಶಿಲ್ಪಗಳು ಅಷ್ಟರ ಮಟ್ಟಿಗೆ ಬೆರೆತುಹೋಗಿವೆ.

ಶಿಲ್ಪಗಳ ಉಗಮ

ಭಾರತದಲ್ಲಿ ದೇವತಾರಾಧನೆ ಮತ್ತು ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಾಯಿತೋ ಅಂದಿನಿಂದಲೂ ದೇವತಾಮೂರ್ತಿಗಳ ಪ್ರತಿಷ್ಠಾಪನೆ ಮತ್ತು ಆರಾಧಾನೆ ನಡೆದುಕೊಂಡು ಬಂದಿತೆಂದು ಹೇಳಬಹುದು. ಯಾವುದೇ ಪಂಥದ ದೇವಾಲಯವಿರಲಿ ಆ ದೇವಾಲಯಕ್ಕೊಂದು ದೇವತಾಮೂರ್ತಿ ಇರುತ್ತದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಒಂದಕ್ಕೊಂದು ಅವಿನಾಭಾವ ಸಂಬಂಧವಿರುವುದನ್ನು ನಾವು ಗುರುತಿಸಬಹುದು. ವಾಸ್ತುಶಿಲ್ಪದ ಜೊತೆಯಲ್ಲಿಯೇ

ಮೂರ್ತಿಶಿಲ್ಪವೂ ಬೆಳೆದು ಬಂದಿದೆ ಎನ್ನುವುದು ಹಲವು ವಿದ್ವಾಂಸರ ವಾದ. ಆದರೆ ವಾಸ್ತುಶಿಲ್ಪಕ್ಕಿಂತಲೂ ಮೂರ್ತಿಶಿಲ್ಪಕ್ಕೆ ಪ್ರಾಚೀನ ಇತಿಹಾಸವಿದೆ. ವಾಸ್ತುಶಿಲ್ಪವು ದೇವರುಗಳಿಗೆ ಆಲಯದಂತಿದ್ದರೆ, ಮೂರ್ತಿಶಿಲ್ಪ ಸಾಕ್ಷತ್ ದೇವರಿಗೆ ಮೂರ್ತಿ ಸ್ವರೂಪವನ್ನು ನೀಡಿದೆ. ಅಂದರೆ ದೇವರುಗಳ ಕಲ್ಪನೆಯೇ ಸಾಂಕೇತಿಕವಾಗಿ ಈ ಮೂರ್ತಿಶಿಲ್ಪವು ಶಿಲ್ಪ ಸ್ವರೂಪ ಪಡೆದಿರುವುದನ್ನು ನೋಡಬಹುದು.[೨೨]

ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ 'ಮೂರ್ತಿಶಾಸ್ತ್ರ' ಎಂದು ಕರೆಯಬಹುದು. ಮೂರ್ತಿಶಿಲ್ಪವನ್ನು ವಿಗ್ರಹ, ಪ್ರತಿಮೆ, ಶಿಲ್ಪ, ಮೂರ್ತಿ, ಬಿಂಬ, ಪ್ರತಿಕೃತಿ ಮೊದಲಾದ ಸಮಾನಾರ್ಥಕ ಪದಗಳಿಂದ ಕರೆಯಲಾಗುತ್ತದೆ. ಶಾಸ್ತ್ರೀಯ ನಿರೂಪಣೆಯ ಪ್ರಕಾರ ಮೂರ್ತಿಯ ಒಂದು ರೂಪ ಒಂಭತ್ತು ಅಂಗಗಳನ್ನು ಒಳಗೊಂಡಿರುತ್ತದೆ. ಅವುಗಳೆಂದರೆ ನ್ಯಾಸ (ರೂಪ ಸಂಯೋಜನೆ) ಅಲಂಕಾರ, ಮುದ್ರಾ (ಹಸ್ತ ಮುದ್ರೆಗಳು), ಆಯುಧ, ಭಾಪ್ರಕಕ್ಷ (ಆಸನ), ವಾಹನ, ಉಪದೇವ (ಪ್ರಧಾನ ದೇವತೆಯ ಜೊತೆ ತೋರಿಸಲ್ಪಡುವ ಇತರೆ ಕಡಿಮೆ ಮಹತ್ವದ ದೇವತೆಗಳು.)[೨೩] ಈ ಶಾಸ್ತ್ರೀಯ ಸಂಪ್ರದಾಯಕ್ಕನುಗುಣವಾಗಿ ದೇವತಾ ಮೂರ್ತಿಗಳು ರೂಪಗೊಳ್ಳುತ್ತವೆ.

ಭಾರತದ ವಿವಿಧ ನೆಲೆಗಳ ಉತ್ಖನದಲ್ಲಿ ದೊರೆತ ಪ್ರಾಕ್ತಾನಶಾಸ್ತ್ರ ಆಧಾರಗಳಿಂದ ಮೂರ್ತಿಶಿಲ್ಪವು ವಾಸ್ತುಶಿಲ್ಪದಷ್ಟೇ ಪ್ರಾಚೀನವಾದುದೆಂದು ತಿಳಿದುಬರುತ್ತದೆ. ಸಿಂಧೂ ನದಿಬಯಲಿನ ಸಂಸ್ಕೃತಿಯಲ್ಲಿ ದೊರೆತ ಶಿಲ್ಪಗಳೇ ಈವರೆಗೆ ಲಭ್ಯವಾದ ಅತ್ಯಂತ ಪ್ರಾಚೀನ ಮೂರ್ತಿಶಿಲ್ಪಗಳೆಂದು ಪರಿಗಣಿಸಲಾಗಿದೆ.[೨೪] ವೇದಗಳ ಕಾಲದಲ್ಲಿ ಪ್ರಕೃತಿಯನ್ನು ಪೂಜಿಸುತ್ತಿದ್ದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯ ಆಕೃತಿಯ ಕಲ್ಪನೆಯನ್ನು ನೀಡಿರುವುದು ತಿಳಿದು ಬರುತ್ತದೆ.[೨೫] ರಾಮಾಯಣ ಹಾಗೂ ಮಹಾಭಾರತಗಳಲ್ಲಿ ದೇವಾಲಯಗಳ ಉಲ್ಲೇಖವಿರುವುದರಿಂದ ಆ ಕಾಲದಲ್ಲಿ ವಿಗ್ರಹಾರಾಧನೆ ಸ್ವಲ್ಪ ಮಟ್ಟಿಗೆ ಪ್ರಚಲಿತದಲ್ಲಿತ್ತೆಂದು ಪ್ರಾಕ್ತನಶಾಸ್ತ್ರಜ್ಞರ ಅಭಿಪ್ರಾಯವಾಗಿದೆ.[೨೬]

ಆದಿಇತಿಹಾಸಕ್ಕೆ ಬಂದರೆ ಭಾರತದಲ್ಲಿ ಮೂರ್ತಿಶಿಲ್ಪಗಳು ದೊರೆಯುವುದು ಮೌರ್ಯರ ಕಾಲಾವಧಿಯಲ್ಲಿ. ತನ್ನ ಪೂರ್ವಿಕರಿಗಿಂತ ಭಿನ್ನಾವಾಗಿ ಆಶೋಕ ಶಿಲಾ ಮಾಧ್ಯಮಕ್ಕೆ ಆಧ್ಯತೆಯನ್ನು ನೀಡಿದನು. ಶಿಲೆಯಿಂದ ನಿರ್ಮಿಸಿದ ಸ್ತಂಭಗಳ ಮೇಲ್ಭಾಗದಲ್ಲಿ ವೃಷಭ, ಆನೆ, ಸಿಂಹ, ಕುದುರೆಯ ಆಕೃತಿಗಳ ಶಿಲ್ಪಗಳು ಮುಖ್ಯವಾದುವಾಗಿವೆ.[೨೭] ಮೌರ್ಯರ ಶಕ್ತಿಯು ಇಳಿಮುಖವಾಗುತ್ತಿದ್ದಂತೆ ಶುಂಗರು, ಕಣ್ವರು, ಕುಶಾಣರು, ಕಳಿಂಗರು ನಂತರ ಗುಪ್ತರ ಅವಧಿಗಳಲ್ಲಿ ಗ್ರೀಕ್ ಮಿಶ್ರಣದೊಂದಿಗೆ ಗಾಂಧಾರ ಶೈಲಿಯ ರೂಪವನ್ನು ಪಡೆದು ಬೆಳವಣಿಗೆಯಾಯಿತು.[೨೮]

ಕರ್ನಾಟಕದಲ್ಲಿನ ಮೂರ್ತಿಶಿಲ್ಪ ಬೆಳವಣಿಗೆಯ ಪ್ರಾಚೀನತೆಯನ್ನು ಗಮನಿಸುವುದದಾರೆ ಕುಪ್ಪಗಲ್, ಪಿಕ್ಲಿಹಾಳ, ಸಂಗನಕಲ್ಲು, ತೆಕ್ಕಲಕೋಟೆ ಮುಂತಾದ ನೆಲೆಗಳಲ್ಲಿ ನಡೆಸಿದ ಉತ್ಖನನಗಳಿಂದ ನೂತನ ಶಿಲಾಯುಗ ಕಾಲದ ಸುಂದರ ಮಣ್ಣಿನ ಗೊಂಬೆಗಳು ದೊರೆತಿವೆ.[೨೯] ದಕ್ಷಿಣ ಭಾರತದಲ್ಲಿ ಐತಿಹಾಸಿಕ ಯುಗಕ್ಕೆ ಬಂದರೆ ಶಾತವಾಹನರ ಕಾಲದ ಗುಡಿ ಮಲ್ಲಂ, ಶಿವಲಿಂಗಂ, ಅತ್ಯುತ್ತಮ

ಕೊಡುಗೆಯಾಗಿದೆ.[೩೦] ಕದಂಬರ ಕಾಲಕ್ಕೆ ಬಂದರೆ ಮೂರ್ತಿಶಿಲ್ಪಗಳು ಹೇರಳವಾಗಿ ಕಂಡುಬುರುತ್ತವೆ. ನಂತರ ಗಂಗರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಸ್ಥಳೀಯ ಪಾಳೆಯಗಾರರು ಮೂರ್ತಿಶಿಲ್ಪಗಕಲೆಗೆ ನೀಡಿದ ಕಾಣಿಕೆ ಗಣನೀಯವಾದುದು.

ಚಳ್ಳಕೆರೆ ಪರಿಸರದ ಮೂರ್ತಿಶಿಲ್ಪಗಳನ್ನು ಅಧ್ಯಯನದ ದೃಷ್ಟಿಯಿಂದ ನಾವು ಪ್ರಮುಖವಾಗಿ ಈ ಕೆಳಕಂಡಂತೆ ವಿಂಗಡಿಸಿಕೊಳ್ಳಲಾಗಿದೆ.

೧. ಶಿಲಾ ಶಿಲ್ಪಗಳು

೨. ಗಾರೆ ಶಿಲ್ಪಗಳು

೩. ಕಂಚಿನ ಶಿಲ್ಪಗಳು

ಶಿಲಾ ಶಿಲ್ಪಗಳು

ಆರಂಭದಿಂದಲೂ ಮಾನವನು ಶಿಲೆಯೊಂದಿಗೆ ನಿಕಟ ಸಂಬಂಧ ಹೊಂದಿದ್ದು, ಹಿಂದಿನಿಂದಲೂ ಶಿಲೆಯಿಂದ ಮೂರ್ತಿಗಳ ನಿರ್ಮಾಣ ಕಾರ್ಯಕೈಗೊಳ್ಳುತ್ತಾ ಬಂದಿದ್ದಾನೆ. ಮತ್ಸ್ಯಪುರಾಣ ಕಲ್ಲಿನ ಮೂರ್ತಿಯ ತಯಾರಿಕೆಯ ಬಗ್ಗೆ ನಿರ್ಧರಿಸಿದೆ. ಶಿಲೆಗಳಲ್ಲಿ ಪುರುಷ ಶಿಲೆ, ಸ್ತ್ರಿ ಶಿಲೆ, ನಪುಂಸಕ ಶಿಲೆಗಳಿದ್ದು ಅವುಗಳನ್ನು ಕ್ರಮವಾಗಿ ಮುಖ್ಯ ಮೂರ್ತಿ, ಪೀಠ, ಪಿಂಡಕ ಅಥವಾ ಕೆಳಬಾಗದ ರಚನೆಗೆ ಬಳಸಬೇಕೆಂದು ತಿಳಿಸಲಾಗಿದೆ. ಚಳ್ಳಕೆರೆ ಪರಿಸರದಲ್ಲಿ ಶಿಲೆಯಿಂದ ರಚನೆಗೊಂಡಂತಹ ಹಲವು ಮೂರ್ತಿ ಶಿಲ್ಪಗಳನ್ನು ನಾವು ಕಾಣಬಹುದು. ಇವುಗಳು ವಿವಿಧ ಅರಸರ ಅವದಿಯಲ್ಲಿ ರಚನೆಗೊಂಡಂತಹವುಗಳಾಗಿವೆ. ಈ ಪರಿಸರದಲ್ಲಿ ಹೆಚ್ಚಾಗಿ ಶೈವ ಪಂಥ, ವೈಷ್ಣವ ಪಂಥ, ಶಾಕ್ತಪಂಥಕ್ಕೆ ಸಂಬಂಧಿಸಿದ ಮೂರ್ತಿಶಿಲ್ಪಗಳು ಕಂಡುಬಂದಿವೆ.

ವೀರಭದ್ರನ ಮೂರ್ತಿ

ಚಳ್ಳಕೆರೆ ಪಟ್ಟಣದ ಉತ್ತರ ದಿಕ್ಕಿಗಿರುವ ವೀರಭದ್ರಸ್ವಾಮಿ ದೇವಾಲಯದ ಚೌಕಾರಕಾರದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿರುವ ಮೂರ್ತಿಯು ವೀರಭದ್ರನದ್ದಾಗಿದೆ. ಈ ಮೂರ್ತಿಯು ಪೂರ್ವಾಭಿಮುಖವಾಗಿದ್ದು, ತ್ರಿಭಂಗಿಯಲ್ಲಿ ನಿಂತಿದೆ. ಚತುರ್ಭುಜದಾರಿಯಾದ ವೀರಭದ್ರನ ಮುಂದಿನ ಎಡಗೈಯು ವರಹಾ ಮುದ್ರೆ ಹಾಗೂ ಮುಂಭಾಗದ ಬಲಗೈ ಅಭಯ ಹಸ್ತ ಮತ್ತು ಹಿಂದಿನ ಎಡಗೈಯಲ್ಲಿ ಸ್ಥಿತಿಚಕ್ರ ಹಾಗೂ ಬಲಗೈಯಲ್ಲಿ ಶಂಖವನ್ನು ತೋರಿಸಲಾಗಿದೆ. ಕಿರೀಟಧಾರಿ, ಹಾರ, ಸರ, ಯಜ್ಞೋಪವೀತ, ಕುಂಡಲ, ಕಿಂಕಣಿ, ಕೈ ಖಡಗ, ಕಾಲ್ಗಡಗ, ಭುಜಬಂದಿ ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವನು. ಈ ವೀರಭದ್ರನ ಶಿಲ್ಪವು ಕಪ್ಪು ಶಿಲೆಯಲ್ಲಿ ಖಂಡರಿಸದ್ದಾಗಿದೆ.

ಚಳ್ಳಕೇರಮ್ಮನ ದೇವಾಲಯದ ಶಿಲ್ಪಗಳು

ಚಳ್ಳಕೆರೆ ಪಟ್ಟಣದ ಉತ್ತರಕ್ಕೆ ಚಳ್ಳಕೇರಮ್ಮ ದೇವಾಲಯವಿದೆ. ಚಳ್ಳಕೇರಮ್ಮನ ಮೂಲ ಮೂರ್ತಿ ಕೇವಲ ಒಂದು ಸ್ತ್ರೀ ರುಂಡವಿರುವ ವಿಗ್ರಹ ಮೂರ್ತಿ ಆಗಿದೆ. ಇದರ ಪಕ್ಕದಲ್ಲೆ ನಾಗರ ಹೆಡೆಯ

ಪ್ರಭಾವಳಿ ಹೊಂದಿರುವ ರುಂಡವಿರುವ ಮತ್ತೊಂದು ಸ್ತ್ರೀಯ ವಿಗ್ರಹವಿದೆ. ಸುಮಾರು ಒಂದೂವರೆ ಅಡಿ ಎತ್ತರ ಅಗಲ ಇರುವ ಈ ಸ್ತ್ರೀರುಂಡದ ಶಿಲೆಯ ವಿಗ್ರಹಗಳು ನಮ್ಮನ್ನು ಪ್ರಾಚೀನ ನೆಲೆಯತ್ತ ಕೊಂಡೊಯ್ಯುತ್ತವೆ. ಮೂಲ ಮೂರ್ತಿಯು ಸೌಮ್ಯ ಭಾವದಿಂದ ಕೂಡಿದ್ದಾಗಿದೆ. ದೇವಾಲಯದ ಹೊರ ಕವಚದಲ್ಲಿ ಸಿಂಹ, ಸರ್ಪ ನುಂಗುತ್ತಿರುವ ಸಿಂಹ, ಹುಲಿ ಸವಾರಿ ಮಾಡುತ್ತಿರುವ ನರಸಿಂಹ, ಎರಡು ದೇಹ ಒಂದು ತಲೆಯ ಸಿಂಹ, ಚತುರ್ಮುಖ ನಂದಿ, ಮೃದಂಗ ಬಾರಿಸುತ್ತಿರುವ ಕಲಾವಿದ ಇಂತಹ ಅಪರೂಪ ಶಿಲ್ಪಗಳು ಈ ದೇವಾಲಯದಲ್ಲಿ ನಮಗೆ ಕಂಡುಬರುತ್ತವೆ. ಅದೇ ರೀತಿ ಗರ್ಭಗುಡಿಯ ಬಾಗಿಲುವಾಡದಲ್ಲಿ ಹಾಗೂ ನವರಂಗದ ಪ್ರವೇಶ ದ್ವಾರದಲ್ಲಿ ದ್ವಾರಪಲಕಿಯರ ಉಬ್ಬು ಶಿಲ್ಪಗಳನ್ನು ಕೆತ್ತಿದ್ದಾರೆ.

ನಾರಾಯಣನ ಮೂರ್ತಿ :

ಚಳ್ಳಕೆರೆ ಪಟ್ಟಣದ ಈಶಾನ್ಯದ ಭಾಗದಲ್ಲಿರುವ ಲಕ್ಷ್ಮಿ ನಾರಾಯಣನ ತ್ರಿಕೂಟ ದೇವಾಲಯವಿದೆ. ಮಧ್ಯ ಭಾಗದ ಚೌಕಾಕರದ ಗರ್ಭಗುಡಿಯಲ್ಲಿ ನಾರಯಣನ ವಿಗ್ರಹವಿದೆ. ನಾರಾಯಣನು ಪೂರ್ವಾಭಿಮುವಾಗಿದ್ದು ನಿಂತಿರುವ ಭಂಗಿಯಲ್ಲಿದ್ದಾನೆ. ಚತುರ್ಭುಜಧರಿಯಾದ ಕಪ್ಪು ಶಿಲೆಯ ವಿಗ್ರಹವು ಶಂಖ, ಚಕ್ರ, ಅಭಯಹಸ್ತ, ವರಹಾ ಮುದ್ರೆಯಲ್ಲಿ ಕಂಡುಬರುತ್ತದೆ. ಕೀರಿಟಧಾರಿಯಾದ ಕಿವಿಯಲ್ಲಿ ಕುಂಡಲಿಗಳು ಕೊರಳಲ್ಲಿ ವಿವಿಧ ಹಾರ, ಸರಗಳಿವೆ. ಸೊಂಟಪಟ್ಟಿ ಹೊಂದಿದ್ದು ವೈಜಯಂತಿ ಹಾರ ಮಣಿಸರಗಳಿಂದ ಅಲಂಕೃತವಾಗಿದೆ. ಮೂರ್ತಿಯು ವಸ್ತ್ರಧಾರಿಯಾಗಿದ್ದು ದೋತಿ ಪಾದದವರೆಗೆ ಇಳಿಬಿದ್ದಿದೆ.

ನಂದಿಯ ವಿಗ್ರಹಗಳು (ಶಿಲ್ಪಗಳು)

ನಂದಿ ವಿಗ್ರಹಗಳನ್ನು ಈಶ್ವರ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಾಣಬಹುದು. ಕೆಲವು ದೇವಾಲಯಗಳಲ್ಲಿ ಅಪರೂಪಕ್ಕೆ ಕಂಡುಬರುವುದಿಲ್ಲ. ಈ ಶಿಲ್ಪಗಳು ಗರ್ಭಗೃಹದಲ್ಲಿರುವ ಶಿವ ಲಿಂಗಕ್ಕೆ ಅಭಿಮುಖವಾಗಿ ಅಂತರಾಳ ಅಥವಾ ನವರಂಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟಿವೆ. ಕೆಲವು ಕಡೆ ಪ್ರತ್ಯೇಕವಾಗಿ ದೇವಾಲಯಗಳ ಹೊರಗೆ ನಂದಿ ಮಂಟಪದಲ್ಲಿ ಪ್ರತಿಷ್ಠಾಪಿಸಲ್ಪಟಿವೆ. ಈ ಪರಿಸರದಲ್ಲಿ ಸಾಮಾನ್ಯವಾಗಿ ಎಲ್ಲಾ ನಂದಿ ವಿಗ್ರಹಗಳನ್ನು ಪೀಠದ ಮೇಲೆ ಕುಳಿಸಿರುವಂತೆ ಖಂಡರಿಸಲಾಗಿದೆ.

ಈ ನಂದಿ ಶಿಲ್ಪಗಳು ತನ್ನ ಮುಂದಿನ ಬಲಗಾಲನ್ನು ಹಿಂದಕ್ಕೆ ಮಡಚಿ, ಎಡಾಗಾಲನ್ನು ಸ್ವಲ್ಪ ಪಾದಕ್ಕೆ ಚಾಚಿರುವಂತೆ, ಹಿಂದಿನ ಬಲಗಾಲನ್ನು ಮುಂದಕ್ಕೆ ಚಾಚಿ, ಎಡಗಾಲನ್ನು ಹೊಟ್ಟೆಯ ಕೆಳಗೆ ಎಳೆದುಕೊಂಡು ಮಡಚಿ ಮಲಗಿರುವಂತೆ ಖಂಡರಿಸಲಾಗಿದೆ. ತನ್ನ ತಲೆಯನ್ನು ಮುಂದಕ್ಕೆ ನೇರವಾಗಿ ಚಾಚಿಕೊಂಡಿರುತ್ತವೆ. ನಂದಿಗಳಿಗೆ ಗಂಟಾಸರ, ಗಗ್ಗರು, ಕೊರಳ ಸರ, ಹಣೆಪಟ್ಟಿ, ಕಾಲ್ಗಡಗಳು ಮುಂತಾದ ಆಭರಣಗಳಿಂದ ಅಲಂಕರಿಸಲಾಗಿದೆ.

ಚಳ್ಳಕೆರೆಯ ಸೂಜಿಮಲ್ಲೇಶ್ವರ, ದೊಡ್ಡೇರಿಯ ಕನ್ನೇಶ್ವರ ದೇವಾಲಯ, ರಾಮದುರ್ಗದ ರಾಮಲಿಂಗೇಶ್ವರ ಗುಹಾಲಯ, ಕರೀಕೆರೆಯ ಈಶ್ವರ ದೇವಾಲಯ, ಚಿಕ್ಕ ಮಧುರೆಯ ಮಲ್ಲೇಶ್ವರ

ದೇವಾಲಯ, ಬೊಮ್ಮ ಸಮುದ್ರದ ಬಸವಣ್ಣನ ದೇವಾಲಯ, ಭರಮ ಸಾಗರದ ಬಸವೇಶ್ವರ ದೇವಾಲಯ, ಯಲಗಟ್ಟಿಯ ಬಸವೇಶ್ವರ ದೇವಾಲಯ, ಚಳ್ಳಕೆರೆಯ ವೀರಭದ್ರ ಸ್ವಾಮಿ ದೇವಾಲಯ ಆವರಣದಲ್ಲಿರುವ ನಂದಿ ಮಂಟಪ ಮುಂತಾದ ದೇವಾಲಯಗಳಲ್ಲಿ ನಂದಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ.

ಉಮಾಮಹೇಶ್ವರ ಮೂರ್ತಿಶಿಲ್ಪ

ಚಳ್ಳಕೆರೆ ತಾಲೂಕಿನ ನಾಯಕನಹಟ್ಟಿಯಿಂದ ಪೂರ್ವಕ್ಕೆ ಗೌರಿಪುರವೆಂಬ ಗ್ರಾಮವಿದ್ದು, ಈ ಗ್ರಾಮದ ಉತ್ತರಕ್ಕೆ ಉಮಾಮಹೇಶ್ವರ ದೇವಾಲಯವಿದೆ. ಈ ದೇವಾಲಯದ ಚೌಕಾರಕಾರದ ಗರ್ಭಗುಡಿಯಲ್ಲಿ ಉಮಾಮಹೇಶ್ವರ ಶಿಲ್ಪವು ಸುಂದರವಾಗಿ ಕೆತ್ತಲ್ಪಟ್ಟಿದೆ. ಮೂರ್ತಿ ಶಿಲ್ಪವು ಬಳಪದ ಕಲ್ಲಿನಲ್ಲಿ ಕೆತ್ತಲ್ಪಟ್ಟಿದ್ದು, ೫೧/೨ ಅಡಿ ಎತ್ತರ, ೩ ಅಡಿ ಅಗಲ, ೨೧/೨ ಅಡಿ ದಪ್ಪವಿದೆ. ಶಿವ ಚತುರ್ಭಜ ಸ್ಥಾನದಲ್ಲಿದ್ದು ಶಿವ ಬಲಗೈಯಲ್ಲಿ ಗಂಡುಕೊಡಲಿ, ಎಡಗೈಲ್ಲಿ ಚಿಗರೆ, ಇನ್ನೊಂದು ಎಡಗೈಯಲ್ಲಿ ಪಾರ್ವತಿಯ ಸೊಂಟ ಹಿಡಿದಿದ್ದಾನೆ. ಇನ್ನೊಂದು ಬಲಗೈಯಲ್ಲಿ ಅಭಯ ಹಸ್ತ ನೀಡಿದ್ದಾನೆ.

ಶಿವ ಎಡಗಾಲನ್ನು ಅರಳಿದ ಕಮಲದ ಹೂವಿನ ಮೇಲೆ ಇಟ್ಟಿದ್ದಾನೆ. ಪಾರ್ವತಿಯು ಬಲಗೈಯಲ್ಲಿ ಕಮಲವನ್ನು ಎಡಗೈಯನ್ನು ಶಿವನ ತೊಡೆಯ ಮೇಲೆ ಇಟ್ಟಿದ್ದಾಳೆ. ಪಾರ್ವತಿಯು ಪರಮೇಶ್ವರನ ಎಡಕಾಲಿನ ತೊಡೆಯ ಮೇಲೆ ಕುಳಿತಿದ್ದಾಳೆ. ಮೂರ್ತಿಶಿಲ್ಪ ಬಹಳ ಆಕರ್ಷಕವಾಗಿ ಜಾಲಾಂಧ್ರದಲ್ಲಿ ಕೆತ್ತಲಾಗಿದೆ. ಪ್ರತಿಯೊಬ್ಬರನ್ನು ಆಕರ್ಷಿಸುವ ಶಾಂತ ಸ್ವರೂಪದ ಮೂರ್ತಿ ಶಿಲ್ಪವಾಗಿದೆ. ಈ ಮೂರ್ತಿಶಿಲ್ಪವನ್ನು   ಪ್ರೊ. ಬಿ.ಡಿ. ವಿರೇಂದ್ರಕುಮಾರ್ ರವರು ಶಿವನ ಮೂರ್ತಿಶಿಲ್ಪಗಳಲ್ಲಿ ಒಂದಾದ ಶಾಂತ ಸ್ವರೂಪದ ಚಂದ್ರಶೇಖರ ಮೂರ್ತಿಶಿಲ್ಪ ಆಗಿದೆ ಎಂದಿದ್ದಾರೆ.[೩೧]

ಶಿವಲಿಂಗಗಳು

ಈ ಪರಿಸರದಲ್ಲಿ ದೊರೆಯುವ ಶಿವಲಿಂಗಗಳಲ್ಲಿ ಕೆಲವು ಚೌಕಾಕರದ, ವೃತ್ತಾಕಾರದ ಪೀಠಗಳನ್ನು ಹೊಂದಿವೆ. ಕೆಲವು ಶಿವಲಿಂಗಗಳು ಪೀಠ ಪೆಟ್ಟಿಕೆ ಹಾಗೂ ಜಲಾಹರಿಗಳನ್ನು ಹೊಂದಿವೆ. ಆದರೆ ಕೆಲವು ಶಿಲ್ಪಗಳು ಯಾವುದೇ ಪೀಠ ಪಟ್ಟಿಕೆಗಳಿಲ್ಲದೆ ನಿರ್ಮಾಣಗೊಂಡಿವೆ. ಶಿವಲಿಂಗಳಲ್ಲಿ ಪೀಠ, ಪಟ್ಟಿಕೆ, ಜಲಾಹರಿ ರುದ್ರ ಭಾಗಗಳು ಪ್ರಮುಖವಾಗಿ ಗೋಚರಿಸಿವೆ.[೩೨]

ದೊಡ್ಡೇರಿಯ ಕನ್ನೇಶ್ವರ ದೇವಾಲಯದ ಗರ್ಭಗುಡಿಯಲ್ಲಿರುವ ಸುಂದರವಾದ ಶಿವಲಿಂಗವು ೩ ೧/೨ ಅಡಿ ಎತ್ತರವಾದ ಬೃಹತ್ತಾದ ಪೀಠದ ಮೇಲೆ ಪ್ರತಿಷ್ಠಾಪನೆಗೊಂಡಿದೆ. ಇದು ಪೂರ್ವಾಭಿಮುವಾಗಿದೆ. ಇದಕ್ಕೆ ಜಲಹರಿಯು ಇದ್ದು, ಕಪ್ಪು ಗ್ರಾನೈಟ್ ಶಿಲೆಯಿಂದ ರಚಿಸಲಾಗಿದೆ. ರಾಮದುರ್ಗದ ರಾಮಲಿಂಗೇಶ್ವರ ಗುಹಾಲಯದ ಗರ್ಭಗೃಹದಲ್ಲಿ ಕಂಡರಿಸಲಾಗಿರುವ ಪೀಠದ ಮೇಲಿನ ಶಿವಲಿಂಗದ ರೂಪ ಆಕರ್ಷಕವಾಗಿದೆ.

ಆಂಜನೇಯನ ಮೂರ್ತಿಗಳು

ಚಳ್ಳಕೆರೆ ಪರಿಸರದಲ್ಲಿ ಪ್ರತಿಯೊಂದು ಊರುಗಳಲ್ಲಿ ಆಂಜನೇಯನ ಮೂರ್ತಿಗಳನ್ನು ಅತಿ ಹೆಚ್ಚಾಗಿ ಕಾಣಬಹುದು. ಈ ಮೂರ್ತಿಗಳೆಲ್ಲವೂ ಶಿಲೆಗಳಿಂದ ಕೆತ್ತಿದಂತಹ ಉಬ್ಬು ಶಿಲ್ಪಗಳಾಗಿವೆ. ಇಲ್ಲಿ ಪ್ರಮುಖವಾಗಿ ಪಾಳೆಯಗಾರರ ಅವಧಿಯಲ್ಲಿ ನಿರ್ಮಿಸಿದಂತಹ ಮೂರ್ತಿಗಳೇ ಕಂಡುಬರುತ್ತದೆ.

ಚಳ್ಳಕೆರೆಯ ಪೇಟೆ ಆಂಜನೇಯಸ್ವಾಮಿ ದೇವಾಲಯವು ನೂತನವಾಗಿದ್ದರೂ ಕೂಡ ಗರ್ಭಗುಡಿಯಲ್ಲಿ ಪೂರ್ವಕ್ಕೆ ಮುಖಮಾಡಿರುವ ಆಂಜನೇಯನ ಆಳೆತ್ತರದ ವಿಗ್ರಹವು ತುಂಬಾ ಸುಂದರವಾಗಿದೆ. ಹಾಗೆಯೇ ದೊಡ್ಡೇರಿಯಲ್ಲಿರುವ ಆಂಜನೇಯ ವಿಗ್ರಹ, ರೆಡ್ಡಿಹಳ್ಳಿಯಲ್ಲಿರುವ ಆಂಜನೇಯನ ವಿಗ್ರಹ ಮುಂತಾದವು ಕಪ್ಪು ಗ್ರಾನೈಟ್ ಶಿಲೆಯಲ್ಲಿ ಖಂಡರಿಸಲ್ಪಟ್ಟಿವೆ. ಸಾಮಾನ್ಯವಾಗಿ ಈ ಮೂರ್ತಿಗಳು ದಕ್ಷಿಣಾ ಭಿಮುಖವಾಗಿದ್ದು ಪೂರ್ವಕ್ಕೆ ಮುಖ ತಿರುಗಿಸಿ ನಿಂತಿವೆ. ಇವುಗಳಲ್ಲಿ ಸುಮಾರು ೫ ಅಡಿಯಿಂದ ೧೦ ಅಡಿಯವರೆಗೆ ಎತ್ತರವಾಗಿವೆ. ಇವುಗಳ ಮೇಲ್ಭಾಗದಲ್ಲಿ ವೈಷ್ಣವ ಧರ್ಮವನ್ನು ಸೂಚಿಸುವ ಚಿಹ್ನೆಗಳನ್ನು ಕಾಣಬಹುದು. ಕೆಳಭಾಗದಲ್ಲಿ ಆಯುಧ ಹಿಡಿದು ಮಲಗಿರುವ ರಾಕ್ಷಸನನ್ನು ಆಂಜನೇಯನು ತುಳಿಯುತ್ತಿರುವಂತೆ ಕೆತ್ತಲಾಗಿದೆ.

ಈ ಮೂರ್ತಿಗಳಲ್ಲಿ ಕಂಡುಬರುವ ಪ್ರಮುಖ ಲಕ್ಷಣಗಳೆಂದರೆ ಕಿವಿಯಲ್ಲಿ ಕುಂಡಲಗಳನ್ನು ಧರಿಸಿದ್ದು ಕಂಠಿಹಾರ ಧರಿಸಿದ್ದು, ಸೊಂಟದಲ್ಲಿ ಸೊಂಟಪಟ್ಟಿ ಹಾಗೂ ಕಂಠದಲ್ಲಿ ಹಲವು ಹಾರಗಳನ್ನು ಕಾಣಬಹುದು. ಭುಜದ ಮೇಲೆ ಮಣಿ ಸರಿಗಳಿಂದ ಅಲಂಕರಿಸಿದ ವಸ್ತ್ರವಿರುತ್ತದೆ. ಬಲಗೈಯನ್ನು ಮೇಲೆ ಎತ್ತಿರುವಂತಿವೆ. ಎಡಗೈಯಲ್ಲಿ ಪಾಶವನ್ನು ಹಿಡಿದಿರುವಂತೆ ಖಂಡರಿಸಲಾಗಿದೆ. ಕೈಯಲ್ಲಿ ಕೈಕಡಗ, ಭುಜಕೀರ್ತಿ, ಕೇಯೂರಗಳನ್ನು ಹಾಗೂ ಕಾಲಲ್ಲಿ ಕಾಲ್ಗಡಗ, ಪಾದ ಸರಗಳನ್ನು ಕೆತ್ತಲಾಗಿರುವುದು ಕಂಡುಬಂದಿದೆ.

ಸಪ್ತಮಾತೃಕೆಯರ ಶಿಲ್ಪ

ವೈದಿಕ ಸಾಹಿತ್ಯದಲ್ಲಿ ಕಂಡುಬರುವ ಪುರುಷ ದೇವರುಗಳಿಗೆ ಸ್ತ್ರೀದೇವತೆಗಳನ್ನು ಶಕ್ತಿ ದೇವತೆಗಳೆಂದು ನಿರೂಪಿಸಿ ಅಳವಡಿಸಿದರು. ಶಿವನಿಗೆ ಶಿವ (ಶಕ್ತಿ), ವಿಷ್ಣುವಿಗೆ ಲಕ್ಷ್ಮಿ, ಬ್ರಹ್ಮನಿಗೆ ಸರಸ್ವತಿ, ಗಣಪತಿಗೆ ಪುಷ್ಟಿ, ಅನಂತನಿಗೆ ತುಷ್ಟಿ, ಕಾಲನಿಗೆ ರಾತ್ರಿ, ಸೂರ್ಯನಿಗೆ ಸಂಜ್ಞೆ, ಇಂದ್ರನಿಗೆ ಸಚಿ , ಅಗ್ನಿಗೆ ಸ್ವಾಹಾ, ದಕ್ಷನಿಗೆ ರುಕ್ಮಿಣಿ, ಸ್ಕಂದನಿಗೆ ದೇವಸೇನ ಹಾಗೂ ಇನ್ನಿತರರು. ಈ ಸಪ್ತ ಮಾತೃಕೆಯರನ್ನು ಶಿಲ್ಪದಲ್ಲಿ ಒಂದೇ ಫಲಕದಲ್ಲಿ ಸಾಲಾಗಿ ಅಥವಾ ಬೇರೆ ಬೇರೆ ಬಿಡಿ ಶಿಲ್ಪಗಳಲ್ಲಿಯೂ ತೋರಿಸುವರು. ಸಪ್ತ ಮಾತೃಕೆಯವರನ್ನು ಒಂದೇ ಘಟಕದಲ್ಲಿ ತೋರಿಸಿದ್ದರೆ ಸಾಮಾನ್ಯವಾಗಿ ಅವರ ಕ್ರಮ ಬ್ರಾಹ್ಮೀ, ಮಹೇಶ್ವರ, ಕೌಮಾರಿ ಅಥವಾ ಕಾರ್ತಿಕೇಯ, ವೈಷ್ಣವಿ, ವರಾಹಿ, ಇಂದ್ರಾಣಿ, ಚಾಮುಂಡಿ. ಬ್ರಾಹ್ಮೀಯ ಬಲಭಾಗದಲ್ಲಿ ವೀರಭದ್ರನನ್ನು, ಚಾಮುಂಡಿಯ ಎಡಭಾಗದಲ್ಲಿ ಗಣೇಶನನ್ನು ಪ್ರತಿಷ್ಠಾಪಿಸಿರುತ್ತಾರೆ.[೩೩]

ಪ್ರಸ್ತುತ ಅಧ್ಯಯನ ಪ್ರದೇಶದ ಚಿಕ್ಕಮಧುರೆಯ ಮಲ್ಲೇಶ್ವರ ದೇವಾಸ್ಥನದ ಪ್ರಾಂಗಣದಲ್ಲಿ ಸಪ್ತಮಾತೃಕೆಯರ ಶಿಲ್ಪಗಳು ಕಂಡುಬಂದಿವೆ. ಈ ಶಿಲ್ಪದ ಒಂದೇ ಪಟ್ಟಿಕೆಯಲ್ಲಿ ಸಪ್ತಮಾತೃಕೆಯರನ್ನು

ತೋರಿಸಲಾಗಿದೆ. ಇವರು ಸತ್ಯ ಲಲಿತಾಸನದಲ್ಲಿ ಪೀಠದ ಮೇಲೆ ಕುಳಿತಿರುವರು ಪೀಠದಲ್ಲಿ ಅವರುಗಳ ವಾಹನಗಳನ್ನೂ ತೋರಿಸಲಾಗಿದೆ. ಚತುರ್ಭುಜಧಾರಿಗಳಾದ ಇವರು ವಸ್ತ್ರಧಾರಿಗಳಾಗಿದ್ದು ವಿವಿಧ ಅಭರಣಗಳಿಂದ ಅಲಂಕೃತಗೊಂಡಿರುವರು. ಕಮ್ಮತ್ ಮರಿಕುಂಟೆ ಗ್ರಾಮದ ಪೂರ್ವಭಾಗದ ಹೊಲದಲ್ಲಿ ಇದೇ ಲಕ್ಷಣಗಳುಳ್ಳ ಸಪ್ತಮಾತೃಕೆಯರ ಇನ್ನೊಂದು ಶಿಲ್ಪವಿದೆ.

ಮಹಿಷಾಸುರ ಮರ್ಧಿನಿ

ಚಿಕ್ಕ ಮಧುರೆಯ ಮಲ್ಲೇಶ್ವರ ದೇವಾಲಯದ ಪ್ರಾಂಗಣದ ಆಗ್ನೇಯ ಭಾಗದಲ್ಲಿ ಒಂದು ಮಹಿಷಾಸುರ ಮರ್ಧಿನಿಯ ಶಿಲ್ಪವಿದೆ. ಚತುರ್ಭುಜಧಾರಿಯಾದ ದೇವಿ ತನ್ನ ಮುಂದಿನ ಬಲಗೈಯಲ್ಲಿ ಹಿಡಿದಿರುವ ಉದ್ದನೆಯ ಈಟಿಯಿಂದ ಕೋಣನ ಕತ್ತಿಗೆ ತಿವಿದಿರುವಳು, ಮತ್ತೊಂದು ಎಡ ಭಾಗದ ಕೈಯಿಂದ ಕೋಣದ ಮುಖವನ್ನು ಹಿಡಿದಿರುವಳು, ದೇವಿ ತನ್ನ ಹಿಂದಿನ ಕೈಗಳಲ್ಲಿ ಶಂಖ–ಚಕ್ರಗಳನ್ನು ಹಿಡಿದಿರುವಳು. ದೇವಿಯು ಕಿರೀಟ, ಕುಂಡಲ, ಹಾರ, ಸರ, ಕೈಕಡಗ, ಕಾಲ್ಗಡಗ, ಇತ್ಯಾದಿ ಆಭರಣಗಳಿಂದ ಅಲಂಕೃತಗೊಂಡಿರುವಳು. ದೇವಿಯ ಬಲಭಾಗದಲ್ಲಿ ಅವಳ ವಾಹನವಾದ ಸಿಂಹ ಇರುವುದು. ಶಿಲ್ಪ ನಿರೂಪಣೆಯಲ್ಲಿ ಕ್ರಮಬದ್ಧತೆ ಕಾಣುವುದು.

ಹಾವಾಡದಮ್ಮ (ನಾಗಕನ್ಯೆ) ಮೂರ್ತಿ ಶಿಲ್ಪಗಳು

ಹಾವಿನ ರೂಪದಲ್ಲಿರುವ ಸ್ತ್ರೀ ಶಿಲ್ಪವಾಗಿದ್ದು ೧೫–೧೬ ನೇ ಶತಮಾನದ ಶಿಲ್ಪಗಳಾಗಿರಬಹುದು. ಈ ಶಿಲ್ಪಗಳು ಗ್ರಾನೈಟ್ ಕಲಿನಲ್ಲಿವೆ. ಕೆಳಭಾಗದಿಂದ ಸೊಂಟದವರೆಗೆ ಹಾವಿನ ರೂಪವಿದ್ದು, ಸೊಂಟದಿಂದ ಮೇಲ್ಭಾಗ ಸ್ತ್ರೀ ರೂಪವಿದೆ. ಕೈಗಳಿಗೆ, ಕೊರಳಿಗೆ ಆಭರಣಗಳನ್ನು ಧರಿಸಿರುವರು. ತಲೆಗೆ ಪೌರಾಣಿಕ ಕಿರೀಟ ಧರಿಸಿರುವರು. ಎರಡೂ ಕೈಗಳನ್ನು ಎದೆಯ ಹತ್ತಿರ ಜೋಡಿಸಿ ಮುಗಿದಿರುವುದು ಕಂಡುಬರುತ್ತದೆ. ಎಡ ಬಲ ತೋಳುಗಳ ಹತ್ತಿರ ಎರಡು ಹಾವುಗಳನ್ನು ಹಿಡಿದಿಟ್ಟುಕೊಂಡಿದ್ದು, ತಲೆ ಭಾಗದಿಂದ ಮೊಣಕಾಲಿನವರೆಗೂ ಹಾವುಗಳು ನೇತಾಡುತ್ತಿವೆ. ಹಾವುಗಳು ಎರಡು ಹೆಡೆ ಬಿಚ್ಚಿವೆ. ನಾಗಕನ್ಯೆ ವಿಗ್ರಹಗಳು ಗೌರಿಪರುದ ಉಮಾಮಹೇಶ್ವರ ದೇವಾಲಯದ ಎದುರಿಗೆ ಅರ್ಧ ಕಿ.ಮಿ. ದೂರದಲ್ಲಿ ಒಂದು ವಿಗ್ರಹ, ಚಿಗತನಹಳ್ಳಿಯ ದಕ್ಷಿಣ ಭಾಗದ ತೋಟದಲ್ಲೊಂದು ಹಾಗೂ ಚಳ್ಳಕೆರೆಯ ಲಕ್ಷ್ಮಿ ನಾರಾಯಣ ದೇವಾಲಯದ ಮುಂದಿನ ಗರುಡ ಸ್ತಂಭದ ಅಧಿಷ್ಠಾನ ಮೇಲೆ ಕಂಡುಬಂದಿವೆ.

ಗಣಪತಿಯ ಮೂರ್ತಿಶಿಲ್ಪಗಳು

ಚಿಕ್ಕ ಮಧುರೆಯ ಮಲ್ಲೇಶ್ವರ ದೇವಾಲಯ ಪ್ರಾಂಗಣದ ಈಶಾನ್ಯ ಭಾಗದಲ್ಲಿ ನಿಲ್ಲಿಸಿರುವ ಮೂರ್ತಿಶಿಲ್ಪಗಳಲ್ಲಿ ಭಗ್ನಗಣಪತಿಯ ಶಿಲ್ಪವೊಂದಿದೆ. ಈ ಗಣಪತಿಯು ಪೀಠದ ಮೇಲೆ ಆಸೀನನಾಗಿದ್ದು ಚತುರ್ಭಜಧಾರಿಯಾಗಿದೆ. ನಾಲ್ಕು ಕೈಗಳಲ್ಲಿ ವಿವಿಧ ವಸ್ತುಗಳನ್ನು ಹಿಡಿದುಕೊಂಡಿದ್ದು, ಪೂರ್ವಾಭಿಮುಖವಾಗಿದೆ. ಕಪ್ಪು ಶಿಲೆಯಲ್ಲಿ ನಿರ್ಮಾಣವಾಗಿರುವಂತಹ ಗಣಪತಿ ಮೂರ್ತಿಯ ಸೊಂಡಿಲು ಭಗ್ನಗೊಂಡಿದೆ. ಪೀಠದ ಕೆಳಗೆ ಈತನ ವಾಹನವಾದ ಇಲಿಯನ್ನು ಕಾಣಬಹುದು.

ಅದೇ ರೀತಿ ದೊಡ್ಡೇರಿಯ ಕನ್ನೇಶ್ವರ ದೇವಾಲಯದ ಆವರಣದಲ್ಲಿ ಉತ್ತರಾಭಿಮುಖವಾಗಿರುವ ಪ್ರಾಚೀನ ಗಣಪತಿಯು ಗ್ರ್ಯಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ಇದು ಚತುರ್ಭುಜಧಾರಿಯಾಗಿದ್ದು ವಿವಿಧ ವಸ್ತುಗಳನ್ನು ಕೈಯಲ್ಲಿ ಹಿಡಿದುಕೊಂಡಿದೆ. ಇವನ ವಾಹನವಾದ ಇಲಿಯನ್ನು ಕಾಣುತ್ತೇವೆ. ಎರಡೂ ಗಣಪತಿಯ ವಿಗ್ರಹಗಳು ಕಿರೀಟಗಳನ್ನು ಧರಿಸಿದ್ದು ಕೊರಳಲ್ಲಿ ವಿವಿಧ ಹಾರ, ಸರಗಳ ಅಲಂಕಾರವಿರುವುದನ್ನು ನಾವು ಕಾಣುತ್ತೇವೆ.

೪.೩ ರಕ್ಷಣಾ ವಾಸ್ತುಶಿಲ್ಪ : ಕೋಟೆ ಕೊತ್ತಲುಗಳು

ಸಾಮಾನ್ಯವಾಗಿ ಕೋಟೆ ಎಂದರೆ ಒಳಗಿರುವ ವ್ಯಕ್ತಿಗಳಿಗೆ, ವಸ್ತುಗಳಿಗೆ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸಿಕೊಡುವ ಪ್ರಮುಖ ಸಾಧನವಾಗಿದೆ. ವಾಸ್ತವವಾಗಿ ಕೋಟೆ ಎಂದರೆ ರಕ್ಷಣಾ ಆವರಣವುಳ್ಳ ಪ್ರದೇಶ ಎಂದರ್ಥ. ಕೋಟೆಯು ಮುಖ್ಯವಾಗಿ ರಾಜನಿಗೆ ರಕ್ಷಣೆ ಒದಗಿಸುವ ಮಹತ್ವವಾದ ಸ್ಥಳವಾಗಿದೆ.[೩೪] ರಾಜ್ಯಗಳು ಉದಯವಾಗುವುದಕ್ಕೂ ಮುಂಚೆ ಎಲ್ಲಾ ಜನರು ಚಿಕ್ಕ ಚಿಕ್ಕ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ತಮ್ಮನ್ನು, ತಮ್ಮ ಸಂಪತ್ತನ್ನು ಕಳ್ಳರಿಂದ, ವೈರಿಗಳಿಂದ, ಕಾಡು ಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳಲು ಅವರು ಊರುಗಳ ಸುತ್ತಲೂ ಎತ್ತರವಾದ ಗೋಡೆ ಕಟ್ಟಲು ಪ್ರಾರಂಭಿಸಿದರು. ಇದಕ್ಕೂ ಮೊದಲು ಮರದ ಕೊಂಬೆಗಳಿಂದಲೂ ನಂತರದ ಕಾಲಾವಧಿಯಲ್ಲಿ ಮಣ್ಣಿನ ಗೋಡೆಯನ್ನು ಕಟ್ಟಲಾರಂಭಿಸಿದರು. ತದನಂತರ ಗ್ರಾಮಗಳು ಬೆಳೆದು ಪಟ್ಟಣಗಳಾದಂತೆ ಇವುಗಳೆಲ್ಲವೂ ಒಟ್ಟಾಗಿ ರಾಜ್ಯ ಸ್ಥಾಪನೆಯಾದ ಮೇಲೆ ಆಳುವ ರಾಜ ತನ್ನ ರಾಜ್ಯ ರಕ್ಷಿಸಿಕೊಳ್ಳಲು ಕೋಟೆಗಳನ್ನು ಕಟ್ಟಲಾರಂಭಿಸಿದನು.

ಪ್ರಾಚೀನ ರಾಜನೀತಿಜ್ಞರು ಒಂದು ರಾಜ್ಯಕ್ಕೆ ಅತ್ಯವಶ್ಯವಾಗಿ ಸಪ್ತಾಂಗಗಳು ಬೇಕು ಎಂದು ತಿಳಿಸಿದ್ದಾರೆ. ಅವುಗಳೆಂದರೆ ಸ್ವಾಮಿ (ಪ್ರಭು), ಅಮಾತ್ಯ (ಮಂತ್ರಿ), ರಾಷ್ಟ್ರ (ಸಂಸ್ಥಾನ), ದುರ್ಗ (ಕೋಟೆ), ಕೋಶ (ಖಜಾನೆ), ದಂಡ (ಸೈನ್ಯ), ಮತ್ತು ಮಿತ್ರ (ರಾಜ್ಯ)ಗಳಾಗಿವೆ. ಒಂದು ರಾಜ್ಯವನ್ನು ಕಟ್ಟಲು ಈ ಏಳು ಮೂಲತತ್ವಗಳಲ್ಲಿ ಕೋಟೆ ಮುಖ್ಯವೆಂದು ಭಾವಿಸಲಾಗಿದೆ. ಸಂಸ್ಕೃತ ಸಾಹಿತ್ಯದಲ್ಲಿ ಕೋಟೆಗಳನ್ನು 'ದುರ್ಗ' ಎಂಬ ಹೆಸರಿನಿಂದ ಕರೆಯಲಾಗಿದೆ. ಇದರ ಅರ್ಥ ಹೊರಗಿನ ಶತೃಗಳಿಂದ, ಕ್ರೂರ ಪ್ರಾಣಿಗಳಿಂದ ರಕ್ಷಿಸಿಕೊಳ್ಳಬಹುದಾದ ಸ್ಥಳ ಎಂಬುದಾಗಿದೆ.

'ದುರ್ಗಂ' ಎಂಬ ಪದವು ಅಜೇಯ ಅಥವಾ ಗೆಲ್ಲಲಾಗದ ಕೋಟೆಗಳನ್ನು ಸೂಚಿಸುವುದಾಗಿದೆ.[೩೫] ಹಳೆಗನ್ನಡದಲ್ಲಿ 'ಕೊಂಟೆ' ಎಂಬ ಮೂಲ ರೂಪದಲ್ಲಿದ್ದು ಇದನ್ನು 'ಕೋಟೆ' ಎಂದು ಹೊಸಗನ್ನಡದಲ್ಲಿ ಕರೆಯಲಾಗಿದೆ. ಅದೇ ರೀತಿ ಕೋಟೆಗೆ ದುರ್ಗ, ಪುರ, ಜಿಲ್ಲೆ, ವಾಡಿ, ಪ್ರಾಕಾರ, ಗಡ ಎಂಬ ಪದಗಳಿರುವುದನ್ನು ಕಾಣಬಹುದಾಗಿದೆ. ಆಂಗ್ಲ ಭಾಷೆಯಲ್ಲಿ 'ಪೋರ್ಟ್' ಎಂತಲೂ ಕರೆಯುತ್ತಾರೆ.

ಪ್ರಾಚೀನ ಕಾಲದಿಂದಲೂ ರಕ್ಷಣೆಯ ದೃಷ್ಠಿಯಿಂದ ಕೋಟೆಗಳು ಮಹತ್ವದ ಪಾತ್ರವಹಿಸಿದ್ದವು. ಕೋಟೆಯ ಬಗ್ಗೆ ಕೌಟಿಲ್ಯನ ಅರ್ಥಶಾಸ್ತ್ರ, ಕಾಮಂಧಕನ ನೀತಿಶಾಸ್ತ್ರ, ಕನಕದಾಸರ ಮೋಹನ ತರಂಗಿಣಿ, ಶುಕ್ರನೀತಿಸಾರ, ಲಿಂಗಣ್ಣ ಕವಿಯ ಕೆಳದಿ ನೃಪವಿಜಯಂ ಮುಂತಾದ ಕೃತಿಗಳಲ್ಲಿ

ಕೋಟೆಗಳ ನಿರ್ಮಾಣ ಮತ್ತು ಅವುಗಳ ಮಹತ್ವದ ಕುರಿತು ವಿವರ ನೀಡುತ್ತವೆ. ರಾಜನು ತನ್ನ ರಾಣಿ, ಪ್ರಜೆಗಳ ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಲೇಬೇಕೆಂದು ರಾಜನೀತಿ ಪ್ರಕಾಶನದಲ್ಲಿ ಬೃಹಸ್ಪತಿಯ ವಚನ ಉಲ್ಲೇಖಿಸುತ್ತದೆ.[೩೬]

ಕೌಟಲ್ಯನ ಅರ್ಥಶಾಸ್ತ್ರವು ರಾಜನು ತನ್ನ ರಾಜ್ಯದ ಎಲ್ಲೆಯ ನಾಲ್ಕು ದಿಕ್ಕುಗಳಲ್ಲಿ ಶತೃಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಿಸಬೇಕೆಂದು ತಿಳಿಸಿದ್ದಾನೆ.[೩೭] ಯುದ್ಧದಲ್ಲಿ ಸಾವಿರಾರು ಆನೆಗಳಿಂದ, ಲಕ್ಷಾಂತರ ಕುದುರೆಗಳಿಂದ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ನಿರ್ವಹಿಸಬಲ್ಲನು ಎಂದು 'ಪಂಚತಂತ್ರ' ತಿಳಿಸುತ್ತದೆ.[೩೮] ಅದೇ ರೀತಿಯಾಗಿ ಮನು ಕೋಟೆಯಲ್ಲಿರುವ ಒಬ್ಬ ಯೋಧನು ಹೊರಗಿನ ನೂರು ಜನ ಯೋಧರೊಂದಿಗೆ, ನೂರು ಜನ ಯೋಧರು ಹತ್ತು ಸಾವಿರ ಯೋಧರೊಂದಿಗೆ ಸರಿಸಮನಾಗಿ ಕಾದಾಡಬಲ್ಲರು ಎಂದಿದ್ದಾನೆ.[೩೯] ಒಟ್ಟಾರೆಯಾಗಿ ಕೋಟೆಗಳು ಅಂದಿನ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಅವಿಭಾಜ್ಯ ಅಂಗಗಳಾಗಿ ತಮ್ಮದೇ ಆದಂತಹ ಪ್ರಮುಖ ಪಾತ್ರವಹಿಸುತ್ತಿದ್ದವು.

ಕಾರ್ನಾಟಕದಲ್ಲಿ ವಿವಿಧ ರಾಜವಂಶಗಳ ಸಂಘಟನೆಯಲ್ಲಿ ಕೋಟೆಗಳು ಅತಿ ಮುಖ್ಯ ಪಾತ್ರವಹಿಸಿವೆ. ಅನೇಕ ರಾಜವಂಶಗಳ ಏಳಿಗೆ ಮತ್ತು ವಿನಾಶಕ್ಕೆ ಮುಖ್ಯ ಕಾರಣ ಕೋಟೆಗಳನ್ನು ವಶಪಡಿಸಿಕೊಳ್ಳುವುದಾಗಿದೆ. ಅನೇಕ ರಾಜರು ಆಯಾ ಕಾಲಕ್ಕೆ ಭೌಗೋಳಿಕ ಪರಿಸರಕ್ಕೆ ತಕ್ಕಂತೆ ಭೂಮಿಯ ಮೇಲೆ, ಬೆಟ್ಟದ ಮೇಲೆ, ವನದ ಮಧ್ಯೆ, ಜಲದ ಮಧ್ಯೆ, ಕೋಟೆಗಳನ್ನು ಕಟ್ಟುತ್ತಿದ್ದರು. ಪ್ರಾಚೀನ ಹಾಗೂ ಮಧ್ಯಕಾಲೀನ ಕೃತಿಗಳಲ್ಲಿ ಈ ಕೋಟೆಗಳ ಬಗ್ಗೆ ವಿವಿಧ ಪ್ರಕಾರಗಳನ್ನು ತಿಳಿಸಿವೆ. ಕೌಟಿಲ್ಯನು ನಾಲ್ಕು ಪ್ರಕಾರದ ಕೋಟೆಗಳ ಬಗ್ಗೆ ಹೇಳಿದರೆ , ಮನುಸ್ಮೃತಿಯು ಆರು, ಶುಕ್ರ ನೀತಿಸಾರ ಒಂಭತ್ತು ಮಾನಾಸಾರ ಎಂಟು, ಪಂಚತಂತ್ರವು ಎಂಟು ಮಾನಸೋಲ್ಲಾಸ ಒಂಭತ್ತು ಬಗೆಯ ಕೋಟೆಗಳನ್ನು ತಿಳಿಸುತ್ತವೆ. ಬಹಳ ಜನಪ್ರಿಯವಾದ ಹಾಗೂ ಹೆಚ್ಚಾಗಿ ಕಂಡುಬರುವ ಕೋಟೆಗಳೆಂದರೆ ರಾಜಧಾನಿ ದುರ್ಗ, ಗಿರಿದುರ್ಗ, ವನದುರ್ಗ, ಜಲದುರ್ಗಗಳಾಗಿವೆ. ಈ ಹಿನ್ನಲೆಯಲ್ಲಿ ನಾವು ಕೋಟೆಗಳನ್ನು ಸಮೀಕ್ಷಿಸಬೇಕಾಗಿದೆ.

ಕೋಟೆಗಳಿಗೆ ಸಮಕಾಲೀನ ಭೌಗೋಳಿಕೆ ನೆಲೆಯ ಹಿನ್ನೆಲೆ ಒಂದೆಡೆಯಾದರೆ ಆ ಕಾಲದ ರಾಜ್ಯದ ತಂತ್ರಗಾರಿಕೆ, ರಾಜಕೀಯ ಪ್ರತಿಷ್ಠೆ ಇನ್ನೊಂದೆಡೆಯಾಗಿದೆ. ಪ್ರಕೃತಿಯ ಸಮೃದ್ಧಿ, ಆರ್ಥಿಕ ಸ್ಥಿತಿಗತಿ, ಸಮಕಾಲೀನ ವಾಸ್ತು ಶೈಲಿಗಳ ಪರಿಚಯ, ಕಲಾಭಿರುಚಿ, ಸ್ಥಳೀಯವಾಗಿ ಲಭ್ಯವಿದ್ದ ಕಲ್ಲು, ಶಿಲೆಗಳು ಕೋಟೆಯ ವಾಸ್ತು ಕಲೆಯಲ್ಲಿ ನಿರ್ಣಾಯಕವಾಗಿದ್ದವು. ದೇಗುಲವಾಸ್ತು ಕಲೆಯಂತೆ ಇದು ಸಂಕೀರ್ಣವಾದುದ್ದಾಗಿದೆ. ನಿವೇಶನದ ಆಯ್ಕೆ, ರಕ್ಷಕ ಭಿತ್ತಿ, ಬುರುಜು, ಕೊಡೆತೆನೆ, ಕಂದಕ, ನೀರಿನ ಸರಬರಾಜು, ಮನೆ, ಕೋತವಾಲರ ಗೂಡು, ಕಣಜಗಳು, ತುಪ್ಪದ ಕೊಳ, ಅರಮನೆ, ತೋಪುಖಾನೆ, ನೀರಿನ ವ್ಯವಸ್ಥೆ ಈ ಎಲ್ಲಾ ಸೌಲಭ್ಯಗಳು ಬೇಕಾಗಿದ್ದವು. ಈ ಕೋಟೆಗಳನ್ನು ಒಂದು ಸುತ್ತಿನಿಂದ ಹಿಡಿದು ಹಲವು ಸುತ್ತುಗಳವರೆಗೆ ನಿರ್ಮಿಸಿರುವುದನ್ನು ಕಾಣಬಹುದು. ಕೋಟೆಗಳನ್ನು ಸ್ಥಳಕ್ಕನುಗುಣವಾಗಿ ವೃತ್ತಾಕರವಾಗಿ, ಚೌಕಾಕಾರವಾಗಿ ಕಟ್ಟಿರುವುದನ್ನು ಕಾಣಬಹುದು.

ರಾಮದುರ್ಗದ ಕೋಟೆ

ಚಳ್ಳಕೆರೆ ನಗರದಿಂದ ವಾಯುವ್ಯಕ್ಕೆ ೨೪ ಕಿ.ಮೀ. ದೂರದಲ್ಲಿರುವ ರಾಮದುರ್ಗ ಗ್ರಾಮದ ದಕ್ಷಿಣಕ್ಕೆ ಅರ್ಧ ಕಿ.ಮಿ. ದೂರದಲ್ಲಿ ಕೋಟೆಯನ್ನು ನಿರ್ಮಿಸಿದ್ದಾರೆ. ಇದೊಂದು ಬಂಡೆಗಲ್ಲಿನ ಗಿರಿದುರ್ಗವಾಗಿದ್ದು ಅಷ್ಟೇನೂ ಎತ್ತರವಿಲ್ಲದ ನಿಧಾನವಾಗಿ ಏರುತ್ತಿರುವ ಕಲ್ಲಿನ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಲಾಗಿದೆ. ಈ ಗುಡ್ಡವನ್ನು ಹೊಸಗುಡ್ಡ, ರಾಮದರ್ಗದ ಗುಡ್ಡ ಎಂದು ಸ್ಥಳೀಯರು ಕರೆಯುತ್ತಾರೆ. ಈ ಗುಡ್ಡವು ಇಂದು ನಿರ್ಜನವಾದ ಪ್ರದೇಶದಲ್ಲಿ ಇದ್ದು ಎರಡು ಸುತ್ತಿನ ಕೋಟೆಯಿದೆ. ಮೊದಲನೇ ಸುತ್ತಿನ ಕೋಟೆಯಲ್ಲಿ ೧೧ ಬತೇರಿಗಳಿದ್ದು, ೪ ವೃತ್ತಾಕಾರದ ಹಾಗೂ ೭ ಚೌಕಾಕರವಾಗಿರುವ ಬತೇರಿಗಳಿವೆ. ಎರಡನೇ ಸುತ್ತಿನ ಕೋಟೆ ೫ ಬತೇರಿಗಳು, ಅರಮನೆ ಎಂದೆನಿಸುವ ದೊಡ್ಡ ಮನೆಯ ತಳಪಾಯವಿದೆ ಹಾಗೂ ೫ ಪುಷ್ಕರಣಿಗಳನ್ನು ಹೊಂದಿವೆ. ಪುಷ್ಕರಣಿಗಳಲ್ಲಿ ೩ ನೈಸರ್ಗಿಕವಾದವು ಮತ್ತು ಎರಡು ಪೂರ್ಣವಾದವು. ಹಾಗೆಯೇ ಗುಡ್ಡದ ಕೆಳಗೆ ೨ ಪುಷ್ಕರಣಿಗಳನ್ನು ವಿವಿಧ ಅಳತೆಯ ಕಲ್ಲು, ವಿವಿಧ ನಮೂನೆ ಶಿಲ್ಪಗಳನ್ನು ಬಳಸಿ ನಿರ್ಮಿಸಿದ್ದಾರೆ.

ಈ ಕೋಟೆಯು ಆಯಾತಾಕಾರದಲ್ಲಿದೆ. ಉತ್ತರ ಮತ್ತು ದಕ್ಷಿಣ ಭಾಗದ ಗೋಡೆಗಳಲ್ಲಿ ಮಹಾದ್ವಾರಗಳಿವೆ. ಪೂರ್ವ ದಿಕ್ಕಿನ ಗೋಡೆಗೆ ಮೆಟ್ಟಿಲುಗಳಿರುವ ಪ್ರದೇಶದಲ್ಲಿ ಬಾಗಿಲು ಇತ್ತೆಂದು ಅವಶೇಷಗಳು ಸೂಚಿಸುತ್ತವೆ. ನಾಲ್ಕೂ ಮೂಲೆಗಳಲ್ಲಿ ವೃತ್ತಾಕಾರದ ಬುರುಜುಗಳಿವೆ. ಪೂರ್ವದ ಗೋಡೆಯಲ್ಲಿ ಒಂದು, ದಕ್ಷಿಣ ಗೋಡೆಯಲ್ಲಿ ಎರಡು ಮತ್ತು ಪಶ್ಚಿಮದ ಗೋಡೆಯಲ್ಲಿ ಮೂರು ಹೀಗೆ ಚೌಕಾಕಾರದ ಬುರುಜುಗಳಿವೆ.

ಕೋಟೆಯ ಗೋಡೆಯನ್ನು ಕಟ್ಟುವ ಶೈಲಿ ಸಾಮಾನ್ಯವಾಗಿದ್ದು, ಕೆಳ ನಾಲ್ಕು ಸ್ತರಗಳಲ್ಲಿ ದಪ್ಪದ ಚೌಕದ ಕಲ್ಲುಗಳನ್ನು ಉಪಯೋಗಿಸಿ ಅದು ಮೇಲೆ ಏರಿದಂತೆ ಚಿಕ್ಕದಾದ ಕಲ್ಲುಗಳ ಬಳಕೆಯಾಗಿದೆ. ಗಾರೆ, ಗಚ್ಚು, ಮಣ್ಣಿನ ಮಿಶ್ರಣಗಳಿಂದ ಕಲ್ಲಿನ ಸ್ತರಗಳು ಭದ್ರವಾಗಿ ಒಂದಕ್ಕೊಂದು ಅಂಟಿಕೊಳ್ಳುವಂತೆ ಮಾಡಲಾಗಿದೆ. ಗೋಡೆಯ ಒಳಗಡೆ ಉತ್ತರ ಭಾಗದಲ್ಲಿ ಅನೇಕ ಕಟ್ಟಡಗಳ ಅವಶೇಷಗಳಿವೆ. ಒಳ ಕೋಟೆಯು ಒಂದನೇ ಸುತ್ತಿನ ಕೋಟೆಯ ದಕ್ಷಿಣ ಭಾಗದಲ್ಲಿದೆ. ಮೊದಲನೇ ಸುತ್ತಿನ ಕೋಟೆಯ ಪಶ್ಚಿಮ ಭಾಗದಲ್ಲಿ ಪಶ್ಚಿಮಕ್ಕೆ ಮುಖ ಮಾಡಿರುವಂತೆ ಒಂದು ಗುಹಾಲಯವನ್ನು ಗ್ರಾನೈಟ್ ಕಲ್ಲಿನಲ್ಲಿ ಕೆತ್ತಿದ್ದಾರೆ. ಗರ್ಭ ಗೃಹ, ನವರಂಗ, ಅಂತರಾಳ ವಿನ್ಯಾಸದಲ್ಲಿ ಶಿವಪುರಾಣ ಹೇಳುವ ಶಿವ ಪಾರ್ವತಿ, ಕುಮಾರ, ವರಾಹ, ಮಹಿಷ ಮರ್ಧಿನಿ, ನರಸಿಂಹ ಇತ್ಯಾದಿಗಳ ಶಿಲ್ಪಗಳಿವೆ. ಗರ್ಭಗುಡಿಯಲ್ಲಿ ರಾಮೇಶ್ವರ ಲಿಂಗವಿದೆ.

ರಾಮದುರ್ಗದ ಕೋಟೆಯ ಪರಿಸರದಲ್ಲಿ ಕಂಡುಬರುವ ಸ್ಮಾರಕಗಳು

ಪುಷ್ಕರಣಿಗಳು

ಗುಡ್ಡವು ಇಂದು ನಿರ್ಜನವಾದ ಪ್ರದೇಶದಲ್ಲಿ ಇದ್ದು, ಆಕರ್ಷಕ ಪುಷ್ಕರಣಿಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ. ಎರಡು ಸುತ್ತಿನ ಕೋಳಿ ಮೊಟ್ಟೆಯಾಕಾರದ ಕೋಟೆ, ಬತೇರಿಗಳು, ಗುಹಾಂತರ ದೇವಾಲಯ ವಿಶೇಷವಾಗಿ ಕಂಡುಬರುತ್ತವೆ.

ಒಂದನೇ ಪುಷ್ಕರಣಿ

ಗುಡ್ಡವನ್ನು ಹತ್ತಲು ಪ್ರಯಾಣ ಬೆಳೆಸಿದರೆ ಗುಡ್ಡದ ಪಕ್ಕದಲ್ಲೇ ಇಳಿಜಾರಾದ ಪ್ರದೇಶದಲ್ಲಿ ಅಂದರೆ ಕೋಟೆಯ ವಾಯುವ್ಯಕ್ಕೆ ಬಲಭಾಗದಲ್ಲಿ ಎರಡು ಪುಷ್ಕರಣಿಗಳಿವೆ. ಒಂದನೆಯ ಪುಷ್ಕರಣಿಯು ಗುಡ್ಡಕ್ಕೆ ಪೂರ್ವ ಪಶ್ಚಿಮವಾಗಿದ್ದು ಬಿಳಿ ಗ್ರಾನೈಟ್ ಕಲ್ಲುಗಳನ್ನು ನಯಗೊಳಿಸಿಕೊಂಡು ೨ ಅಡಿ, ೧ ಅಡಿ, ೧$^{1}/_{3}$ ಅಡಿ ಚಚೌಕಾಕಾರದ ೬ ಇಂಚು ದಪ್ಪದ ಕಲ್ಲುಗಳನ್ನು ಬಳಸಿಕೊಂಡು ೧೪ ಅಡಿ ಉದ್ದ, ೧೪ ಅಡಿ ಅಗಲದ ಚಚೌಕಾಕಾರದ ೭ ಅಡಿ ಆಳದ ಪುಷ್ಕರಣಿ ನಿರ್ಮಿಸಿದ್ದಾರೆ. ಇದಕ್ಕೆ ಇಳಿಜಾರಾದ ಮೆಟ್ಟಿಲುಗಳನ್ನು ನಿರ್ಮಿಸಿದ್ದಾರೆ.

ಎರಡನೇಯ ಪುಷ್ಕರಣಿ

ಈ ಪುಷ್ಕರಣಿಯನ್ನು ಪೂರ್ವ, ಪಶ್ಚಿಮವಾಗಿ ೧೬ ಅಡಿ ಉದ್ದ, ೭ ಅಡಿ ಆಳದಲ್ಲಿ ಚಚೌಕಾಕಾರದಲ್ಲಿ ನಿರ್ಮಿಸಿದ್ದಾರೆ. ಈ ಪುಷ್ಕರಣಿಯನ್ನು ಬಿಳಿ ಗ್ರಾನೈಟ್ ಕಲ್ಲನ್ನು ನಯಗೊಳಿಸಿ ಇಂದಿನ ಸಿಮೆಂಟಿನ ಇಟ್ಟಿಗೆಯ ಹಾಗೆ ೨ ಅಡಿ, ೧ ಅಡಿ, $^{1}/_{3}$ ಅಡಿ, $^{1}/_{4}$ ಅಡಿ (ಉದ್ದ ಗಲದ) ಚಚೌಕಾಕರದ ಕಲ್ಲುಗಳನ್ನು ತಯಾರು ಮಾಡಿ ನಿರ್ಮಿಸಿದ್ದಾರೆ. ಪುಷ್ಕರಣಿಗೆ ಗುಡ್ಡದ ಬುಡದ ಕಡೆಯಿಂದ ಇಳಿಜಾರದ ಮೆಟ್ಟಿಲುಗಳನ್ನು ಆಕರ್ಷಕವಾಗಿ ನಿರ್ಮಿಸಿದ್ದಾರೆ. ಈ ಪುಷ್ಕರಣಿಯಲ್ಲಿ ೫ ಮೂರ್ತಿಶಿಲ್ಪಗಳು ಇದ್ದು ಒಂದಕ್ಕಿಂತ ಒಂದು ಭಿನ್ನವಾಗಿವೆ.

ಒಂದನೇ ಶಿಲ್ಪ – ವೀರಭದ್ರನ ಮೂರ್ತಿಶಿಲ್ಪ
ಎರಡನೇ ಶಿಲ್ಪ – ಭೈರವನ ಮೂರ್ತಿಶಿಲ್ಪ
ಮೂರನೇ ಶಿಲ್ಪ – ಷಣ್ಮುಖನ ಮೂರ್ತಿಶಿಲ್ಪ
ನಾಲ್ಕನೇ ಶಿಲ್ಪ – ಗಣೇಶನ ಮೂರ್ತಿಶಿಲ್ಪ
ಐದನೇ ಶಿಲ್ಪ – ನಾಗಲಿಂಗ ಮೂರ್ತಿಶಿಲ್ಪ

ಇಷ್ಟೊಂದು ವೈಭವದಿಂದ ಕೋಟೆ ಪುಷ್ಕರಣಿಗಳನ್ನು ದೇವಾಲಯಗಳನ್ನು ನಿರ್ಮಿಸಿದವರು ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ ನಾಯಕನ ಹಟ್ಟಿಯ ಪಾಳೆಯಗಾರರೇ ಆಗಿದ್ದಾರೆ ಎಂದು ತಿಳಿಯಬಹುದು. ನಾಯಕನ ಹಟ್ಟಿಯ ಬುಖೈರಿನ ಪ್ರಕಾರ ಕ್ರಿ.ಶ. ೧೬೦೦ ಸಮಯದ ಜೋಡಿ ಮಲ್ಲಪ್ಪ ನಾಯಕನ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಉಲ್ಲೇಖವಿದೆ.

ಚಳ್ಳಕೆರೆಯ ಕೋಟೆ

ಚಳ್ಳಕೆರೆಯ ಪಟ್ಟಣದ ಈಶಾನ್ಯದ ಭಾಗದಲ್ಲಿ ಸ್ವಲ್ಪ ಎತ್ತರವಾದ ಗಿರಿದುರ್ಗದ ಪ್ರದೇಶದಲ್ಲಿ ಈ ಚಳ್ಳಕೆರೆಯ ಕೋಟೆಯನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಈ ಬೆಟ್ಟವು ಸುಮಾರು ೧೦೦ ಅಡಿ ಎತ್ತರದಲ್ಲಿದ್ದು ಬಂಡೆಗಲ್ಲಿನಿಂದ ಕೂಡಿದೆ. ಈ ಪ್ರದೇಶದಲ್ಲಿ ಬೆಟ್ಟದ ಬಂಡೆಗಲ್ಲನ್ನು ಕಡಿದು ಕೋಟೆಗೆ ಬೇಕಾದಂತಹ ಬೃಹತ್ತಾದ ಕಲ್ಲುಗಳನ್ನು ಬಳಸಿಕೊಂಡಿದ್ದಾರೆ. ಬಂಡೆಗಲ್ಲನ್ನು ಕಡಿದಿದ್ದ ಸ್ಥಳವು ಬಾವಿಯಾಕಾರದಲ್ಲಿ ಕಂಡುಬರುತ್ತದೆ.

ಈ ಕೋಟೆಯು ಆಯಾತಾಕಾರವಾಗಿದ್ದು ನಾಲ್ಕೂ ಮೂಲೆಗಳಲ್ಲಿ ಎತ್ತರವಾದ ಬುರುಜುಗಳನ್ನು ನಿರ್ಮಿಸಿರುವ ಅವಶೇಷಗಳು ಕಂಡುಬರುತ್ತಿವೆ. ಕೋಟೆಯು ಸಂಪೂರ್ಣವಾಗಿ ನಾಶವಾಗಿದ್ದು, ಅದರ ಅವಶೇಷಗಳು ಪಶ್ಚಿಮ ಭಾಗದಲ್ಲಿ ಮಾತ್ರ ಗೋಚರಿಸುತ್ತವೆ. ಸ್ಥಳೀಯ ಹಿರಿಯರು ಹೇಳುವಂತೆ ಚಳ್ಳಕೆರೆಯ ಹಿಂದಿನ ಹೆಸರು 'ಓರೆಗಲ್ಲು' ಎಂದು ಕರೆಯುತ್ತಿದ್ದರಂತೆ. ಈ ಪಟ್ಟದಲ್ಲಿ ಓರೆಗಲ್ಲಮ್ಮ ದೇವಿ ಇದ್ದಳೆಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ಪುಷ್ಠಿ ನೀಡುವಂತಹ ಯಾವುದೇ ಆಧಾರ ಸಿಗುವುದಿಲ್ಲ. ಪ್ರಸ್ತುತ ಕೋಟೆಯ ಅವಶೇಷವಿರುವ ಪ್ರದೇಶವನ್ನು ಕಾಟಪ್ಪನ ಹಟ್ಟಿಯಂದು ಕರೆಯುತ್ತಾರೆ. ಪಾಳೆಯಗಾರನಾದ ಕಾಟಪ್ಪನ ಹೆಸರಿನಲ್ಲಿ ಕಟ್ಟಿರುವ ಹಟ್ಟಿಯಾಗಿದೆ. ಕೋಟೆಯ ಉತ್ತರದಲ್ಲಿ ದ್ವಾರ ಬಾಗಿಲು (ಪ್ರವೇಶದ್ವಾರ) ಇತ್ತಂತೆ. ಆದರೆ ಯಾವುದೇ ಕುರುಹುಗಳು ಕಂಡುಬರುವುದಿಲ್ಲ. ಈ ಕೋಟೆಯ ಪ್ರದೇಶದಲ್ಲಿ ಮನೆಯ ತಳಪಾಯ ತೆಗೆಯುವಾಗ ಸ್ಥಳೀಯರಿಗೆ ನೂರಾರು ಶಿಲೆಯ ಸಿಡಿಗುಂಡುಗಳು ಸಿಕ್ಕಿವೆ. ಅಂದಿನ ಪಾಳೆಯಗಾರರು ಕೋಟೆಯ ಮೇಲ್ಭಾಗದಿಂದ ಶತ್ರುಗಳು ಬರುವುದನ್ನು ದೂರದಿಂದಲೇ ಗುರುತಿಸಿ ಅವರ ವಿರುದ್ಧ ಸಿಡಿಗುಂಡಗಳನ್ನು ಹಾರಿಸುತ್ತಿದ್ದರೊ? ಅಥವಾ ಯುದ್ಧಕ್ಕೆ ಬೇಕಾದ ಸಿಡಿಗುಂಡುಗಳನ್ನು ತಯಾರಿಸುವ ಸ್ಥಳವಾಗಿತ್ತೇ? ಎಂಬ ಸಂಶಯ ಮೂಡುತ್ತದೆ. ಕೋಟೆಯ ನಿರ್ಮಾಣದ ಕುರಿತು ಯಾವುದೇ ದಾಖಲೆಗಳು ಲಭ್ಯವಿಲ್ಲ.

ಸಾಣಿಕೆರೆ ಕೋಟೆ

ಚಳ್ಳಕೆರೆ ಪಟ್ಟಣದಿಂದ ಸುಮಾರು ೧೪ ಕಿ.ಮೀ. ದೂರದಲ್ಲಿರುವ ಈ ಸಾಣಿಕೆರೆಯು ಐತಿಹಾಸಿಕ ಸ್ಥಳವಾಗಿದೆ. ಗ್ರಾಮದಲ್ಲಿ ವ್ಯವಸ್ಥಿತವಾದ ಆಯತಾಕಾರದ ಕೋಟೆಯನ್ನು ನಿರ್ಮಿಸಿದ್ದು ಇಂದು ಶಿಥಿಲಗೊಳ್ಳುತ್ತಿದೆ. ಕೋಟೆಯ ನಿರ್ಮಾಣದ ಕುರಿತು ಯಾವುದೇ ದಾಖಲೆಗಳಿಲ್ಲವಾದರೂ ಚಿತ್ರದುರ್ಗದ ಪಾಳೆಯಗಾರರು ನಿರ್ಮಿಸಿರಬೇಕೆಂದು ತಿಳಿಯಬಹುದು. ಈ ಸ್ಥಳವು ನಿಡುಗಲ್ಲು ಮತ್ತು ಚಿತ್ರದುರ್ಗ ಪ್ರದೇಶಗಳ ನಡುವಿನ ಸಂಪರ್ಕಕೊಂಡಿಯಂತೆ ಕಾರ್ಯನಿರ್ವಹಿಸುತ್ತಿದ್ದಿರಬೇಕೆಂದು ಕಾಣುತ್ತದೆ.

ಕೋಟೆಯು ಆಯಾತಾಕರವಾಗಿದ್ದು, ಉತ್ತರ ಭಾಗದಲ್ಲಿ ನಾಲ್ಕು ಬುರುಜುಗಳು ಮತ್ತು ದಕ್ಷಿಣ ಭಾಗದಲ್ಲಿ ನಾಲ್ಕು ಬುರುಜುಗಳನ್ನು ಕಟ್ಟಿದ್ದಾರೆ. ಈ ಬುರುಜುಗಳು ವೃತ್ತಾಕರವಾಗಿದ್ದು ಕಾವಲು ಕಾಯಲು ಕಾವಲುಗಾರರನ್ನು ನೇಮಿಸುತ್ತಿದ್ದಂತೆ ತೋರುತ್ತದೆ. ಕೋಟೆಯ ಒಳಗಡೆ ಪ್ರವೇಶ ಪಡೆಯಲು ಪೂರ್ವ ಮತ್ತು ದಕ್ಷಿಣ ಭಾಗದಲ್ಲಿ ಪ್ರವೇಶ ದ್ವಾರಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ. ಕೋಟೆಯ ಹೊರಗಡೆ ಗೋಡೆಗೆ ಅಂಟಿಕೊಂಡಂತೆ ಎರಡೂ ಪ್ರವೇಶ ದ್ವಾರಗಳಲ್ಲಿ ಒದೊಂದು ಮಂಟಪಗಳನ್ನು ನಿರ್ಮಿಸಿದ್ದು, ಅದರಲ್ಲಿ ಒಂದು ಮಾತ್ರ ಪ್ರಸ್ತುತ ಕಂಡುಬರುತ್ತಿದೆ. ಈ ಮಂಟಪಗಳನ್ನು ನಿರ್ಮಿಸಲು ಕಾರಣವೇನೆಂದರೆ ರಾತ್ರಿ ಕೋಟೆಯ ಬಾಗಿಲು ಮುಚ್ಚಿದ ಮೇಲೆ ತಡವಾಗಿ ಬಂದವರು ಆ ಮಂಟಪಗಳಲ್ಲಿ ಉಳಿದುಕೊಳ್ಳುವ ವ್ಯವಸ್ಥೆ ಕಲ್ಪಿಸಲಾಗುತ್ತಿತ್ತೆಂದು ಸ್ಥಳೀಯರು ಹೇಳುತ್ತಾರೆ. ಆದರೆ ವಾಸ್ತವವಾಗಿ ಪ್ರವೇಶ ದ್ವಾರವನ್ನು ಕಾಯುವ ಕಾವಲುಗಾರರು, ಸೈನಿಕರು ಆ ಮಂಟಪಗಳಲ್ಲಿ ಆಶ್ರಯ ಪಡೆಯುತ್ತಿದ್ದರೆಂದು ಹೇಳಬಹುದು.

ಕೋಟೆಯು ಆಯಾತಾಕಾರವಾಗಿದ್ದು ಕೋಟೆಯ ಗೋಡೆ ಇಕ್ಕೆಲಗಳಲ್ಲಿ ಕಲ್ಲಿನಿಂದ ನಿರ್ಮಿಸಿದ್ದು ಮಧ್ಯಭಾಗದಲ್ಲಿ ಮಣ್ಣನ್ನು ಕಲೆಸಿಹಾಕಿ ಗಟ್ಟಿಗೊಳಿಸಿದ್ದು ಕಂಡುಬರುತ್ತಿದೆ. ಕೋಟೆ ಗೋಡೆಯ ದಪ್ಪ ಸುಮಾರು ೬-೮ ಅಡಿ. ಗ್ರಾಮವು ಬೆಳೆದಂತೆ ಐತಿಹಾಸಿಕ ಪ್ರಜ್ಞೆಯ ಕೊರತೆಯಿಂದಾಗಿ ಕೋಟೆಯು ನಾಶಹೊಂದುತ್ತಿದೆ. ಕೋಟೆಯ ಹೊರ ಭಾಗದ ಸುತ್ತಲೂ ಆಳವಾದ ಮತ್ತು ಅಗಲವಾದ ಕಂದಕವನ್ನು ನಿರ್ಮಿಸಿದ ಕುರುಹುಗಳು ಗೋಚರಿಸುತ್ತವೆ.

ದೊಡ್ಡೇರಿಯ ಕೋಟೆ

ದೊಡ್ಡೇರಿಯು ಐತಿಹಾಸಿಕ ಸ್ಥಳವಾಗಿದ್ದು ಕ್ರಿ.ಶ. ೮೮೨ ರವರೆಗೆ ತಾಲ್ಲೂಕು ಕೇಂದ್ರವಾಗಿ ಕಾರ್ಯನಿರ್ವಹಿಸಿದೆ. ದೊಡ್ಡೇರಿಯಲ್ಲಿ ಸುಮರು ೩೦೦ ವರ್ಷಗಳ ಹಿಂದೆ ಕಟ್ಟಿರುವ ಕೋಟೆಯ ಅವಶೇಷಗಳು ಇಂದಿಗೂ ಇವೆ. ಕೋಟೆಯು ಆಯಾತಾಕಾರವಾಗಿದ್ದು ವಿಶಾಲವಾದ ವ್ಯಾಪ್ತಿಯನ್ನು ಹೊಂದಿದೆ. ಕೋಟೆಯನ್ನು ಇಕ್ಕೆಲಗಳಲ್ಲಿ ಕಲ್ಲು ನಡುವೆ ಮಣ್ಣನ್ನು ಹಾಕಿ ನಿರ್ಮಿಸಿದ್ದರ ಅವಶೇಷಗಳು ಗೋಚರಿಸುತ್ತಿವೆ. ನಾಲ್ಕು ಕಡೆ ದೊಡ್ಡ ಬುರುಜುಗಳನ್ನು ನಿರ್ಮಾಣ ಮಾಡಿದಂತೆ ತೋರುತ್ತದೆ.

ಈಗಿನ ದೊಡ್ಡೇರಿ ಗ್ರಾಮವನ್ನು ಪಶ್ಚಿಮ ದಿಕ್ಕಿನಿಂದ ಪ್ರವೇಶಿಸುವಾಗ ಎದುರುಗೊಳ್ಳುವ ಸ್ಮಾರಕವೆಂದರೆ ತಕ್ಕಮಟ್ಟಿಗೆ ದೊಡ್ಡದಾಗಿರುವ ಒಂಟಿ ಬುರುಜು. ಹಿಂದೆ ಇಲ್ಲಿದ್ದ ವಿಶಾಲವಾದ ಕೋಟೆಯು ಕಟ್ಟಕಡೆಯ ಭೌತಿಕ ಸಾಕ್ಷ್ಯವಾಗಿ ನಿಂತಂತೆ ತೋರುತ್ತದೆ. ಈ ಬುರುಜಿಗೆ ಹೊಂದಿಕೊಂಡಿರುವ ಕಂದಕ ಈಗ ಬಹುಮಟ್ಟಿಗೆ ಮುಚ್ಚಿ ಹೋಗಿದ್ದರೂ ಸುಸ್ಥಿತಿಯಲ್ಲಿದ್ದ ಕಾಲದಲ್ಲಿ ವಿಶಾಲವೂ ಆಳವೂ ಆಗಿದ್ದಿರಬೇಕೆಂದು ಮನದಟಾಗುತ್ತದೆ. ಈ ಬುರುಜಿನ ವಿನಾ ಊರಿನ ಯಾವ ದಿಕ್ಕಿನಲ್ಲಿ ಕೋಟೆಯ ಅವಶೇಷಗಳು ಕಂಡುಬರುವುದಿಲ್ಲ. ಕೋಟೆಯ ಪ್ರಾಕಾರಕ್ಕೆ ಹೊಂದಿಸಿದ್ದ ಕಲ್ಲುಗಳು ಮನೆಗಳಿಗೆ ಬಳಕೆಯಾಗಿರುವುದರಿಂದ ಈಗ ಕೋಟೆ ಸಾಲು ಮಣ್ಣಿನ ದಿಬ್ಬವಾಗಿ ಪರಿವರ್ತನೆಗೊಂಡಿದೆ. ಕಂದಕಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಊರಿನಿಂದ ಪೂರ್ವಕ್ಕೆ ಕೋಟೆಯ ಹೆಬ್ಬಾಗಿಲು ಇದ್ದ ಸ್ಥಳವಾಗಿತ್ತು.[೪೦]

ಮರಿಕುಂಟೆ ಕೋಟೆ

ಚಳ್ಳಕೆರೆ ಪಟ್ಟಣದಿಂದ ಆಗ್ನೆಯ ದಿಕ್ಕಿನಲ್ಲಿ ಸುಮಾರು ೨೨ ಕಿ.ಮೀ. ದೂರದಲ್ಲಿರುವ ಗ್ರಾಮವಾಗಿದೆ. ಮರಿಕುಂಟಿ ಗ್ರಾಮದ ದಕ್ಷಿಣಕ್ಕೆ ಕೋಟೆಯ ಸ್ಮಾರಕ ನಮಗೆ ಗೋಚರಿಸುತ್ತದೆ. ಈ ಕೋಟೆಯು ಕೂಡ ಹಿಂದೆ ಆಯತಾಕಾರವಾಗಿದ್ದು ಪಶ್ಚಿಮಕ್ಕೆ ಪ್ರವೇಶದ್ವಾರವನ್ನು ಹೊಂದಿತ್ತು ಎಂಬುದಕ್ಕೆ ಈಗ ಅವಶೇಷವಾಗಿ ಉಳಿದಿರುವ ಕೋಟೆಯ ಗೋಡೆಯೇ ಸಾಕ್ಷಿ.

ಕೋಟೆಯ ಪ್ರಾಕಾರಕ್ಕೆ ಹೊಂದಿಸಿದ್ದ ಕಲ್ಲುಗಳು ಮನೆಗಳಿಗೆ ಬಳಕೆಯಾಗಿ ಮನೆಗಳು ನಿರ್ಮಾಣವಾಗಿರುವುದರಿಂದ ಈಗ ಕೋಟೆಯ ಅವಶೇಷಗಳು ನಮಗೆ ಕಂಡುಬರುವುದಿಲ್ಲ. ಪ್ರವೇಶದ್ವಾರವಾಗಿದ್ದ ಕೋಟೆಯ ಪ್ರಾಕಾರ ಅಲ್ಪ ಪ್ರಮಾಣದಲ್ಲಿ ನಮಗೆ ಕಾಣಿಸಿಗುತ್ತದೆ. ಪ್ರಾಕಾರದ ಅವಶೇಷವನ್ನು ಗಮನಿಸಿದರೆ ಹಿಂದೆ ಈ ಸ್ಥಳದಲ್ಲಿ ವ್ಯವಸ್ಥಿತವಾದ ಕೋಟೆಯಿದ್ದಂತೆ ತೋರುತ್ತದೆ. ಪ್ರಾಕಾರವಿತ್ತೆಂದು. ಈ ಕೋಟೆಯ ಒಳಗಡೆಯೇ ಅಧಿಷ್ಠಾನದ ಮೇಲೆ ೪೫ – ೫೦ ಅಡಿ ಎತ್ತರದ ಎತ್ತರವಾದ ದೀಪ ಸ್ತಂಭ ನಿಲ್ಲಿಸಲಾಗಿದೆ. ಇದರ ಎದುರುಗಡೆ ಆಹೋಬಲ ನರಸಿಂಹ ಸ್ವಾಮಿ ದೇವಾಲಯವಿದೆ. ಈ ದೀಪಸ್ತಂಭದ ಅಧಿಷ್ಠಾನದಲ್ಲಿ ಹಲವು ವೈಶಿಷ್ಟ್ಯತೆಗಳಿಂದ ಕೂಡಿದ ಉಬ್ಬು ಶಿಲ್ಪಗಳನ್ನು ಕಾಣಬಹುದು.

ಉಳಿದಂತೆ ಈ ಪರಿಸರದಲ್ಲಿ ಬೇರೆ ಬೇರೆ ಗ್ರಾಮಗಳಲ್ಲೂ ಕೂಡ ವಿವಿಧ ಸ್ಮಾರಕಗಳು ಕಂಡುಬರುತ್ತವೆ. ಹಲವಾರು ಗ್ರಾಮಗಳಲ್ಲಿ ಕೋಟೆಗಳು ಇದ್ದ ಬಗ್ಗೆ ಕುರುಹುಗಳ ಸಿಗುತ್ತವೆ. ಈಗ ಕೇವಲ ಬುರುಜು ಮತ್ತು ಬತೇರಿಗಳು ಮಾತ್ರ ಇತಿಹಾಸಕ್ಕೆ ಮೂಲ ಸಾಕ್ಷಿಯಾಗಿ ನಿಂತಿವೆಯೆಂದೇ ಹೇಳಬೇಕಾಗುತ್ತದೆ. ಭರಮಸಾಗರದಲ್ಲಿರುವ ಬುರುಜು, ಚಿಕ್ಕ ಹಳ್ಳಿಯಲ್ಲಿರುವ ಬುರುಜು ಪ್ರಮುಖ ಉದಾಹರಣೆಗಳಾಗಿವೆ.

ಅಡಿಟಿಪ್ಪಣಿಗಳು

೧. ಅನಂತ ರಂಗಾಚಾರ್. ಎನ್: ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ, ಪುಟ- ೩೦೮

೨. ಬಾಲಸುಬ್ರಮಣ್ಯಂ (ಸಂ): ೨೦೦೪, ಕುರುಗೋಡು, ಲೇ. ರಮೇಶನಾಯಕ, ಪು- ೮೮

೩. ಪ್ರಭಾಕರ್ .ಎಸ್: ೧೯೯೯, ದೇವಾಲಯಗಳ ವಾಸ್ತು ಚಂದ್ರಿಕೆ, ಪು- ೨೭

೪. ದೇವರ ಕೊಂಡಾರೆಡ್ಡಿ : (ಕನ್ನಡ ಅನುವಾದ) ಭಾರತೀಯ ವಾಸ್ತು ವಿದ್ಯೆ, ಪು-೦೮

೫. ಅದೇ: ಪು-೩-೫

೬. ಅದೇ: ಪು-೬

೭. ರಾಮಚಂದ್ರರಾವ್ .ಎಸ್.ಕೆ : ೧೯೯೪ ಭಾರತದ ದೇವಾಲಯಗಳು, ನೆಲೆ-ಹಿನ್ನಲೆ, ಪು-೧

೮. ರಾಮಚಂದ್ರ ರಾಮ್ ಎಸ್. ಕೆ : ಕೆಲವು ಧಾರ್ಮಿಕ ಕರ್ತವ್ಯಗಳು, ಪು-೮೦

೯. ಅದೇ: ಪು-೭೭

೧೦. ಸುರೇಶ್ .ಬಿ: ೨೦೦೮, ಚಿತ್ರದುರ್ಗ-ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಪು-೪

೧೧. ಜ್ಞಾನನಂದ ಜಿ. : ೨೦೦೩, ಶಿಲ್ಪಾದರ್ಶ, ಸಂಪುಟ ೨, ಕವಿವಿ, ಪು-೧೬

೧೨. Brown percy : Indian Architecture, p-140

೧೩. ಶ್ಯಾಮಲಾ .ಸಿ.ಅರ್ : ೨೦೦೮, ಪೂರ್ವ ಕರ್ನಾಟಕದ ಪಾಳೆಯಗಾರರು, ಪು-೧೯೧-೧೯೨

೧೪. ಮಠದ ವಿರೂಪಾಕ್ಷಯ್ಯ (ಸಂ) : ೨೦೦೧, ವೀರಸಂಕಲ್ಪ, ಸ್ಮರಣ ಸಂಚಿಕೆ, ಚಳ್ಳಕೆರೆ. ಪು-೮೦

೧೫. ಅದೇ: ಸ್ಮರಣ ಸಂಚಿಕೆ, ಪೂರ್ವೋಕ್ತ, ಪು-೮೦

೧೬. ಶ್ಯಾಮಲ ಸಿ.ಆರ್ : ಪೂರ್ವೋಕ್ತ, ಪು-೧೯೬

೧೭. ಅದೇ: ಸ್ಮರಣ ಸಂಚಿಕೆ, ಪೂರ್ವೋಕ್ತ, ಚಳ್ಳಕೆರೆ ಪು-೮೦

೧೮. ಶ್ಯಾಮಲಾ .ಸಿ. ಆರ್ : ಪೂರ್ವೋಕ್ತ, ಪು-೧೯೬

೧೯. ಸುರೇಶ್ .ಬಿ: ಪೂರ್ವೋಕ್ತ, ಪು-೧೧೧

೨೦. ಸುರೇಶ್ .ಬಿ: ಪೂರ್ವೋಕ್ತ, ಪು-೧೧೩

೨೧. ರಾಮದಾಸರೆಡ್ಡಿ .ಎಸ್. ಜಿ : ೨೦೦೯, ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಪು- ೧೩೯

೨೨. ಸುರೇಶ್ .ಬಿ: ಪೂರ್ವೋಕ್ತ, ಪು–೨೩೫

೨೩. ರಾಜಾರಾಂ ಹೆಗಡೆ: ೧೯೯೨, ಭಾರತೀಯ ಮೂರ್ತಿ ಶಾಸ್ತ್ರ, ಧರ್ಮ, ದೇವತಾರಾಧನೆ ಹಾಗೂ ಸಾಂಸ್ಕೃತಿಕ, ರಾಜಕೀಯ, ಐತಿಹಾಸಿಕ ವಿಶ್ಲೇಷಣೆ; ಅರಿವು ಬರಹ. ಸಂ–೨, ಭಾಗ–೧ ಪು–೩೫–೩.೬

೨೪. ತಿಪ್ಪೇರುದ್ರಸ್ವಾಮಿ .ಹೆಚ್: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು–೬,೨೭

೨೫. ತಿಪ್ಪೇರುದ್ರಸ್ವಾಮಿ .ಹೆಚ್: ಪೂರ್ವೋಕ್ತ, ಪು–೨೭

೨೬. ರಾಜಾರಾಂ ಹೆಗಡೆ : ಪೂರ್ವೋಕ್ತ, ಪು–೭೨

೨೭. ತಿಪ್ಪೇಸ್ವಾಮಿ .ಹೆಚ್: ೨೦೦೦, ದಾವಣಗೆರೆ ಜಿಲ್ಲೆಯ ದೇವಾಲಯಗಳು, (ಅಪ್ರಕಟಿತ ಪಿ.ಎಚ್.ಡಿ. ಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ. ಪು–೧೭೭

೨೮. ತಿಪ್ಪೇಸ್ವಾಮಿ .ಹೆಚ್ : ಕೂಡ್ಲಿಗಿ ತಾಲೂಕಿನ ಅಪರೂಪದ ಮಾನವಾಕೃತಿಗಳು, ಇತಿಹಾಸ ದರ್ಶನ, ಸಂ–೧೪, ಪು–೧೯,೨೨

೨೯. ರಾಮಚಂದ್ರರಾವ್ .ಎಸ್.ಕೆ: ೧೯೯೨, ಪ್ರತಿಮಾ ಕೋಶ, ಸಂಪುಟ–೬, ಪು ೨೧೩

೩೦. ತಿಪ್ಪೇಸ್ವಾಮಿ .ಹೆಚ್: ದಾವಣಗೆರೆ ಜಿಲ್ಲೆಯ ದೇವಾಲಯಗಳು, ಪೂರ್ವೋಕ್ತ, ಪು–೧೭೯

೩೧. ರಾಮದಾಸ್‌ರೆಡ್ಡಿ .ಎಸ್ .ಜಿ: ಪೂರ್ವೋಕ್ತ, ಪು–೧೪೧

೩೨. ಸುರೇಶ .ಬಿ: ಪೂರ್ವೋಕ್ತ, ಪು–೨೩೮

೩೩. Gopinath Rao T.A : Elements of Hindu iconography, vol –2, p-379

೩೪. ರಾಮಶೇಷನ್ .ಎನ್ .ಕೆ: ೧೯೮೦, ಕರ್ನಾಟಕದ ಕೋಟೆ ಕೊತ್ತಲುಗಳು, ಪು–೦೨

೩೫. Jagadesh Ayyar P.V : 1921-22, Construction of forts, QJMS, Vol-2, pg. 370

೩೬. ರಾಮಕೃಷ್ಣ ಮೂರ್ತಿ: ೧೯೯೦, ಸಂಸ್ಕೃತ ಗ್ರಂಥಗಳಲ್ಲಿ ಕೋಟೆಗಳ ವರ್ಣನೆ; ಇತಿಹಾಸದರ್ಶನ ಸಂ–೬, ಪು–೧೫೭

೩೭. ಕೃಷ್ಣ ಭಟ್ಟ .ಕೆ (ಅನು) : ೧೯೭೨, ಕೌಟಿಲ್ಯನ ಅಥಶಾಸ್ತ್ರ, ಪು–೪೬

೩೮. ರಾಮಕೃಷ್ಣಮೂರ್ತಿ : ಪೂರ್ವೋಕ್ತ, ಪು–೧೫೮

೩೯. ಈಶ್ವರಶಾಸ್ತ್ರಿ ಜಿ. (ಅನು) : ೧೯೮೭, ಮನುಸ್ಮೃತಿ, ಪು–೨೭೦

೪೦. ಲಕ್ಷ್ಮಣ್ ತೆಲಗಾವಿ (ಸಂ) : ೨೦೦೬, ಚರಿತ್ರೆ ಅಧ್ಯಯನ ಸಂಪುಟ–೧ ಸಂಚಿಕೆ–೧ ಪು–೧೩೯

ಅಧ್ಯಾಯ : ಐದು

ಐತಿಹ್ಯ ಹಾಗೂ ಮೌಖಿಕ ಕಥನಗಳು

೫.೧. ಮೌಖಿಕ ಕಥನಗಳ ಹಿನ್ನೆಲೆಯಲ್ಲಿ ಚರಿತ್ರೆಯ ವಿವರಗಳು

೫.೨. ಐತಿಹ್ಯಗಳು

ಅಧ್ಯಾಯ : ಐದು

ಮೌಖಿಕ ಕಥನಗಳು ಹಾಗೂ ಐತಿಹ್ಯಗಳು

ಅಕ್ಷರವಂಚಿತ ನಮ್ಮ ಬಹುಸಂಖ್ಯಾತ ಸಮುದಾಯದಲ್ಲಿ ಅಕ್ಷರಗಳಲ್ಲಿ ದಾಖಲಾದ ಮಾಹಿತಿ ಮಾತ್ರ ಚರಿತ್ರೆ ಕಟ್ಟಲು ಆಕರ ಎಂದು ಚರಿತ್ರೆಕಾರ ಭಾವಿಸದೇ ಮೌಖಿಕ ಪರಂಪರೆಯ ಮಾಹಿತಿಗಳು ಕೂಡ ಅಧಿಕೃತ ಆಕರಗಳಂತೆ ಕಾರ್ಯನಿರ್ವಹಿಸಬಹುದು ಎಂಬುದನ್ನು ಮನಗಾಣಬಹುದಾಗಿದೆ. ನಮ್ಮ ಬದುಕಿನ ಚಟುವಟಿಕೆಗಳಲ್ಲಿ ಮೌಖಿಕ ಪರಂಪರೆಗಳು ಅಂತಿಮವಾಗಿದ್ದವು. ಭಾರತದಂತಹ ಅಕ್ಷರವಂಚಿತ ಬಹುಸಂಖ್ಯಾತ ಸಮಾಜದಲ್ಲಿ ಅಕ್ಷರ ಸಂಪನ್ನ ಅಲ್ಪ ಸಮುದಾಯ ಕಟ್ಟಿದ ಚರಿತ್ರೆ ಅರ್ಧ ಸತ್ಯ ಮಾತ್ರ ಆಗಿರುವ ಸಾಧ್ಯತೆಯು ನಮಗೆ ಕಂಡುಬರುತ್ತದೆ. ಇದರ ಕುರಿತಂತೆ ನಮ್ಮೆದುರು ಚರಿತ್ರೆಯನ್ನು ಹೇಳುವ ಎರಡು ಬಗೆಯ ಪಠ್ಯಗಳು ಸಿದ್ಧಗೊಳ್ಳುತ್ತಿವೆ. ಒಂದು ಅಕ್ಷರ ಮಾಧ್ಯಮದಲ್ಲಿ ದಾಖಲಾದ ಸಾಂಪ್ರದಾಯಿಕ ಪಠ್ಯ. ಇನ್ನೊಂದು ಮೌಖಿಕ ಪರಂಪರೆಯಿಂದ ರೂಪಗೊಂಡ ಪಠ್ಯ.[೧]

ಇತಿಹಾಸದ ಗಾಢವಾದ ಮೌನ ಅದರ ವಿಪರ್ಯಾಸ ಹಾಗೂ ದುರಂತ ಮತ್ತು ಸಾಮ್ರಾಜ್ಯಗಳ ನರಕ ಮೌಖಿಕ ಕಥನಗಳ ಬಹುಬಗೆಯ ರೂಪಕ ಸಂಕೇತ ಪ್ರತಿಮೆ ಹಾಗೂ ಆಚರಣೆಗಳಲ್ಲಿ ಹೆಪ್ಪುಗಟ್ಟಿರುತ್ತವೆ. ಅಪವ್ಯಾಖ್ಯಾನದಿಂದ ತುಂಬಿಹೋಗಿರುವ ಭಾರತೀಯ ಇತಿಹಾಸದ ಅಪರಾಧಗಳನ್ನು ಸರಿಪಡಿಸಲು ಮೌಖಿಕ ಇತಿಹಾಸದ ಆಕರಗಳನ್ನು ಬಳಸುವುದು ಕೂಡ ಜನತೆಯ ಸಾಕ್ಷಿ ಪ್ರಜ್ಞೆಯನ್ನು ಅಪಮಾನಿಸಿದಂತೆಯೇ[೨] ಮೌಖಿಕವು ಅಲಿಖಿತ, ಅಪ್ರಕಟಿತ ಮಾಹಿತಿಗಳ ಆಗರ. ವೈಯಕ್ತಿಕ ನೆಲೆಯಲ್ಲಿ ಅಭಿವ್ಯಕ್ತಗೊಂಡು ತನ್ನ ಪರಂಪರೆಯಿಂದ ಬಂದದ್ದನ್ನು ಮುಂದಿನ ತಲೆಮಾರಿಗೆ ರವಾನಿಸುವ ತಂತ್ರ ಇದಾಗಿದೆ. ಚರಿತ್ರೆಯ ಘಟನೆಗಳ ಬಗ್ಗೆ ಜನರು ಏನು ಹೇಳುತ್ತಾರೋ ಅದೇ ಮೌಖಿಕ ಆಕರ ಆಗುತ್ತದೆ ಎಂಬ ಕಾಲವಿತ್ತು. ಆದರೆ ಇಲ್ಲಿ ಇತಹಾಸಕಾರನ ವಿಶ್ಲೇಷಣೆ ಮುಖ್ಯವಾಗುತ್ತದೆ.[೩]

೫.೧ ಮೌಖಿಕ ಕಥನಗಳು

ಮೌಖಿಕ, ಮೌಖಿಕತೆ, ಬಾಯಿ ಮಾತು ಈ ಶಬ್ಧಗಳನ್ನು ಘನವಾದ ಅರ್ಥದಲ್ಲಿ ಬಿಂಬಿಸುವುದಾದರೆ ಅದು ಸಾಂಸ್ಕೃತಿಕ ಪ್ರವೃತ್ತಿ. ಇಂತಹ ಭಾಷಿಕ ಹಾಗೂ ಸಾಂಸ್ಕೃತಿಕ ಸ್ವಭಾವ ಪ್ರವೃತ್ತಿಗಳೆರಡು ಕೂಡಿಯೇ ಅವರವರ ಅಸ್ತಿತ್ವವನ್ನು ವ್ಯಕ್ತಪಡಿಸುವ ನಿರೂಪಣೆಗಳಾಗಿ ಮೌಖಿಕ

ಆಕೃತಿಯನ್ನು ಪಡೆಯುವುದು. ಪರಂಪರೆಯನ್ನು ಪುನರ್‌ಸೃಷ್ಟಿಸುವ ಹಾಗೆಯೇ ಅದನ್ನು ಸಂವಹನ ಮಾಡುತ್ತಲೇ ನಿರಾಕರಿಸುವ ಕ್ರಿಯೆಯನ್ನು ಮೌಖಿಕತೆಯು ಮಾಡುತ್ತಲೇ ಇರುತ್ತದೆ.[೪] ಮೌಖಿಕತೆಯು ನುಡಿಯ ಸಂಭ್ರಮ, ಮಾತಿನ ಬೆಡಗು, ವ್ಯಕ್ತಪಡಿಸುವ ತುಡಿತ, ಹಾಡುವ ಹಂಬಲ, ಹೇಳುವ ಅನಿವಾರ್ಯತೆ ಮುಟ್ಟುವ ಬಯಕೆ, ತೆರೆದುಕೊಳ್ಳುವ ಬಗೆ ಮೌನವನ್ನು ಧ್ವನಿಸುವ ಕ್ರಿಯೆ, ಆನಂದ ಮತ್ತು ಆಕ್ರಂದನದ ಕೂಗು. ಜನಪದರು ಲೌಕಿಕದ ಜೊತೆಗೆ ನುಡಿಯುತ್ತಲೇ ಅಲೌಕಿಕತೆಯ ಜೊತೆಗೆ ದಿವ್ಯವಾದ ಸಂವಾದವನ್ನು ಕೂಡ ಮೌಖಿಕತೆಯ ಒಳಗೆಯೇ ಸಾಧಿಸಿಕೊಂಡಿದ್ದಾರೆ.[೫]

ಲಿಖಿತ ಆಧಾರಗಳು ವ್ಯಕ್ತಿ ನಿಷ್ಠವಾದವು. ಮೌಖಿಕ ಸಾಕ್ಷ್ಯವು ಸಮಷ್ಟಿಯಾದುದು. ಆದ್ದರಿಂದ ಮೌಖಿಕ ಆಧಾರಗಳು ಜೀವಂತವಾಗಿ ಬದುಕಿನ ಭಾವನೆಗಳಲ್ಲಿ ಬೆರೆತು ಹೋಗಿರುತ್ತವೆ. ಮೌಖಿಕ ಕಥನವೊಂದನ್ನು ಚರಿತ್ರೆಯ ಆಕರವಾಗಿ ಬಳಸಿಕೊಳ್ಳುವ ಸಂದರ್ಭದಲ್ಲಿ ಅದರೊಳಗಿನ ಕಾಲ್ಪನಿಕ ಅಂಶ ಹಾಗೂ ವ್ಯವಹಾರ ಸತ್ಯವನ್ನು ಬೇರ್ಪಡಿಸುವ ವಿಷಯದಲ್ಲಿ ವಿದ್ವಾಂಸನಾದವನು ತುಂಬ ಎಚ್ಚರಿಕೆಯಿಂದ ದುಡಿಯಬೇಕಾಗುತ್ತದೆ. ಅದರೊಳಗೆ 'ವಾಸ್ತವ' ಎನ್ನುವುದು ರೂಪಾತ್ಮಕವಾಗಿ ಅಡಗಿರುತ್ತದೆ. ಅದನ್ನು ಒಡೆದು ವಾಸ್ತವದ ತಿರುಳನ್ನು ಪಡೆದ ಶ್ರಮವನ್ನು ಚರಿತ್ರೆಕಾರ ತೆಗೆದುಕೊಳ್ಳಬೇಕಾಗುತ್ತದೆ.[೬]

ಚಳ್ಳಕೆರೆ ಪರಿಸರದ ಯಾವುದೇ ಪಟ್ಟಣ, ಗ್ರಾಮ, ಬುಡಕಟ್ಟು ಹಟ್ಟಿಗಳನ್ನು ಗಮನಿಸಿದರೆ ಅವು ಒಂದಿಲ್ಲೊಂದು ಬಗೆಯಲ್ಲಿ ಇತಿಹಾಸದ ಮುಸುಕನ್ನು ಹಾಕಿಕೊಂಡು ಅದರ ನೆನಪುಗಳನ್ನು ಮೆಲುಕು ಹಾಕುತ್ತಿರುವಂತೆ ತೋರುತ್ತದೆ. ಯಾವುದೇ ಗ್ರಾಮದ ಕಡೆ ಗಮನಿಸಿದರೆ ಅದರ ಸುತ್ತ ಸಣ್ಣ ಪ್ರಮಾಣದ ಮಣ್ಣಿನ ಕೋಟೆ ಗೋಡೆಯಿರುತ್ತದೆ. ಬುಡಕಟ್ಟು ಹಟ್ಟಿಯಾದರೆ ಸುತ್ತ ಮುಳ್ಳಿನ ಬೇಲಿ. ಗ್ರಾಮ ಮತ್ತು ಬುಡಕಟ್ಟು ಸಮೂಹದಲ್ಲಿ ಮೌಖಿಕ ಪರಂಪರೆಯಾಗಿ ಜನಪದ ಕಥೆ, ಗೀತೆ, ಕಥನ ಗೀತೆ, ಮೌಖಿಕ ಕಥನ, ಐತಿಹ್ಯಗಳು ಅಪಾರ ಸಂಖ್ಯೆಯಲ್ಲಿ ಸೃಷ್ಟಿಗೊಂಡು ಬಳಕೆಯಲ್ಲಿವೆ. ಇದರಲ್ಲಿ ಐತಿಹಾಸಿಕ ಗೀತೆಗಳ ಪಾಲೇ ಹೆಚ್ಚು, ಇಲ್ಲಿ ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಚಳ್ಳಕೆರೆ ತಾಲ್ಲೂಕು ಪರಿಸರದಲ್ಲಿ ಸುಮಾರು ೭೦೦ – ೮೦೦ ವರ್ಷಗಳಿಂದಲೂ ವಾಸಿಸಿಕೊಂಡು ಬಂದಿರುವ ಎರಡು ಬುಡಕಟ್ಟು ಸಮೂಹಗಳದು. ಮೊದಲನೆಯದು ಮ್ಯಾಸಬೇಡ ನಾಯಕರದು, ಎರಡನೆಯದು ಕಾಡುಗೊಲ್ಲರ ಸಮೂಹ. ಇವೆರಡೂ ಸಮೂಹಗಳು ಬುಡಕಟ್ಟಿನದೇ ಆದ ವಿಶಿಷ್ಟ ಆಚರಣೆ, ಸಂಪ್ರದಾಯಗಳನ್ನು ಕ್ರಮಬದ್ಧ ಹಿನ್ನೆಲೆಯಲ್ಲಿ ನಿರ್ವಹಿಸಿಕೊಂಡು ಬಂದಿರುತ್ತವೆ.[೭]

ಮ್ಯಾಸಬೇಡನಾಯಕರ ಮತ್ತು ಕಾಡುಗೊಲ್ಲ ಸಮೂಹ ಈ ಪ್ರದೇಶದಲ್ಲಿ ಆಯಾ ಗ್ರಾಮಗಳಿಂದ ದೂರವಿದ್ದು, ಊರಿನಿಂದ ಆಚೆ ಹಟ್ಟಿಗಳಲ್ಲಿ ವಾಸಿಸುವವರು. ಈಗಾಗಲೇ ನಾನಾ ಕಾರಣಗಳಿಂದ ಊರು ಸೇರಿರುವ ಕಾಡುಗೊಲ್ಲರು, ಮ್ಯಾಸಬೇಡರನ್ನು ಮಡಿಕೆಟ್ಟವರು ಎಂತಲೇ ಕರೆಯುತ್ತಾರೆ.[೮] ಈ ಪ್ರದೇಶದ ಜನಪದ ಸಂಸ್ಕೃತಿಯ ಪ್ರತಿನಿಧಿಗಳು ಎನಿಸಿರುವ ಗೊಲ್ಲರಹಟ್ಟಿಯ ಸಿರಿಯಜ್ಜಿ, ಬೆಳಗೆರೆ ಕೃಷ್ಣಶಾಸ್ತ್ರಿಗಳು, ದೇವರ ಮರಿಕುಂಟೆಯ ತಿಪ್ಪಣ್ಣ ಅವರಲ್ಲಿ ಪ್ರಮುಖರು. ಸಿರಿಯಜ್ಜಿ ಹಾಡಿರುವ ಅನೇಕ ಗೀತೆಗಳು, ಕಥನ ಗೀತೆಗಳು ಗ್ರಾಮದಿಂದ ಬುಡಕಟ್ಟು ಸಮೂಹವನ್ನು

ಪ್ರವೇಸಿರುವಂತೆ ಕಾಣುತ್ತದೆ. ಬುಡಕಟ್ಟು ಸಮೂಹದಲ್ಲಿ ಮನೆ ಕಟ್ಟುವುದು ಕೂಡ ನಿಷೇಧವೇ. ಒಂದೊಂದು ಗುಡಿಸಲೂ ವೃತ್ತಾಕಾರಕ್ಕೆ ಅದು ಇಷ್ಟೇ ಅಳತೆಯಲ್ಲಿರಬೇಕೆಂಬ ನಿಯಮವಿರುತ್ತದೆ.[೯]

ಈ ಪ್ರದೇಶದಲ್ಲಿರುವ ಗೊಲ್ಲರು ಮೂಲತಃ ಬೇಟೆಯ ಸಂಸ್ಕೃತಿಯರಾಗಿರುವುದಿಲ್ಲ. ಅವರು ಪಶುಪಾಲಕರಾಗಿಯೇ ಬಂದವರು. ಆದರೆ ಮ್ಯಾಸಬೇಡ ಬುಡಕಟ್ಟು ಸಮೂಹ ಅಲ್ಲಲ್ಲಿ ಪಾಳೆಯಗಾರಿಕೆ, ಪಶುಪಾಲನೆ ಮಾಡಿಕೊಂಡು ಅದರ ಜೊತೆಗೆ ಬೇಟೆಯ ಸಂಸ್ಕತಿಯನ್ನು ಕಸುಬನ್ನಾಗಿ ರೂಢಿಸಿಕೊಂಡು ಬಂದಿರುತ್ತಾರೆ. ಆದರೂ ಈ ಪ್ರದೇಶದಲ್ಲಿ ಪ್ರಚಲಿತದಲ್ಲಿರುವ ಕಥನಗಳಲ್ಲಿ ಎರಡೂ ಸಮೂಹಗಳ ನಡುವೆ ವ್ಯಾಜ್ಯಗಳು ನಡೆದು ಬೇಡನಾಯಕರೇ ಮೇಲುಗೈ ಸಾಧಿಸಿದಂತೆ ತೋರುತ್ತದೆ. ದಕ್ಷಿಣ ಭಾರತದಲ್ಲಿ ಇರಬಹುದಾದ ಅತ್ಯಂತ ಪ್ರಾಚೀನ ಕಾಲದ ದೈವ ನೆಲೆಗಳಲ್ಲಿ ತಿರುಪತಿ ತಿಮ್ಮಪ್ಪ ಮತ್ತು ಶ್ರೀಶೈಲ ಮಲ್ಲಿಕಾರ್ಜುನ ಪ್ರಮುಖರು. ಇವು ಅರಣ್ಯವಾಸಿ ಬುಡಕಟ್ಟು ನೆಲೆಗಳು. ಯಾವುದೇ ಬುಡಕಟ್ಟು ಮತ್ತು ಕೆಳವರ್ಗದವರು ಮನೆದೇವತೆಯನ್ನಾಗಿ ತಿರುಪತಿ ತಿಮ್ಮಪ್ಪ, ಶ್ರೀಶೈಲ ಮಲ್ಲಿಕಾರ್ಜುನರನ್ನು ಸ್ವೀಕರಿಸುತ್ತಾರೆ.[೧೦]

ಕಾಡುಗೊಲ್ಲರು ಪ್ರಮುಖವಾಗಿ ಆರಾಧಿಸುವುದು ಶೈವ ಮೂಲದ ದೇವತೆಗಳನ್ನು. ತಾವು ಕೃಷ್ಣನ ಭಕ್ತರೆಂದು ಹೇಳಿಕೊಳ್ಳುತ್ತಾರೆ. ಮ್ಯಾಸಬೇಡ ನಾಯಕರೂ ಸಹ ಮಲ್ಲಿಕಾರ್ಜುನನ ಭಕ್ತರು ಹಾಗೂ ಅವರಲ್ಲಿ ಸಂಪೂರ್ಣವಾಗಿ ವೈಷ್ಣವ ತತ್ವದ ಹಿನ್ನೆಲೆಯಿಂದಲೇ ನಡೆಯುವ ಕೆಲವು ಆಚರಣೆಗಳಿವೆ. ಈ ಬಗೆಯ ಧಾರ್ಮಿಕ ಪ್ರಭಾವ ರಾಮಾನುಜಾಚಾರ್ಯರ ಕಾಲದಿಂದ ಆರಂಭವಾಗಿ ಭಕ್ತಿಯುಗದ ಕಾಲಕ್ಕೆ ವಿಜಯನಗರದರಸರ ಕಾರಣದಿಂದ ಹೆಚ್ಚು ಪ್ರಚಾರಕ್ಕೆ ಬಂದಿತು.[೧೧] ಈ ಪರಿಸರದಲ್ಲಿ ಪ್ರಚಲಿತದಲ್ಲಿರುವ ಕೆಲವು ಪ್ರಮುಖ ಕಥನಗಳು ಹಾಗೂ ಐತಿಹ್ಯಗಳನ್ನು ಈ ಕೆಳಗಿನಂತೆ ನೋಡಬಹುದು.

ಕೊಂಡದ ಕಾಟವ್ವನ ಕಥನ ಗೀತೆ

ಸಿರಿಯಜ್ಜಿ ಹಾಡುವ ಅನೇಕ ಕಥಾನಕಗಳಲ್ಲಿ ಈ ಕಥನಗೀತೆಯೂ ಪ್ರಮುಖ ಐತಿಹಾಸಿಕ ವಿವರವನ್ನು ಬಿಚ್ಚಿಡುವಂತದ್ದು. ಬಹುಶಃ ಸತಿಸಹಗಮನಕ್ಕೆ ಸಂಬಂಧಿಸಿದಂತೆ ಈ ಗೀತೆಯು ಮಹತ್ವದ ಐತಿಹಾಸಿಕ ವಿವರಗಳನ್ನು ನೀಡುತ್ತದೆ. ಸತಿ ಗೀತೆಗಳು ಸಾಮಾನ್ಯವಾಗಿ ಮೂರು ಭಾಗಗಳಲ್ಲಿ ರಚನೆಗೊಂಡಿರುತ್ತವೆ. ಮೂರನೆಯ ಭಾಗದಲ್ಲಿ ಸಂಪೂರ್ಣವಾಗಿ ಸತಿ ಕೊಂಡಕ್ಕೆ ಹೋಗುವುದರ ವರ್ಣನೆ ಇರುತ್ತದೆ.

ಸತಿಯ ಅಣ್ಣನೋ, ಮೈದುನನೋ ಹೊರಟು ಆ ಸೀಮೆಯ ಪಾಳೆಯಗಾರನ ಅಪ್ಪಣೆಯನ್ನು ತರಬೇಕಿತ್ತಂತೆ. ಈ ಪದ್ಧತಿಯನ್ನು ಒಪ್ಪಿದ್ದ ರಾಜನಾದರೆ ಅಪ್ಪಣೆ ಕೊಡುತ್ತಿದ್ದ. ಆದರೆ ಈ ಕ್ರೂರ ಪದ್ಧತಿಯನ್ನು ಒಪ್ಪಿಕೊಳ್ಳದ ರಾಜನಿದ್ದರೆ ಅಪ್ಪಣೆ ಕೊಡುವುದಕ್ಕೆ ತಡ ಮಾಡುತ್ತಿದ್ದ. ಆಗ ಸತಿ ರಾಜನ ಅಪ್ಪಣೆಗೆ ಆಗ್ರಹಪಡಿಸುತ್ತಿದ್ದುದುಂಟು.

ಕಿಚ್ಚು ಕೊಡುವಾಕ ಹೊಟ್ಯೆಪ್ಪನಾಯಕನಾಣೆ
ಪಚ್ಚೆ ಕಲ್ಲಾಣೆ ಪ್ರಜೆಯಾಣೆ ಮುಮ್ಮಡಿಬೂಪ್ನ
ವಟ್ಟೆ ಮ್ಯಾಲಡೋ ಮಗನಾಣೆ

ಕೊಂಡದ ಕಾಟವ್ವ ಗೀತೆಯಲ್ಲಿ ಬರುವ ಈ ಕಥನ ಸತಿ ಕಾಟವ್ವನು ನಿಡುಗಲ್ಲು ಪಾಳೆಯಗಾರನಾದ ಹೊಟ್ಯಾಳ ನಾಯಕನನ್ನು ಕೊಂಡಕ್ಕೆ ಹೋಗಲು ಅಪ್ಪಣೆಗಾಗಿ ಆಗ್ರಹಿಸುವಂತೆ ಕಾಣುತ್ತದೆ. ಇದರ ನಡುವೆ ಸತಿಯನ್ನು ಕೊಂಡಕ್ಕೆ ಬೀಳದಂತೆ ತಡೆಯುತ್ತಿದ್ದುದೂ ಉಂಟು.

ಆಸುಮಗಳು ಕಾಟಮ್ಮ ಬಸವಾನೇರಿಕಂಡು
ಎಸಳು ಮಲ್ಲಿಗೆಯ ಮುಡುಕಂಡು ವುಲಿಕುಂಟೆ
ಸೊಸಿಬೇವಿನಾಗ ಮೆರುದಾಳೆ

ಈ ಮೇಲಿನ ಪದ್ಯದ ಸಾಲುಗಳು ಹುಲಿಕುಂಟೆಯಲ್ಲಿನ ಕೊಂಡದ ಸ್ಥಾನವನ್ನು ಹೇಳುತ್ತದೆ. ಕಾಟವ್ವನ ಗಂಡನ ಮನೆ ಹುಲಿಕುಂಟೆ ಗ್ರಾಮದಿಂದ ಎರಡು ಮೈಲಿ ದೂರಕ್ಕೆ ಆಕೆ ಸತಿ ಹೋಗಿ ಕೊಂಡಕ್ಕೆ ಬಿದ್ದ ಸ್ಥಳ ಈಗಲೂ ಇದೆ. ಈಗ ಅಲ್ಲಿ ಶಾಸನವಾಗಲಿ, ಮಾಸ್ತಿಕಲ್ಲಾಗಲಿ ಕಂಡುಬರುವುದಿಲ್ಲ. ಅಥವಾ ಇದ್ದಿರಬಹುದಾದ ಕಲ್ಲು ಹಾಳಾಗಿರಬೇಕು. ಹುಲಿಕುಂಟೆ ಗ್ರಾಮ ಹಿಂದಿನ ಕಾಲಕ್ಕೆ ನಿಡುಗಲ್ಲು ಪಾಳೆಯ ಪಟ್ಟಿಗೆ ಸೇರಿತ್ತು. ಕಾಟವ್ವ ಕೊಂಡಕ್ಕೆ ಹೋಗುವ ಸಂದರ್ಭದಲ್ಲಿ ನಿಡಗಲ್ಲು ಪಾಳೆಯಗಾರರ ಅಪ್ಪಣೆಯನ್ನು ಪದ್ಧತಿಯ ಪ್ರಕಾರ ಪಡೆಯುತ್ತಿದ್ದುದು ಇದರಿಂದ ಗೊತ್ತಾಗುತ್ತದೆ.

ಸಿರಿಯಣ್ಣನ ಹಾಡು

ಸಿರಿಯಣ್ಣನು ಕುರಿತಾದ ಕಥನಗೀತೆ ಚಳ್ಳಕೆರೆ ತಾಲ್ಲೂಕು ಯಲಕಟ್ಟೆ ಗೊಲ್ಲರ ಹಟ್ಟಿಯ ಸುತ್ತಮುತ್ತಲ ಗ್ರಾಮಗಳಲ್ಲಿ ಪ್ರಚಲಿತವಿದೆ. ದನ ಕಾಯುವ ಕಾಯಕ ಮಾಡಿ ಎತ್ತುಗಳಿಗೆ ಗೂಡು ತಿರುವಿಕೊಂಡು ಇದ್ದರೂ ನಿಡಗಲ್ಲು ಸೀಮೆಯ ಯುದ್ಧದಲ್ಲಿ ಭಾಗವಹಿಸಿ ಪರಾಕ್ರಮ ತೋರಿ ವಾಪಸ್ಸಾದ. ಆವಿನ ಗೂಡಿನಲ್ಲಿರುವಾಗ ಎದುರಾದ ಹಂದಿಯ ಜೊತೆ ಹೋರಾಡಿ ಮಡಿದು ಹೋದ.

ಎಣ್ಣುಂಡ ಎಣಗಂಟು ತಿಪ್ಯಾಗ ಎಳವೂತಿ
ಮುತ್ತೀನ ತುರಾಯಿ ಎಳೆವೂತ ಸಿಂಪಮ್ನ
ಪುತ್ರ ಕಾಳಗಕೆ ನಡೆದಾನು

ರಾಯದವಾಡೆ ಕ್ವಾಟೇಯ ವಾರೇಲಿ
ದಾರೀಲಾದುವೆ ಕದುನಾವೆ ಈರಣ್ಣನ
ಕಾಡಂದಿಮ್ಯಾಲೆ ಕದನಾವು

ಈ ಸಿರಿಯಣ್ಣನ ಗೀತೆಯಲ್ಲಿ ನಿಡುಗಲ್ಲು ಪಾಳೆಯಪಟ್ಟಿನ, ಬೆಳೆಗೆರೆ ಹೆಸರಿನ ಪ್ರಸ್ತಾಪವಿದೆ. ತಿಪ್ಪಣ್ಣನಾಯಕನೆಂಬ ವೀರನ ಸಾಹಸ ಮೆಚ್ಚಿ ವಿಜಯನಗರದ ಕೃಷ್ಣದೇವರಾಯ ಚಿತ್ರದುರ್ಗ

ಜಿಲ್ಲೆಯ ಪೂರ್ವಭಾಗಕ್ಕೆ ಮಾಚಿಸಮುದ್ರ, ಗೋಸಿಕೆರೆ ಮುಂತಾದ ಗ್ರಾಮಗಳನ್ನು ಕೊಟ್ಟ. ಈ ಪ್ರಾಂತ್ಯಗಳಿಗೆ ಒಡಯನಾದ ತಿಪ್ಪಣ್ಣನಾಯಕ ಸ್ವಂತ ಸಾಮರ್ಥ್ಯದಿಂದ ಭೂಮಿಯನ್ನು ವಿಸ್ತರಿಸಿಕೊಂಡ. ಕಾಲಕ್ರಮದಲ್ಲಿ ಈತನ ಪಾಳೆಯಪಟ್ಟು ಬಿಜಾಪುರ ಸುಲ್ತಾನರ ವಶವಾಯಿತು. ಸೋತ ತಿಪ್ಪಣ್ಣನಾಯಕ ನಿಡುಗಲ್ಲಿಗೆ ಓಡಿಹೋಗಿ ಅಲ್ಲಿ ದುರ್ಗಮವಾದ ಕೋಟೆಯನ್ನು ಕಟ್ಟಿ ತನ್ನ ವಸಾಹತು ಸ್ಥಾಪಿಸಿದ್ದ. ನಿಡುಗಲ್ಲಿನ ಪಾಳೆಯ ಪಟ್ಟಿನ ವಿಚಾರ ಚಳ್ಳಕೆರೆ ಪಾವಗಡ ತಾಲ್ಲೂಕಿನ ವೀರಗೀತೆಗಳು ಮತ್ತು ಮಹಾ ಸತಿ ಗೀತೆಗಳಲ್ಲಿ ಉಲ್ಲೇಖಗೊಳ್ಳುತ್ತದೆ.

ಚಿಕದಂಡಿ ಕ್ವಾಟೇಯ ಒತ್ತಿಲಿ
ನಿಡಗಲ್ಲು ಸೀಮೆಯಲಿ ರಾಯನ
ಚಿಕ್ಕಂದಿ ಮ್ಯಾಲೆ ಕದನಾವೆ

ಚಿಕ್ಕ ಬೆಳೆಗೆರೆ ಅತ್ತುಸುತ್ತಿನ ಕ್ವಾಟೆ
ಮತ್ತೆ ಡೊಂಕುಣಿ ವುಲಿಮುಕ ವೂರಮುಂದೆ
ಅಪ್ಪಯ್ಯಗಲಿಗ ತರುವೋರು

ಕರಡಿ ಬುಳ್ಳಪ್ಪನ ಗೀತೆ

ಕರಡಿ ಬುಳ್ಳಪ್ಪ ಕಾಡುಗೊಲ್ಲರ ನಡುವೆ ಪ್ರಮುಖ ವ್ಯಕ್ತಿಯಾಗಿದ್ದವನು. ನಂತರ ತನ್ನ ಸತ್ಕಾರ್ಯದ ಮೂಲಕ ದೇವತಾಸ್ವರೂಪಿಯಾದವನೆಂದು ತಿಳಿದುಬರುತ್ತದೆ. ಈತನನ್ನು ದಿಲ್ಲಿಯ ಕಡೆಯಿಂದಲೇ ಬಂದವನೆಂದು ಗೊಲ್ಲರು ಹೇಳುತ್ತಾರೆ. ದಕ್ಷಿಣ ಭಾರತದ ಅನೇಕ ವೀರರು ದಿಲ್ಲಿಯಿಂದ ಬಂದವರೇ ಎಂಬ ರೀತಿಯಲ್ಲಿ ದಂತ ಕಥೆಗಳಿವೆ. ಜೊತೆಗೆ ದಿಲ್ಲಿಯ ಸುಲ್ತಾನರ ಪ್ರಸ್ತಾಪವೂ ಈ ಕಥನ ಗೀತೆಗಳಲ್ಲಿದೆ. ಜೊತೆಗೆ ದಿಲ್ಲಿಯಿಂದ ಬಂದ ಬಿಲ್ಲಂಚಿನ ದೊರೆಗಳು ಯಾರು ಎಂಬುದು ಅಸ್ಪಷ್ಟ. ಇವರ ಹೆಸರಿನಲ್ಲಿ ಕಲ್ಲು, ತಾಮ್ರಪಟ ಶಾಸನಗಳು ನಿರ್ಮಾಣವಾಗಿರುವುದಾಗಿಯೂ ಈ ಕಥನ ಗೀತೆಯಲ್ಲಿ ಪದ್ಯವಿದೆ.

ಕೆಟ್ಟ ತುರುಕಾರು ದಂಡೆದ್ದು ಬರುವಾಗ
ಪುತ್ರಮ್ನಲ್ಲಿ ಮರುತಾರೆ ತುರುಕಾರು
ಕತ್ತೀಗೆ ಕದನಾವ ಕೊಡುತಾರೆ

ದಿಳ್ಳಿನಿಂದ ಬಂದಾರೆ ಬಿಲ್ಲಿಂಬಿನ ದೊರೆಗಾಳು
ದಿಳ್ಳೀಯ ಬಿಟ್ಟು ಚಿತ್ರಳ್ಳಿ ಕಟಿಸ್ಯಾರೆ
ಬಿಲ್ಲಂಬಿನೋರು ಸದುರಾರು

ಎಂತೋರ ಸಾಸಾನ ಅಂಚಿನ ಮ್ಯಾಲೊಯ್ಯಾರೆ
ಪಂತಕ ಸುರಿವಾಳ ಕಂಡೀಯ ಸಾಸಾನ
ಕಂಚಿನ ವೊತ್ತಿಗ್ಗೆ, ವೊಯ್ಯಾರೆ

ಹೀಗಾಗಿ ಕರಡಿ ಬುಳ್ಳಪ್ಪ ಸ್ಥಳದಿಂದ ಸ್ಥಳಕ್ಕೆ ತಿರುಗುವ ದನಗಾಹಿ ಇಲ್ಲವೇ ವ್ಯಾಪಾರಸ್ಥನಿರಬಹುದು. ಈತ ಬೆಳೆಗೆರೆ – ನಾರಾಯಣಪುರದ ವೇದಾವತಿ ನದಿ ದಂಡೆಯಲ್ಲಿ ತನ್ನನ್ನು ತಾನೇ ಬಲಿಕೊಟ್ಟುಕೊಂಡಿರಬಹುದು. ಹೀಗೆ ಜನಸಾಮಾನ್ಯರು ಪರೋಕ್ಷವಾಗಿ ಆಡಳಿತದಲ್ಲಿ ಭಾಗವಹಿಸಿದ್ದಂತೆ ತೋರುತ್ತದೆ.

ಎತ್ತಪ್ಪನ ಕಥನಗೀತೆ

ಚಳ್ಳಕರೆ ಸೀಮೆಯ ಕಾಡುಗೊಲ್ಲರ ಆರಾಧ್ಯ ದೇವರುಗಳಲ್ಲಿ ಎತ್ತಯ್ಯನೂ ಒಬ್ಬ. ಈ ಗೀತೆಯಿಂದ ನಿಚ್ಚಳವಾಗಿ ಎತ್ತಪ್ಪನೆಂಬುವನು ಕಾಡುಗೊಲ್ಲರ ನಡುವಣ ಪ್ರಮುಖ ದನಗಾಹಿ ಎಂದು ತಿಳಿದು ಬರುತ್ತದೆ. ದನಾಗಾಹಿಗಳು ಎಂದರೆ ತಾವು ವಾಸಿಸಿದ್ದ ಹಟ್ಟಿಯನ್ನು ಬಿಟ್ಟು ಅರಣ್ಯದಲ್ಲಿ ದನಗಳ ಗೂಡು ತಿರುವಿಕೊಂಡು ಇರುವುದು. ದನಕರುಗಳು ಐಶ್ವರ್ಯದ ಒಂದು ಭಾಗವೇ ಆಗಿದ್ದುದರಿಂದ ಅರಣ್ಯದ ಏಕಾಂತದಲ್ಲಿರುತ್ತಿದ್ದ ದನಗಾಹಿಗಳನ್ನು ಆಕರ್ಷಿಸಲು ಹೆಣ್ಣು ಮಕ್ಕಳ ನೆರವನ್ನು ಪಡೆದುಕೊಂಡಂತೆ ಈ ಗೀತೆಯಲ್ಲಿ ಬರುತ್ತದೆ. ಈ ಎತ್ತಪ್ಪನನ್ನು ಪಗಡೆಯಾಟಕ್ಕೆ ಕರೆದು ಮೋಸದಿಂದ ಬೇಡರು ಹತ್ಯೆ ಮಾಡುವ ವಿವರವಿದೆ. ಹುಲಿದುರ್ಗ ಸೀಮೆಯಲ್ಲಿ ಎತ್ತಿನ ಗೂಡು ಹಾಕಿಕೊಂಡಿರಬೇಕಾದರೆ ಎತ್ತಪ್ಪ ಅಲ್ಲಿ ಬೇಡರ ಪಡೆಯಿಂದ ಹತನಾದಂತೆ ತಿಳಿದುಬರುತ್ತದೆ.

ತರಿಯದ ಕಳ್ಳಿ ಕಡಿದು ತಿರುವಿ ಗೂಡನಾಕಿ
ಎಬ್ಬೆಳ್ಳೇಲಿ ಆಲ ಕರುವಾನೇ ಎತ್ತಯ್ಯನ
ಬುದ್ಧಿ ಬ್ಯಾಡರಿಗೇ ತಿಳಿಯಾವು

ತಿಳಿಯಾವು ಬಂದು ಕಳ್ಳೀ ಕೀಳಲುವಾಗ
ಕಾಗೂಡಿ ಕವಣೆ ಬೆರಳಾಗ ಎತ್ತಯ್ಯ
ಬ್ಯಾಡರ ನೀಡಾಡಿ ಪಡೆದಾನೆ

ಈ ಮೇಲಿನ ಪದ್ಯಗಳಲ್ಲಿ ವೀರನೂ, ಮುಗ್ಧನೂ ಆಗಿದ್ದ ಕಾಡುಗೊಲ್ಲರ ಆವಿನ ಎತ್ತಯ್ಯ ಬೇಡರ ಮೋಸಕ್ಕೆ ಬಲಿಯಾದ ವಿವರ ಕಾಣಿಸುತ್ತದೆ. ಗೊಲ್ಲರ ದನಗಾಹಿತ್ವದ ಬದುಕಿನ ಕ್ರಮ ಮತ್ತು ಅಂದು ಪ್ರಚಲಿತದಲ್ಲಿದ್ದ ವರ್ಗ ಸಂಘರ್ಷವನ್ನು ಈ ಕಥನ ಗೀತೆಯು ತಿಳಿಸಿಕೊಡಲು ಪ್ರಯತ್ನಿಸುತ್ತಿದೆ.

ಕುಲಗುರು ರಾಮಾಚಾರಿಯ ಕಥನ ಗೀತೆ

ಈ ಗೀತೆಯಲ್ಲಿ ಬರುವ ರಾಮಾಚಾರಿ ಯಾವುದೋ ಒಂದು ಮಠದ ಹಿರಿಯನಾಗಿದ್ದಂತೆ ಪ್ರಸ್ತಾಪವಿದೆ. ಈ ನುಡಿಗಳಲ್ಲಿ ರಾಮಾಚಾರಿಯ ಹೆಸರು ಒಂದೆರಡು ಕಡೆ ಬಿಟ್ಟರೆ ಹೆಚ್ಚು ಪುನಾರವರ್ತನೆಯಾಗುವುದಿಲ್ಲ. ಈ ಕೆಳಗಿನ ನುಡಿಗಳಲ್ಲಿ ಆಂದ್ರ ಪ್ರದೇಶದ ವಿಕದ್ರಿಹಿ ಎಂಬ ಸ್ಥಳದ ಉಲ್ಲೇಖ ಬರುತ್ತದೆ. ಗೊಲ್ಲರಿಗೆ ಕದ್ರಿ ನರಸಿಂಹ ಆರಾಧ್ಯ ದೇವತೆ. ಕದ್ರಿಗುಡ್ಡದ ಜೊತೆಗೆ ಚಳ್ಳಕೆರೆ ಪ್ರದೇಶದ ಸಾಣಿಕೆರೆ, ಚಿಕ್ಕೇನಹಳ್ಳಿ ಮುಂತಾದ ಊರುಗಳ ಹೆಸರೂ ಬರುತ್ತದೆ. ಹಾಗಾಗಿ

ಈ ಪರಿಸರದಲ್ಲಿರುವ ಗೀತೆಗಳಿಗೂ ಬುಡಕಟ್ಟು ಸಮುದಾಯದವರಿಗೂ, ರಾಮಾಚಾರಿಗೂ ಯಾವುದೋ ತೆರನಾದ ಸಂಬಂಧವಿರಬಹು ದೆಂದು ಕಾಣುತ್ತದೆ.

ಗುರುವೆ ರಾಮಪ್ಪ ಬರಿಗಾಲಲಿ ಬರುವಾಗ
ತಿರುಗಿನ ನೋಡ್ಯಾನೆ ಸಿಸುಮಗ ರುಸಿವೇಂದ್ರ
ಗುರುವಿಗಂದಾಲವ ಕಳಿವ್ಯಾನೆ

ನಮ್ಮ ಗುರುವ ನೆನೆದು ನಾನು ಧನ್ಯಳಾದೆ
ನಮ್ಮಲ್ಲಿ ಪಾಪ ಪರಿಯಾರ ಕಾದ್ರೀಯ
ಪಣ್ಯೇವು ಗುರುವ ನೆನೆದೇವೆ

ಅಟ್ಯಾಗ ನಮ್ಮ ಗುರುವು ಗಟ್ಟಿಸಿ ನಡೆದರೆ
ಎಲೆನುಡಿಗೆಜ್ಜೆ ಗರಳೆಂದು ಚಿಕ್ಕೇನಳ್ಳಿ
ಪಟ್ನವೇ ನಮಗುರು ಇಳಿವಾಗ

ಹಳೇ ದೊಡ್ಡೇರಿಯು ಲೂಟಿಯಾದ ಕಥನ

ಚಳ್ಳಕೆರೆಯಿಂದ ಪೂರ್ವಕ್ಕೆ ಸುಮಾರು ೬ ಕಿ.ಮೀ. ದೂರದಲ್ಲಿರುವ ಈಗಿನ ದೊಡ್ಡೇರಿಯ ದಕ್ಷಿಣಕ್ಕೆ ಶ್ರೀಕನ್ನೇಶ್ವರ ಕ್ಷೇತ್ರವಿದೆ. ಈ ಕ್ಷೇತ್ರದ ದಕ್ಷಿಣ ಭಾಗದಲ್ಲಿ 'ಹಾಳೂರು' ಎಂದು ಕರೆಯಲ್ಪಡುತ್ತಿರುವ ಸ್ಥಳವಿದೆ. ಅದರ ಪಕ್ಕದಲ್ಲಿ ದೊಡ್ಡ ಕೆರೆಯಿದೆ. ಹಳೇ ದೊಡ್ಡೇರಿಯ ಪೂರ್ವಕ್ಕೆ ಉಪ್ಪಾರ ಹಟ್ಟಿ ಗ್ರಾಮವಿದೆ. ಸ್ಥಳೀಯರು ನೀಡಿದ ಮಾಹಿತಿಯಂತೆ ಹಳೇ ದೊಡ್ಡೇರಿಯು ಕೋಟೆಯನ್ನು ಹೊಂದಿದ್ದು ಪಾಳೆಯಗಾರರ ಆಳ್ವಿಕೆಗೆ ಒಳಪಟ್ಟಿತ್ತು. ಊರ ಮಧ್ಯೆ ವೀರಭದ್ರ ಸ್ವಾಮಿ ದೇವಾಲಯವಿತ್ತು. ಈ ಊರಿಗೆ ಎರಡು ಕಲ್ಯಾಣಿಗಳಿದ್ದು, ಅವುಗಳಿಗೆ ಪಕ್ಕದ ಕೆರೆಯಿಂದ ನೀರು ಸರಬರಾಜಾಗುತ್ತಿತ್ತು. ಈ ಊರಲ್ಲಿ ಸಂಪತ್ತಿದೆ ಎಂದರಿತ ಮುಸಲ್ಮಾನ ಸೈನಿಕರು ಈ ಊರನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಲು ಪ್ರಯತ್ನಪಟ್ಟರಂತೆ. ಸೈನ್ಯ ಸಮೇತರಾಗಿ ಬಂದು ಕೋಟೆಯ ಹೊರಗೆ ಕಾದರು ಎಷ್ಟೋ ದಿನ ಕಾದರೂ ಊರಿನ ಕೋಟೆಯಿಂದ ಹೊರಗೆ ಯಾರೂ ಬರಲಿಲ್ಲ. ಕಾರಣವೆಂದರೆ ಊರಿನ ಕಲ್ಯಾಣಿಗೆ ಕೆರೆಯಿಂದ ನೀರು ಸರಬರಾಜಾಗುತ್ತಿರುವ ಗುಟ್ಟನ್ನು ಮುಸಲ್ಮಾನ ಸೈನಿಕರು ಅರಿತರು. ಆಗ ಕೆರೆಯ ನೀರಿನ ಕೊಳವೆಗೆ ಸೀಸಹಾಕಿ ನೀರು ಸರಬರಾಜು ನಿಲ್ಲಿಸಿದರಂತೆ. ಅನಂತರದಲ್ಲಿ ಕೋಟೆಯನ್ನು ಮುತ್ತಿ ಊರಿಗೆ ಊರನ್ನೇ ಕೊಳ್ಳೆ ಹೊಡೆದರಂತೆ. ಇದರಿಂದ ಹಳೇ ದೊಡ್ಡೇರಿಯು ನಾಶವಾಯಿತು. ಇದರಲ್ಲಿ ಐತಿಹಾಸಿಕ ಸತ್ಯವೂ ಒಳಗೊಂಡಿದೆ.

೫.೨ ಐತಿಹ್ಯಗಳು

ಒಂದು ಪ್ರದೇಶದ ಸಮಗ್ರ ಅಧ್ಯಯನ ಕೈಗೊಳ್ಳುವುದರ ಮೂಲಕ ಆ ಪ್ರದೇಶದ ಚರಿತ್ರೆಯನ್ನು ಕಟ್ಟಲು ಸಾಧ್ಯವಿದೆ. ಆದರೆ ಇಲ್ಲಿಯವರೆಗೆ ಇತಿಹಾಸ ರಚನೆಕಾರರು ಲಿಖಿತ ಪರಂಪರೆಯನ್ನೇ ಅವಲಂಬಿಸಿ ಚರಿತ್ರೆಯನ್ನು ಕಟ್ಟಿಕೊಟ್ಟಿದ್ದಾರೆ. ಇದರಿಂದಾಗಿ ಬಹುಸಂಖ್ಯಾತ ಜನಸಮುದಾಯಗಳ

ಮನದಲ್ಲಿರುವ ಅಲಿಖಿತ ರೂಪದ ಚರಿತ್ರೆಯ ಆಯಾಮಗಳನ್ನು ಕಡೆಗಣಿಸಿದ್ದಾರೆ. ಸಾಂಸ್ಕೃತಿಕ ಚರಿತ್ರೆಯ ರಚನೆಯಲ್ಲಿ ಇತ್ತೀಚಿಗೆ ಮೌಖಿಕ ಪರಂಪರೆಯನ್ನು ಆಧಾರವಾಗಿ ಬಳಸಿಕೊಳ್ಳಲಾಗುತ್ತಿದೆ. ಮೌಖಿಕ ಆಧಾರಗಳು ಜೀವಂತವಾಗಿ, ಜನಸಮುದಾಯದ ಬದುಕಿನ ಭಾವನೆಗಳಲ್ಲಿ ಬೆರೆತು ಹೋಗಿರುತ್ತವೆ.

ಈ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಮೌಖಿಕ ಪರಂಪರೆಯಲ್ಲಿರುವ ಐತಿಹ್ಯಗಳ ಅಧ್ಯಯನಕ್ಕೆ ತೊಡಗಿದಾಗ ಅಲ್ಲಿಂದ ಚರಿತ್ರೆಯ ಇನ್ನೊಂದು ಮುಖದ ಪರಿಚಯವಾಗುತ್ತದೆ. ಹೀಗೆ ಕಂಠಪಾಠದ ಪರಂಪರೆಯ ಕವಲುಗಳಾದ ಐತಿಹ್ಯಗಳನ್ನು ಬಳಸಿಕೊಳ್ಳುವುದರ ಮೂಲಕ ಇತಿಹಾಸವನ್ನು ಸತ್ಯದ ದಿಕ್ಕಿನೆಡೆಗೆ ಕೊಂಡಯ್ಯಲು ಸಾಧ್ಯವಾಗುತ್ತದೆ. ಐತಿಹ್ಯಗಳು ಮಾನವನ ಸಾಮಾಜಿಕ ಜೀವನಕ್ಕೆ ಹತ್ತಿರವಾದ ಹಾಗೂ ನಡೆಯಬಹುದಾದ ಘಟನೆಗಳನ್ನು ಆಧಾರಸಹಿತವಾಗಿ ಹಾಗೂ ವಾಸ್ತವಕ್ಕೆ ಹತ್ತಿರವಾದ ವಿಚಾರಗಳನ್ನು ಬಿಂಬಿಸುವ ಘಟನೆಗಳೆಂಬಂತೆ ಕಂಡುಬರುತ್ತವೆ.

ಈ ಐತಿಹ್ಯಗಳು ಚಾರಿತ್ರಿಕ ಘಟನೆಗಳೆಂಬಂತೆ ತೋರಿಬರುತ್ತಿವೆ. ಹಾಗೆಯೇ ಚಾರಿತ್ರಿಕ, ಪೌರಾಣಿಕ ಹಾಗೂ ಕಾಲ್ಪನಿಕ ಅಂಶಗಳಿಂದ ಕೂಡಿ ಆಕರ್ಷಿತವಾಗಿರುತ್ತವೆ. ಅವುಗಳಲ್ಲಿಯ ಚಾರಿತ್ರಿಕ ಹಾಗೂ ಕಲ್ಪಿತ ಅಂಶಗಳನ್ನು ಸೂಕ್ಷ್ಮವಾಗಿ ಬೇರ್ಪಡಿಸಿ ಚಾರಿತ್ರಿಕ ಸತ್ಯವನ್ನು ಮಾತ್ರ ಗುರುತಿಸಬೇಕಾಗುತ್ತದೆ. ಪುರಾತತ್ವ ಅಧ್ಯಯನಗಳ ಆಕರಗಳ ಜೊತೆಜೊತೆಗೆ ಈ ಮೌಖಿಕ ಆಕರಗಳ ಪ್ರಭೇದಗಳಾದ ಐತಿಹ್ಯಗಳನ್ನು ಬಳಸಿಕೊಳ್ಳುವುದು ಮುಖ್ಯವಾಗಿದೆ. ಈ ಐತಿಹ್ಯಗಳು ವ್ಯಕ್ತಿಗಳ, ಸ್ಥಳಗಳ ಅಥವಾ ಘಟನೆಗಳ ವಾಸ್ತವ ಅಥವಾ ತೋರಿಕೆಯ ನಂಬಿಕೆಗಳನ್ನೊಳಗೊಂಡ ಕಥನಗಳಾಗಿವೆ. 'ಲೆಜೆಂಡ್'ಗಳೆಂದು ಕರೆಯಲ್ಪಡುವ ಐತಿಹ್ಯಗಳು ಪ್ರಪಂಚದ ವಿವಿಧ ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿವೆ.

ಐತಿಹ್ಯದ ಅರ್ಥವನ್ನು ತಿಳಿಯ ಹೊರಟರೆ ಇದು ವಿಇತಿಹಿ, ವಿಇತಿಹಹಿ ಎನ್ನುವ ಸಂಸ್ಕೃತ ರೂಪದಿಂದ ನಿಷ್ಪನ್ನವಾಗಿದೆ. ಈ ಶಬ್ದ ರೂಪಗಳಿಗೆ ಹೀಗೆ, ಹೀಗಿತ್ತು, ಹೀಗೆ ನಡೆದದ್ದು, ಹೀಗಿರಬೇಕು[೧೨] ಎಂಬ ಮುಂತಾದ ಅರ್ಥಗಳಿವೆ. ಇಂದು ನಾವು ಯಾವುದನ್ನು ವಿಐತಿಹ್ಯಹಿ ಎಂದು ಗುರುತಿಸುತ್ತೇವೆಯೋ ಅದು ಒಂದು ಕಾಲದಲ್ಲಿ ನಿಜವಾಗಿ ನಡೆದ ಘಟನೆಯೊಂದರ ನಿರೂಪಣೆ ಎಂಬ ವಿಶ್ವಾಸ ಅದರಲ್ಲಿರುತ್ತದೆ. ಐತಿಹ್ಯವೆಂದರೆ ಜನಪದರು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಪೌರಾಣಿಕ ಅಥವಾ ಇತಿಹಾಸದ ಘಟನೆಗಳನ್ನು ತಮ್ಮದೇ ಶೈಲಿಯಲ್ಲಿ ನಿರೂಪಿಸುವುದಕ್ಕೆ, ಗುರುತಿಸುವುದಕ್ಕೆ ಐತಿಹ್ಯ[೧೩] ಎನ್ನುವರು. ಪರಂಪರೆಯಿಂದ ಬಂದ ಕೆಲವು ಐತಿಹ್ಯಗಳು ವರ್ತಮಾನಕ್ಕೆ, ಭವಿಷ್ಯತ್ತಿಗೆ ಮುಂದುವರೆಯುತ್ತವೆ. ಐತಿಹ್ಯಗಳು ಜನಪದರ ದೃಷ್ಟಿಯಿಂದ ಅಭಿವ್ಯಕ್ತಗೊಂಡಿರುತ್ತವೆಯಲ್ಲದೆ, ಚಿಂತನೆಯ ಪ್ರಭಾವವಿರುತ್ತದೆ.

ಐತಿಹ್ಯವೆಂದರೆ ಮೌಖಿಕ ಸಂಪ್ರದಾಯದಲ್ಲಿ ಉಳಿದುಕೊಂಡು ಬಂದಿರುವ ಹಿಂದೆ ವಾಸ್ತವವಾಗಿ ನಡೆದದ್ದೇ ಎಂಬುದಾಗಿ ಅದರ ಪ್ರಸಾರಕರಿಗೆ ವಿಶ್ವಾಸವಿರುವ ಘಟನೆಗಳ ಗದ್ಯ ರೂಪದ ನಿರೂಪಣೆ. ಒಂದು ದೃಷ್ಟಿಯಲ್ಲಿ ಇದು ಜನಪದ ಇತಿಹಾಸ. ಇಲ್ಲಿ ಲಿಖಿತಗಳೇನೂ ಇರುವುದಿಲ್ಲ. ಇತರ ಲಿಖಿತ ದಾಖಲೆಗಳಿಗೂ ಐತಿಹ್ಯದಲ್ಲಿ ಹೇಳಲಾಗುವ ವಿಚಾರಗಳಿಗೂ ಕೆಲವೊಮ್ಮೆ ಸಾಮ್ಯ-ಸಂಬಂಧ

ಕಂಡುಬರುವುದು. ಇನ್ನೂ ಕೆಲವು ಬಾರಿ ಇವೆರಡೂ ತೀರಾ ವ್ಯತಸ್ತವೇ ಆಗಿದ್ದು ಕಾಣಬರುತ್ತದೆ. ಕೆಲವು ಐತಿಹ್ಯಗಳಲ್ಲಿ ನೈಜ ಘಟನೆಯ ಸಣ್ಣ ಎಳೆಯೊಂದು ಮಾತ್ರವಿದ್ದು, ಅದರ ಸುತ್ತ ಕಲ್ಪಿತಾಂಶಗಳು ಹಚ್ಚಿಕೊಂಡಿರುತ್ತವೆ. ಒಂದು ದೃಷ್ಟಿಯಿಂದ ನೋಡಿದರೆ ಇತಿಹಾಸ ಮತ್ತು ಸಾಹಿತ್ಯ ಇವೆರಡರ ಅಂಶಗಳೂ ಇದರಲ್ಲಿವೆ. ಹಿಂದೆ ನಡೆದ, ನಡೆದಿರಬಹುದಾದ, ಕೇಳಿದ ಘಟನೆಯೊಂದರ ಪುನರ್‌ಸೃಷ್ಟಿ ಇದಾಗಿದ್ದರೂ ಇಂದು ಐತಿಹ್ಯಕ್ಕೂ ಇತಿಹಾಸ ರಚನೆಗೆ ಒಂದು ಆಕರವಾಗಿ ಬಳಕೆಯಾಗುವ ಸ್ಥಾನ ದೊರೆತಿದೆ.[೭೪]

ವಿಐತಿಹ್ಯಗಳುಹಿ ಲಿಖಿತ ಚರಿತ್ರೆಯಲ್ಲಿಲ್ಲದ ಎಷ್ಟೋ ಅಂಶಗಳನ್ನು, ಸನ್ನಿವೇಶ-ಘಟನೆಗಳನ್ನು ಒಳಗೊಂಡಿದ್ದು, ಈ ನಿಟ್ಟಿನಲ್ಲಿ ನಮ್ಮ ಗಮನ ಸೆಳೆಯುತ್ತವೆ. ನಾಡಿನ ಭೌಗೋಳಿಕ ಸ್ಥಿತಿ-ಗತಿಗಳ ಬಗೆಗೆ, ಇಲ್ಲಿ ನೆಲೆಸಿದ್ದ ಪೂರ್ವಿಕರ ಬಗೆಗೆ, ಇಲ್ಲಿಗೆ ಆಕ್ರಮಣ ನಡೆಸಿ ಇಲ್ಲಿನ ಮೂಲಸ್ಥರಿಂದ ರಾಜ್ಯಾಧಿಕಾರವನ್ನು ಕಿತ್ತುಕೊಂಡವರ ಬಗೆಗೆ, ಇಲ್ಲಿನ ಹಿಂದಿದ್ದ ರೀತಿ-ರಿವಾಜುಗಳ ಬಗೆಗೆ, ಧರ್ಮ-ನಂಬಿಕೆಗಳ ಬಗೆಗೆ ಅವು ಬೆಳಕು ಚೆಲ್ಲುತ್ತವೆ. ಗ್ರಂಥಸ್ಥ ಚರಿತ್ರೆಗಳಲ್ಲಿ ಅವುಗಳಿಗೆ ಮೂಲವಾದ ಶಿಷ್ಟ ಆಕರಗಳಲ್ಲಿ ಉಲ್ಲೇಖಿತರಾದವರು ಮಾತ್ರ ಇತಿಹಾಸ ಪುರುಷರಲ್ಲ (ವ್ಯಕ್ತಿಗಳಲ್ಲಿ). ಇತರರಲ್ಲಿಯೂ ಅದಕ್ಕಿಂತ ಹೊರತಾದ ಗುಣಗಳನ್ನು ಮೊದಲಾದವುದನ್ನು ತಿಳಿಯಬೇಕಿದ್ದಲ್ಲಿ ನಾವು ಐತಿಹ್ಯಗಳಂತಹ ಮೌಖಿಕ ಆಕರಗಳಿಗೆ ಮೊರೆ ಹೋಗಬೇಕಾಗುತ್ತದೆ.

ಹಿಂದೆ ಘಟಿಸಿದ ರಚನಾತ್ಮಕವೆನಿಸಬಲ್ಲ, ಅಂದಿನ ಕಾಲದ ಉದಾತ್ತ ಜೀವನವನ್ನು, ಸಂಸ್ಕೃತಿಯನ್ನು ಎತ್ತಿ ತೋರಿಸಬಲ್ಲ ಇಂದಿನ ಸತ್ ಸಮಾಜದ ರಚನೆಗೆ ಪ್ರೇರಿತವಾಗಬಲ್ಲ ಎಷ್ಟೋ ಘಟನೆ ಸಂಗತಿಗಳು ಚರಿತ್ರೆಯಲ್ಲಿ ದಾಖಲಾಗದೇ ಹೋದುದುಂಟು. ಕೇವಲ ರಾಜಕೀಯ ಚರಿತ್ರೆಯ ಭಾಗವಾಗಿಯಷ್ಟೇ ನಮ್ಮಲ್ಲಿ ಹಿಂದಿನ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ, ಆರ್ಥಿಕ, ಇತ್ಯಾದಿ ವ್ಯವಸ್ಥೆಗಳು ಚಿತ್ರಣವಾಗಿರುವುದು ಶೋಚನೀಯ ಸಂಗತಿಯಾಗಿದೆ. ರಾಜಮಹಾರಾಜರುಗಳು, ಅಧಿಕಾರಿಗಳ ರಾಜಕೀಯ ಜೀವನಕ್ಕಿಂತ ಹೊರಗೂ ಬೃಹತ್ತಾದ ಜೀವನ ಪ್ರವಾಹವೊಂದಿತ್ತು. ಅದಕ್ಕೂ ಅದರದ್ದೇ ಆದ ಇತಿಹಾಸವೊಂದಿತ್ತು. ಅದನ್ನು ತಿಳಿಯದೇ ಚರಿತ್ರೆ ಅಧ್ಯಯನ ಪರಿಪೂರ್ಣವೆನಿಸುವುದಿಲ್ಲ.

ಒಬ್ಬ ಚರಿತ್ರೆಕಾರ ಸಂದಿಗ್ಧ ಸ್ಥಿತಿಯಲ್ಲಿದ್ದಾಗ ಇಂತಹ ಐತಿಹ್ಯಗಳು ಕೆಲವೊಮ್ಮೆ ಸ್ಪಷ್ಟವಲ್ಲದಿದ್ದರೂ ಅಸ್ಪಷ್ಟ ಬೆಳಕನ್ನು ಚೆಲ್ಲಿ ಸಂಶೋಧಕರಿಗೆ ನೆರವಾಗುತ್ತವೆ. ಹೀಗಾಗಿ ಚರಿತ್ರೆಕಾರ ಚರಿತ್ರೆಗಾಗಿ ಕೆಲವೊಮ್ಮೆ ಐತಿಹ್ಯಗಳನ್ನು ಆಧರಿಸಬೇಕಾಗುತ್ತದೆ. ಐತಿಹ್ಯಗಳು ಎಂದೆಂದಿಗೂ ಇತಿಹಾಸ ಮಟ್ಟಕ್ಕೆ ಏರಲಾರವು. ಕೆಲ ಐತಿಹ್ಯಗಳಿಗೆ ವಿಚಿತ್ರ ಕಲ್ಪನೆ, ಬುಡವಿಲ್ಲದ ಊಹೆಗಳು ಆಧಾರವಾಗಿ ನಿಲ್ಲಬಹುದು. ಇಂತಹ ಐತಿಹ್ಯಗಳು ಜನರಲ್ಲಿ ಭಕ್ತಿ, ಗೌರವ, ಭಾವುಕತೆಯನ್ನು ಹುಟ್ಟಿಸುವುದೇ ಮುಖ್ಯ ಗುರಿಯಾಗಿರುತ್ತದೆ.[೭೫] ಇಂಥಲ್ಲಿ ಸತ್ಯಾಸತ್ಯತೆ, ಚರಿತ್ರೆ ಮುಂತಾದವುಗಳನ್ನು ಶೋಧಿಸುವುದು ತಪ್ಪಾಗುತ್ತದೆ.

ಪ್ರಾಚೀನ ಸಂಸ್ಕೃತಿಯ ಅಧ್ಯಯದಲ್ಲೂ ಐತಿಹ್ಯಗಳು ಬಹುಮುಖ್ಯವಾದ ಪಾತ್ರ ವಹಿಸುತ್ತವೆ. ರಾಜ-ರಾಣಿಯರ ಕಥೆಗಳಲ್ಲಿ ಪ್ರಾಚೀನ ಅರಸರಿಗೆ ಸಂಬಂಧಿಸಿದ ಐತಿಹ್ಯಗಳೆನಿಸಿವೆ. ಇಂದು

ಕಾಣುವ ಕೋಟೆ, ಕೊತ್ತಳು, ದುರ್ಗ ಹೀಗೆ ಅದರ ಕುರಿತು ಹೇರಳ ಐತಿಹ್ಯ ನಮ್ಮ ಸೃಷ್ಟಿಯಲ್ಲಿ ಇದ್ದೇ ಇವೆ. ಇವು ಆ ಕಾಲದ ವ್ಯಕ್ತಿಯ ಸಮಾಜದ ಒಂದು ಚರಿತ್ರೆಯನ್ನೇ ಒದಗಿಸುತ್ತವೆ. ಇಲ್ಲಿರುವ ಒಂದೊಂದು ಕಲ್ಲಿನ ದಿಣ್ಣೆಗೂ ಒಂದೊಂದು ಐತಿಹ್ಯವಿದೆ.

ಒಂದು ಸಾಂಸ್ಕೃತಿಕ ಚರಿತ್ರೆಯನ್ನು ದೇವಾಲಯ, ಸ್ಮಾರಕ, ಶಾಸನ, ನಾಣ್ಯ, ಶಿಲ್ಪ, ಕೆರೆ-ಬಾವಿ, ಚಿತ್ರ ಮುಂತಾದ ಗೋಚರ ರೂಪದ ಆಕರಗಳಂತೆ ಮೌಖಿಕ ರೂಪದಲ್ಲಿ ಉಳಿದುಕೊಂಡು ಬಂದಿರುವ ಜನಪದ ಸಾಹಿತ್ಯದ ರೂಪಗಳಾದ ಐತಿಹ್ಯಗಳು, ಗಾದೆಗಳು ಒಡಪು, ಹಾಡು, ಕಥೆ, ಮುಂತಾದವುಗಳ ಸಹಾಯದಿಂದಲೂ ಕಟ್ಟಬಹುದಾಗಿದೆ.[೨೬] ಅಂದರೆ ಇತಿಹಾಸದ ರಚನೆಗೆ ಆಕರಗಳಾದ ಶಾಸನ, ಸ್ಮಾರಕಗಳು, ನಾಣ್ಯಗಳು, ಹಸ್ತಪ್ರತಿಗಳು, ಮಾಸ್ತಿಕಲ್ಲು, ವೀರಗಲ್ಲು, ಶಿಲ್ಪಗಳು ಇತ್ಯಾದಿ ನೆರವಾದರೆ, ಆ ಆಕರಗಳ ಹುಟ್ಟಿನ ಇತಿಹಾಸವನ್ನು ಐತಿಹ್ಯಗಳು ಬಿಚ್ಚಿಬಿಡುತ್ತವೆ. ಹೀಗಾಗಿ ಐತಿಹ್ಯಗಳು ಇತಿಹಾಸದ ಆಕರಗಳು ಹೌದು, ಆಕರಗಳ ಇತಿಹಾಸವೂ ಹೌದು.

ಗವಗಣೇಶ್ವರ ದೇವಾಲಯದ ನಿರ್ಮಾಣದ ಐತಿಹ್ಯ

ಕನ್ನಡ ನಾಡನ್ನು ವೈಭವದಿಂದ ಆಳಿದ ರಾಷ್ಟ್ರಕೂಟರ ಎರಡನೆಯ ಗೋವಿಂದನ ಆಳ್ವಿಕೆಯ ಎರಡು ಶಾಸನಗಳನ್ನು ಗವಗಣೇಶ್ವರ ದೇವಾಲಯದ ಅವಶೇಷಗಳಾದ ಕಲ್ಲಿನ ಕಂಬಗಳ ಮೇಲೆ ಕೆತ್ತಲಾಗಿದೆ. ಈ ಶಾಸನಗಳ ಪ್ರಕಾರ ಈ ದೇವಾಲಯವು ಸುಮಾರು ೯ನೇ ಶತಮಾನಕ್ಕೆ (ಕ್ರಿ.ಶ. ೮೧೫) ಸೇರಿದೆ ಎಂದು ತಿಳಿದುಬರುತ್ತದೆ. ನೊಳಂಬರ ರಾಜರುಗಳಲ್ಲಿ ಶ್ರೀ ಪೃಥ್ವೀವಲ್ಲಭ ಪರಮೇಶ್ವರ ಪಲ್ಲವಾದಿ ಪತ್ನಿ 'ಗವಗಣಾಂಬೆ' ಎಂಬ ರಾಣಿಯು ವಿಮದರಿಕಲ್ಲಹಿನ್ನು (ಚಿಕ್ಕ ಮಧುರೆ ಮತ್ತು ಹಿರೇ ಮಧುರೆ) ರಾಜಧಾನಿಯಾಗಿಟ್ಟುಕೊಂಡು ಈ ಪ್ರಾಂತ್ಯವನ್ನು ಆಳುತ್ತಿರುವಾಗ ಶಿವನ ದೇವಾಲಯವನ್ನು ಕಟ್ಟಿಸಿ 'ಗವಗಣೇಶ್ವರ' ದೇವಾಲಯವೆಂದು ಹೆಸರಿಸಿರುವುದು ಶಾಸನದಲ್ಲಿ ಉಲ್ಲೇಖವಾಗಿದೆ.

ಆತನಯ್ಯಿರ್ಗ್ಗವಗಣಬ್ಬೆ ಮದರಿಕ
ಲ್ಲೊಳ್ಗವಗಣೇಶ್ವರಮೆಮ್ಬುದು ಶಿವಾ
ಲಯಮೆ ಮಾಡಿಸಿದ ಅದಕೆ ಕೊಟ್ಟ
ಪ್ರಮಾಣ ಮೊಡುಕಗೆ ಯ್ಯೂರಜಮ
ಪನ್ನಿರ್ಮ್ಮತ್ತಲ್ತ - ವರಿಹಾರಕಿ - ಯಮ
ಹರಿಕಲ್ಲಕೆಯ್ಯೂ ಎಣ್ಬು ಮತ್ತಲ್ಯೆವಸಾನ್ತಿ
-ಮುದ - ಗೆಯು - ಕನಾಲತ

ತರುವಾಯ ಅವರ ಪುತ್ರ ಪಲ್ಲವಮಲ್ಲನು ಈಶ್ವರನ ಕರುಣೆಯಿಂದ ಅಧಿಪತಿಯಾಗಿ ವೈಭವದಿಂದ ಆಳುತ್ತಿದ್ದಾಗ ಈ ದೇವಾಲಯದ ಶ್ರೇಯೋಭಿವೃದ್ಧಿಗೆಂದು ೧೨ ಮತ್ತರು (೪೮ ಎಕರೆ) ಭತ್ತ ಬೆಳೆಯುವ ಭೂಮಿಯನ್ನು ದಾನ ಮಾಡಿದ್ದಾನೆಂದು ಶಾಸನದಿಂದ ತಿಳಿದುಬರುತ್ತದೆ. ಈ ದೇವಾಲಯಕ್ಕೆ ಈಗ ಮಲ್ಲೇಶ್ವರ, ಮಲ್ಲಿಕಾರ್ಜುನ ದೇವಾಲಯ ಎಂದು ಕರೆಯುತ್ತಿದ್ದಾರೆ.

ಚಳ್ಳಕೇರಮ್ಮ ದೇವಿಯ ಕುರಿತು ಐತಿಹ್ಯ

ಚಳ್ಳಕೆರೆ ಪಟ್ಟಣದಲ್ಲಿ ನೆಲೆಸಿರುವ ಈ ದೇವಿಯ ಮೂಲ ನೆಲೆಯ ಕುರಿತು ಒಂದು ಐತಿಹ್ಯವಿದೆ. ದೇವಿಯು ಶಾಕ್ತ ಪಂಥದ ದೈವವಾಗಿದ್ದಾಳೆ. ಚಳ್ಳಕೆರೆಮ್ಮನನ್ನು ಚಿತ್ರದುರ್ಗದ ಪಾಳೆಯಗಾರರ ವಂಶಸ್ಥರಾದ ದೊಡ್ಡ ಮದಕರಿನಾಯಕನು ತಮ್ಮ ಪ್ರಾಂತ್ಯ ಪತನಾನಂತರ, ತಮ್ಮ ಮನೆ ದೇವತೆಯಾದ ಉತ್ಸವಾಂಬೆ (ಉಚ್ಚಂಗಿಯಲ್ಲಮ್ಮ)ಯ ಅಂಶವನ್ನು ತಂದು ಚಳ್ಳಕೆರೆಯಲ್ಲಿ ಪ್ರತಿಷ್ಠಾಪಿಸಿದನಂತೆ. ಇಲ್ಲಿನ ಚಳ್ಳಕೆರೆಮ್ಮನಿಗೂ ಇಲ್ಲಿಯ ಪಾಳೆಯಗಾರ ಅರಸು ಮನೆತನಕ್ಕೂ ಅನೇಕ ಸಂಪ್ರದಾಯಗಳು ತಳಕು ಹಾಕಿಕೊಂಡಿವೆ.

ಹಿರಿಯರು ಹೇಳುವ ಐತಿಹ್ಯದಂತೆ ಈಕೆಯನ್ನು ಚಿತ್ರದುರ್ಗದಿಂದ ಬಂಡಿಯ ಮೇಲೆ ತರಲಾಯಿತಂತೆ. ಹಿಂದೆ ಅಲೆಮಾರಿಗಳಾಗಿದ್ದ ಜನ ತಮ್ಮೊಂದಿಗೆ ತಮ್ಮ ದೇವರುಗಳನ್ನು ವಿಶೇಷ ಪಟ್ಟಿಗೆಗಳಲ್ಲಿ ಇಟ್ಟು ತಮ್ಮ ಜೊತೆಯಲ್ಲೇ ಒಯ್ಯುತ್ತಿದ್ದರಿಂದ ಅವುಗಳಿಗೆ 'ಪೆಟ್ಟಿಗೆ ದೇವರುಗಳು' ಎಂದು ಕರೆಯುವುದು ರೂಢಿಯಲ್ಲಿದೆ. ಹೀಗಾಗಿ ಚಳ್ಳಕೇರಮ್ಮ ಮೂಲತಃ ಇಂತಹ ಪೆಟ್ಟಿಗೆ ದೇವರೇ ಆಗಿದೆ. ಹೀಗೆ ವಲಸೆ ಬಂದ ಈಕೆಯನ್ನು ತಂದು ಈಗಿದ್ದ ಜಾಗದಲ್ಲಿ ಪ್ರತಿಷ್ಠಾಪಿಸಿದಂತೆ ತೋರುತ್ತದೆ. ಚಳ್ಳಕೆರೆಗೆ ಬಂದು ನೆಲೆಸಿದ ಅಮ್ಮ ಸ್ಥಳೀಯರೊಂದಿಗೆ ಕೂಡಿಕೊಂಡು ಚಳ್ಳಕೇರಮ್ಮ ಆಗಿದ್ದಾಳೆ. ಚಳ್ಳಕೆರೆಯ ಹುಟ್ಟಿನ ನಂತರ ಈಕೆ ಇಲ್ಲಿಗೆ ಬಂದವಳಾದುದರಿಂದ ಚಳ್ಳಕೇರಮ್ಮನೆಂಬ ಹೆಸರನ್ನು ಸಹಜವಾಗಿ ಪಡೆದಿದ್ದಾಳೆ.

ಇನ್ನೊಂದು ಕಥೆಯ ಪ್ರಕಾರ ಈ ಗ್ರಾಮ ದೇವತೆ ಮೂಲತಃ ಒಬ್ಬ ಬ್ರಾಹ್ಮಣನ ಹೆಣ್ಣು. ಈಕೆಯ ಸೌಂದರ್ಯಕ್ಕೆ ಮನಸೋತ ದಲಿತನೊಬ್ಬ ಸುಳ್ಳು ಹೇಳಿ ಮದುವೆಯಾಗಿ ಸಂಸಾರ ಮಾಡುತ್ತಾನೆ. ನಾಲ್ಕಾರು ಹೆಣ್ಣುಮಕ್ಕಳನ್ನು ಪಡೆದ ಮಗನನ್ನು ಹುಡುಕುತ್ತಾ ಬಂದ ದಲಿತನ ತಾಯಿಯಿಂದ ಸತ್ಯ ತಿಳಿದು ಹತಾಶಳಾದ ಹೆಣ್ಣು ಅಗ್ನಿ ಪ್ರವೇಶ ಮಾಡಿ ಸತ್ತು, 'ಶಕ್ತಿ'ಯಾಗಿ ಜನಿಸಿದಳಂತೆ. ತನ್ನ ಗಂಡನ ಮೇಲೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಕೋಣನ ರೂಪದಲ್ಲಿ ಗಂಡನನ್ನು ಬಲಿ ತೆಗೆದುಕೊಂಡರೆ, ಗಾವು ಮರಿ, ಹೂಳು ಮರಿ ಮುಂತಾದ ರೂಪದಲ್ಲಿ ಮಕ್ಕಳ ಬಲಿಯನ್ನು ತೆಗೆದುಕೊಳ್ಳುತ್ತಾಳೆ. ಈ ಕಥೆಯೇ ಈಗ ಆಚರಣೆಯಲ್ಲಿ ರೂಪುಗೊಂಡಿರುವುದನ್ನು ಗಮನಿಸಬಹುದು.

ಚಳ್ಳಕೇರಮ್ಮ ಜಲಧಿಗೆಂದು 'ದೊಡ್ಡೇರಿ'ಗೆ ಹೋಗುತ್ತದೆ. ಇದು ಹಿಂದೆ ಅಲ್ಲಿದ್ದ ಪಾಳೆಯಗಾರರ ಸಂಬಂಧವನ್ನು ಸೂಚಿಸುವಂತೆ ಕಾಣುತ್ತದೆ. ಅಲ್ಲಿಂದ ಬಂದ ನಂತರ ಹಿಂದಿನ ಜಾತ್ರೆಯ ವೇಳೆಗೆ ಕೋಣನ ಬಲಿಯ ಮೂಲಕ ಗಂಡನನ್ನು ಕಳೆದುಕೊಂಡು ವಿಧವೆಯಾಗಿದ್ದ ಅಮ್ಮನಿಗೆ ಪಾಳೆಯಗಾರರ ವಂಶಸ್ಥರೇ ಮಾಂಗಲ್ಯಧಾರಣೆ ಮಾಡುತ್ತಾರೆ. ಇದನ್ನೇ ವಿತಾಳಿ ಭಾಗ್ಯಹಿ ಕೊಡುವ ಸಂಪ್ರದಾಯವೆಂದು ಕರೆಯಲಾಗುತ್ತದೆ. ಕೋಣನ ಬಲಿಯ ನಂತರ ಆ ಕೋಣನ ನೆಣದಿಂದಲೇ ಅಮ್ಮನ ಗುಡಿಯ ಮುಂದಿನ ದೀಪಸ್ತಂಭದ ಕೆಳಗಿರುವ ನೇತ್ರಸ್ತಂಭದಲ್ಲಿ ದೀಪ ಉರಿಸುತ್ತಾರೆ. ಮರುದಿನ ಪೋತ ರಾಜರು ಗಾವು ಸಭೆ ನಡೆಸಿ, ಗಾವು ಸಿಗಿಯುತ್ತಾರೆ. ಇತಿಹಾಸದ ಐತಿಹ್ಯವೊಂದು ಈ ಬಗೆಯ ಆಚರಣೆಗಳ ಮೂಲಕ ಅನುಸಂಧಾನ ಮಾಡುವ ಪರಿಯೇ ಜಾತ್ರೆಯಾಗಿದೆ.

ಹೊಸಗುಡ್ಡದ ಐತಿಹ್ಯ

ಚಳ್ಳಕೆರೆಯಿಂದ ವಾಯುವ್ಯಕ್ಕೆ ೨೪ಕಿ.ಮೀ ದೂರವಿರುವ ರಾಮದುರ್ಗ ಗುಡ್ಡವೇ ಸ್ಥಳೀಯವಾಗಿ 'ಹೊಸಗುಡ್ಡ'ವೆಂದು ಕರೆಯಲ್ಪಡುತ್ತಿದೆ. ಈ ಗುಡ್ಡ ಹತ್ತಿ ಮೇಲೆ ಹೋದರೆ ನಾಯಕನ ಹಟ್ಟಿಯ ಪಾಳೆಯಗಾರರ ಕಾಲಕ್ಕೆ ಸೇರಿದ್ದ ಎರಡು ಸುತ್ತಿನ ಶಿಥಿಲಾವಸ್ಥೆಯಲ್ಲಿರುವ ಕೋಟೆಯಿದೆ. ಈ ಕೋಟೆಯನ್ನು ಪ್ರವೇಶಿದ ಕೂಡಲೇ ಎಲ್ಲರೂ ಕೂಡ ಕೋಟೆಯೊಳಗೆ ಇರುವ ಸಣ್ಣ ಸಣ್ಣ ಕಲ್ಲುಗಳಿಂದ ಚಿಕ್ಕ ಮನೆಗಳನ್ನು ಕಟ್ಟುತ್ತಾರೆ ಈ ಮನೆಗಳನ್ನು ಮೂರು ಕಲ್ಲುಗಳಿಂದ ನಿರ್ಮಾಣ ಮಾಡುತ್ತಾರೆ. ಹೀಗೆ ಮಾಡಿದರೆ ನಿಜ ಜೀವನದಲ್ಲಿ ಕೂಡ ಮನೆಯನ್ನು ಕಟ್ಟಿಸುವರೆಂದು ಜನರ ನಂಬಿಕೆ.

ಇದೇ ಗುಡ್ಡದ ಮೊದಲನೆಯ ಸುತ್ತಿನ ಕೋಟೆಯ ಒಳಗೆ ಪಶ್ಚಿಮ ದಿಕ್ಕಿಗೆ ಹೆಬ್ಬಂಡಿಯಲ್ಲಿ ಕೊರೆದು ನಿರ್ಮಿಸಿರುವ ರಾಮಲಿಂಗೇಶ್ವರ ಗುಹಾಲಯವಿದೆ. ಈ ಗುಹಾಲಯದ ಎದುರು ಒಂದು ಆಲದ ಮರ ಇದೆ. ವಿಶಿಷ್ಟ ಸಂಗತಿಯೆಂದರೆ ಮರದ ರಂಬೆಗೆ ಅಥವಾ ಕಾಂಡಕ್ಕೆ ಬಟ್ಟೆ ತುಂಡು ಅಥವಾ ಪ್ಲಾಸ್ಟಿಕ್ ಪೇಪರ್‌ನಲ್ಲಿ ಒಂದು ಚಿಕ್ಕ ಕಲ್ಲು ಹಾಕಿ ಮರಕ್ಕೆ ಕಟ್ಟಿದರೆ ನಮ್ಮ ಮನದ ಬಯಕೆ ಈಡೇರುವುದು ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಆದ್ದರಿಂದ ಈ ಗುಡ್ಡಕ್ಕೆ ಬಂದವರೆಲ್ಲಾ ಬಟ್ಟೆಯಲ್ಲಿ, ಪೇಪರ್‌ನಲ್ಲಿ ಕಲ್ಲು ಕಟ್ಟಿ ಹೋಗುತ್ತಾರೆ. ಇದರಿಂದ ನಮ್ಮ ಮನದ ಬಯಕೆ ಈಡೇರಿ ನಾವು ಬಯಸಿದ್ದು ಸಿಗುತ್ತದೆ ಎಂಬ ನಂಬಿಕೆಯಿದೆ.

ಜಗಲೂರಜ್ಜನ ಐತಿಹ್ಯ

ಚಳ್ಳಕೆರೆ ಪಟ್ಟಣದಿಂದ ಪಶ್ಚಿಮಕ್ಕೆ ೨ಕಿ.ಮೀ ದೂರದಲ್ಲಿರುವ ಜಗಲೂರು ಪಾಪನಾಯಕನ ಕುರಿತು ಐತಿಹ್ಯವೊಂದಿದೆ. ಮ್ಯಾಸಬೇಡರು ದೈವಸ್ಥಾನಕ್ಕೆ ಈ ವ್ಯಕ್ತಿಯನ್ನು ಏರಿಸಿದ್ದಾರೆ. ಈ ವ್ಯಕ್ತಿಯು ಸುಮಾರು ೩೦೦-೪೦೦ ವರ್ಷಗಳ ಹಿಂದೆ ತಮ್ಮ ವೃತ್ತಿಯಾದ ಪಶುಪಾಲನೆಯನ್ನು ಮಾಡಿಕೊಂಡು ಇಲ್ಲಿಯೇ ಒಂದು ವಿಪೌಳಿಹಿಯನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದನಂತೆ. ಈತನು ವೈಷ್ಣವ ಪಂಥದ ಸಂತನೆಂದು ತಿಳಿಯುತ್ತಾರೆ. ಈತನ ಬಗ್ಗೆ ಇರುವ ದಂಥಕತೆಯಲ್ಲಿ ಇವನು ತಿರುಪತಿ ತಿಮ್ಮಪ್ಪನ ಭಕ್ತನಾಗಿದ್ದು, ಅಲ್ಲಿಗೆ ಯಾತ್ರೆ ಹೋಗಿ ಬಂದಿದ್ದಾಗಿಯೂ ತಿಳಿದುಬರುತ್ತದೆ. ಈತನನ್ನು ಮ್ಯಾಸಬೇಡರು ತಮ್ಮ ಆರಾಧ್ಯ ದೈವವೆಂದು ಆರಾಧಿಸುತಿದ್ದಾರೆ.

ಬೋರೆ ದೇವರ ಕುರಿತು ಐತಿಹ್ಯ

ಚಳ್ಳಕೆರೆ ಪಟ್ಟಣದಿಂದ ನಾಯಕನ ಹಟ್ಟಿಗೆ ಹೋಗುವ ಹಾದಿಯಲ್ಲಿ ಕುಧಾಪುರ ಎಂಬ ಗ್ರಾಮದ ಬಳಿ ಬೋರೆದೇವರ ಗುಡಿಯಿದೆ. ಇದೂ ಮ್ಯಾಸಬೇಡರ ದೇವತೆಯೇ ಆಗಿದೆ. ಗರ್ಭಗುಡಿಯಲ್ಲಿ ಕುದುರೆಯ ಮೇಲೆ ಕುಳಿತ ವೀರನೊಬ್ಬನ ವಿಗ್ರಹ, ಅದರ ಬಳಿಯೇ ಭೂಮಿಯಲ್ಲೂ ಹೂತ ಒಂದು ಬಂಡೆಗಲ್ಲು ಇದೆ. ಈ ಬಂಡೆಗಲ್ಲು ಭೂಮಿಯಿಂದಲೇ ಉದ್ಭವವಾಗಿ ಬೆಳೆಯುತ್ತಲೇ ಇದೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಇದರ ಕುರಿತು ಐತಿಹ್ಯವು ಈ ಕೆಳಗಿನಂತಿದೆ.

ಆದಿಯಲ್ಲಿ ಶ್ರೀಶೈಲದ ಕಡೆಯಿಂದ ಬೇಡನಾಯಕ ಕಂಪಳವೊಂದು ಚಿತ್ರದುರ್ಗದ ಸೀಮೆಯ ಕಡೆಗೆ ಬಂದಿತು. ಹಾಗೆ ಬಂದು ಬೀಡು ಬಿಟ್ಟ ಊರು ಊಟಕುಂಟೆ, ಅರಿವಿನದಿಬ್ಬಗ್ರಾಮ. ಅಲ್ಲಿ ಪಳೆಯಗಾರನಾಗಿದ್ದವನು ಕೊಳಗಳ ಬೊಮ್ಮನಾಯಕ: ಇವನಿಗೆ ಯಾರೇ ಆಗಲೀ ತಲೆಗಂದಾಯ, ಗಡಿಗೆ ತುಪ್ಪ ತಂದುಕೊಟ್ಟು ಬದುಕ ಬೇಕಿತ್ತಂತೆ. ಆದ್ದರಿಂದ ಅಲ್ಲಿ ನೆಲೆಸಿದ್ದ ಶ್ರೀಶೈಲದ ಕಡೆಯಿಂದ ಬಂದ ಬೇಡನಾಯಕರು ತಾವು ನೆಲೆಸಿದ್ದ ಜಾಗವನ್ನು ಬಿಟ್ಟು ಈ ಬೋರೆದೇವರ ಹಟ್ಟಿಯ ಬಯಲಲ್ಲಿ ಪೌಳಿ ಕಟ್ಟಿಕೊಂಡು ಇಲ್ಲಿಯೇ ಬೀಡುಬಿಟ್ಟರು.

ಪಾಳೆಯಗಾರನಿಗೆ ಹೆದರಿಕೊಂಡು ಬೇರೆ ಕಡೆ ಹೋಗಬಾರದೆಂದು ನಿರ್ಧರಿಸಿ ದೇವರ ದಯೆಯಿಂದ ಪಾಳೆಯಗಾರರ ದಬ್ಬಾಳಿಕೆ ಅಡಗಲಿ ಎಂದು ಮಲಗಿದರಂತೆ. ಹೀಗೆ ಗುಂಪಿನ ಯಜಮಾನ ಮಲಗಿರುವಾಗ ರಾತ್ರಿಯ ಹೊತ್ತಿನಲ್ಲಿ ತಲೆಗೇನೋ ಒತ್ತಿದಂತಾಯಿತು. ಎದ್ದು ನೋಡಿದರೆ ಕಲ್ಲು. ಅದೇ ಸ್ಥಳದಲ್ಲಿ ಬೆಳಗಾಗುವ ಹೊತ್ತಿಗೆ ಲಿಂಗ ಉದ್ಭವಿಸಿತ್ತು. ಈಗಲೂ ಈ ಲಿಂಗ ಬೆಳೆಯುತ್ತಲೇ ಇದೆಯೆಂದು ಎಲ್ಲರ ನಂಬಿಕೆ. ನಂತರ ಬೋರೇದೇವರು ಅಲ್ಲಿ ನೆಲೆಸಿದ್ದ ಎಲ್ಲಾ ಪಶುಪಾಲಕ ಬೇಡ ಪಾಳೆಯವನ್ನು ರಕ್ಷಿಸಿದ ಎಂಬುದು ನಂಬಿಕೆ. ಆದರೆ ಭೂಮಿಯಿಂದ ಮೇಲೆದ್ದು ಕಾಣುವ ಬೋರೆದೇವರಿಗಿಂತ ಅವರ ಬಳಿಯಿರುವ ತುರುಗೋಳ ಹಿನ್ನೆಲೆಯ ವೀರನದೇ ನೆನಪಿನ ದೇವಾಲಯ ಅದಿರಬೇಕೆಂದು ಕಾಣುತ್ತದೆ.[೧೬]

ಗಂಜಿಗಟ್ಟೆ ಸ್ಥಳದ ಐತಿಹ್ಯ

ಚಳ್ಳಕೆರೆ ಪಟ್ಟಣದಿಂದ ನೈರುತ್ಯಕ್ಕೆ ಇರುವ ಈ ಗ್ರಾಮದ ಹೆಸರಿನ ಕುರಿತು ಐತಿಹ್ಯವೊಂದಿದೆ. ಅದೇನೆಂದರೆ ಒಮ್ಮೆ ಈ ಸ್ಥಳದಲ್ಲಿ ರಾಜ ಹಾಗೂ ಸೈನಿಕರು ಬೀಡುಬಿಟ್ಟು ಆಹಾರ ತಯಾರಿಸಿದ್ದರಂತೆ. ಆಹಾರವನ್ನು ತಯಾರಿಸುವಾಗ ಅಕ್ಕಿ ಪಾತ್ರೆಯಿಂದ ಗಂಜಿ ಉಕ್ಕಿ ಸುರಿದುದರಿಂದ ಗಂಜಿಗಟ್ಟೆ ಎಂಬ ಹೆಸರು ಬಂದಿತೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ ಈ ಸ್ಥಳದಲ್ಲಿ ಶಿಲಾಯುಗ ಸಂಸ್ಕೃತಿಗೆ ಸೇರಿದ ಪ್ರಾಚ್ಯಾವಶೇಷಗಳು ಕಂಡುಬಂದಿದ್ದು ಇಲ್ಲಿ ಶಿಲಾಯುಗದ ಜನರು ಬದುಕನ್ನು ಸವೆಸಿದರು ಎಂದು ನಮಗೆ ಆಧಾರ ಸಮೇತ ತಿಳಿದುಬರುತ್ತದೆ. ಈ ರಾಜನು ಬೀಡುಬಿಟ್ಟಿರುವ ಕುರಿತು ಇರುವ ಐತಿಹ್ಯ ಎಷ್ಟರ ಮಟ್ಟಿಗೆ ನಿಜವೆಂದು ಯೋಚಿಸಬೇಕಾಗಿದೆ.

ದೊಡ್ಡೇರಿ ನಿರ್ಮಿಸಿದ ಪಾಳೆಯಗಾರ ತಿಪ್ಪಣ್ಣನಾಯಕನ ಐತಿಹ್ಯ

ತಿಪ್ಪಣ್ಣನಾಯಕನು ಹರತಿ, ನಿಡುಗಲ್ಲು ಪಾಳೆಯಗಾರರ ಮೂಲ ಪುರುಷನು. ಇವನು ಬಿಜಾಪುರದ ವಿಜಯಾಪುರ ಪ್ರಾಂತ್ಯದವನು. ಇವನು ಕ್ಷತ್ರಿಯ ಕುಲಕ್ಕೆ ಸೇರಿದವನು. ಇವನ ಬಾಲ್ಯದ ಕುರಿತಂತೆ ಈತನು ಸೂರ್ಯ ದೇವನಿಂದ ತಿಮ್ಮರಾಜ ಪುತ್ರಿಯಲ್ಲಿ ಜನಿಸಿದನೆಂದು ಪ್ರತೀತಿಯಿದೆ. ಈತನು ದೊಡ್ಡವನಾದ ಮೇಲೆ ಶ್ರೀಕೃಷ್ಣದೇವರಾಯನಲ್ಲಿ ಕೆಲಸಕ್ಕೆ ಸೇರಿದನಂತೆ. ಆಗ ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯನ ಆಸ್ಥಾನದಲ್ಲಿ ಹುಲಿಗಳ ಕುಸ್ತಿ ನಡೆಯಿತಂತೆ. ಆ ಗುಂಪಿನಿಂದ ತಪ್ಪಿಸಿಕೊಂಡ ಹುಲಿಯೊಂದು ದನಕರುಗಳ ನಡುವೆ ನುಗ್ಗಲು, ತಿಪ್ಪಣ್ಣನಾಯಕನು

ತನ್ನ ಕೊಡಲಿಯಿಂದ ಅದನ್ನು ಹೊಡೆದುಕೊಂದನು. ಮತ್ತೊಂದು ಸಂದರ್ಭದಲ್ಲಿ ಪ್ರಸಿದ್ಧನಾದ ಜಟ್ಟಿಯನ್ನು ಸೋಲಿಸಿ ಕೊಂದನು. ಇದರಿಂದ ಇವನು ಕೃಷ್ಣದೇವರಾಯನ ಪ್ರೀತಿಗೆ ಪಾತ್ರನಾದನು. ಆದ್ದರಿಂದ ಶ್ರೀ ಕೃಷ್ಣದೇವರಾಯನು ಇವನ ಶೌರ್ಯಕ್ಕೆ ಮೆಚ್ಚಿ ಈತನಿಗೆ ತಿಪ್ಪಣ್ಣನಾಯಕ ಎಂಬ ಹೆಸರನ್ನು ಮತ್ತು ಚಿತ್ರದುರ್ಗದ ಪೂರ್ವ ಭಾಗದ ಹೊಸ ರಾಜ್ಯವನ್ನೂ ವಹಿಸಿದನು.

ಇದರಂತೆ ಮಾಚಿಸಮುದ್ರ, ಗೋಸಿಕೆರೆ, ಚಳ್ಳಕೆರೆ ಪ್ರಾಂತ್ಯಗಳು ಒಳಗೊಂಡಂತೆ ಇವೆಲ್ಲಾ ಇವನ ರಾಜ್ಯವಾದವು, ದೊಡ್ಡೇರಿ, ಹರತಿ ಮುಂತಾದ ಊರುಗಳನ್ನು ತನ್ನ ಪೂರ್ವಿಕರ ನೆನಪಿಗಾಗಿ ಕಟ್ಟಿಸಿದನು. ಚಿತ್ರದುರ್ಗದಿಂದ ಪಾವಗಡ, ಮೊಳಕಾಲ್ಮೂರುವಿನಿಂದ ಶಿರಾದವರೆಗೆ ಇವನ ರಾಜ್ಯ ವಿಸ್ತಾರವಿದ್ದಿತು.[೧೭] ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಯಾವುದೇ ಮನೆತನದ ಮೂಲ ಪುರುಷನ ಮೂಲವನ್ನು ದೈವತ್ವಕ್ಕೆ ಏರಿಸಿ ಹೇಳಲಾಗುತ್ತದೆ. ಇಲ್ಲಿಯೂ ಕೂಡ ಇವನ ಮೂಲವನ್ನು ಕುರಿತು ಸೂರ್ಯದೇವನಿಂದ ಜನಿಸಿದನು ಎಂದು ಹೇಳಲಾಗಿದೆ. ಅದೇ ರೀತಿ ಅವನು ಪರಾಕ್ರಮಿ ಎಂದು ತೋರಿಸಲು ಹುಲಿಯನ್ನು ಕೊಂದ ಉದಾಹರಣೆಯನ್ನು ಕೂಡ ಇಲ್ಲಿ ನೀಡಲಾಗಿದೆ. ಹಾಗೆಯೇ ಈ ಐತಿಹ್ಯವು ಐತಿಹಾಸಿಕ ಸತ್ಯವನ್ನು ಒಳಗೊಂಡಿದೆ ಎಂಬುದಕ್ಕೆ ಈ ವಿಷಯದ ಕುರಿತು ಆಧಾರಗಳು ದೊರೆಯುತ್ತವೆ.

ಅಡಿಟಿಪ್ಪಣಿಗಳು:

೧. ರಮೇಶ ನಾಯಕ (ಸಂ): ೨೦೦೭, ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು.ಸಂ. ೫೦

೨. ಲಕ್ಷ್ಮಣ ತೆಲಗಾವಿ (ಸಂ): ೨೦೦೬, ಚರಿತ್ರೆ ಅಧ್ಯಯನ, ಸಂಪುಟ ೧, ಸಂಚಿಕೆ-೨, ಪು.ಸಂ. ೧, ೨

೩. ಲಕ್ಷ್ಮಣ್ ತೆಲಗಾವಿ (ಸಂ): ೨೦೦೩, ಸ್ಥಳೀಯ ಚರಿತ್ರೆ, ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪು.ಸಂ. ೨೫

೪. ಲಕ್ಷ್ಮಣ್ ತೆಲಗಾವಿ (ಸಂ): ಚರಿತ್ರೆ ಅಧ್ಯಯನ, ಪೂರ್ವೋಕ, ಪು.ಸಂ. ೬

೫. ಲಕ್ಷ್ಮಣ್ ತೆಲಗಾವಿ (ಸಂ): ಚರಿತ್ರೆ ಅಧ್ಯಯನ, ಪೂರ್ವೋಕ್ತ, ಪು.ಸಂ. ೬

೬. ರಮೇಶ ನಾಯಕ (ಸಂ): ಪೂರ್ವೋಕ್ತ, ಪು.ಸಂ. ೫೧

೭. ಕೃಷ್ಣಮೂರ್ತಿ ಹನೂರು (ಸಂ): ೨೦೦೫, ಸಾವಿರದ ಸಿರಿಬೆಳಗು, ಪು.ಸಂ. ೨

೮. ಅದೇ: ಪು.ಸಂ. ೩

೯. ಅದೇ: ಪು.ಸಂ. ೮

೧೦. ಅದೇ: ಪು.ಸಂ. ೨೦

೧೧. ಅದೇ: ಪು.ಸಂ. ೩೦

೧೨. ಕ್ಯಾತನಹಳ್ಳಿ ರಾಮಣ್ಣ (ಸಂ): ೧೯೭೬, ಬೀದರ್ ಜಿಲ್ಲೆಯ ಜಾನಪದ ಕಥೆಗಳು, ಪ್ರಸ್ತಾವನೆ, ಪು.ಸಂ. ೪

೧೩. ಲಕ್ಷ್ಮಣ್ ತೆಲಗಾವಿ (ಸಂ): ಸ್ಥಳೀಯ ಚರಿತ್ರೆ ಪೂರ್ವೋಕ್ತ, ಪು.ಸಂ. ೨೭

೧೪. ಕನ್ನಡ ವಿಷಯ ವಿಶ್ವಕೋಶ: ೧೯೭೦, ಸಂಪುಟ – ೩, ಪು.ಸಂ. ೨೫೮

೧೫. ಸುಬ್ಬಣ್ಣ ರೈ: ೧೯೯೪, ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು, ಪು.ಸಂ. ೮೭

೧೬. ಅದೇ : ಪು.ಸಂ. ೨೦೧

೧೭. ಬಸವರಾಜಪ್ಪ .ಜೆ.ಎನ್: ೨೦೦೩, ದೊಡ್ಡೇರಿ ಇತಿಹಾಸ ದರ್ಶನ, ಪು.ಸಂ. ೪೪

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ : ಆರು

ಸಮಾರೋಪ

ಪ್ರಸ್ತುತ ಚಳ್ಳಕೆರೆ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನದ ವಿಷಯದ ಕುರಿತು ಈವರೆಗೆ ವಿವರವಾದ ಅಧ್ಯಯನಗಳು ನಡೆದೇ ಇಲ್ಲವೆಂದು ಹೇಳಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಅಂತಹ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮೂಡಲಾಗಿದೆ. ಈ ಪರಿಸರದ ಸ್ಥಳೀಯ ಚರಿತ್ರೆಯನ್ನು ವಿಶ್ಲೇಷಣಾತ್ಮಕ ಹಾಗೂ ವಿವರಣಾತ್ಮಕವಾಗಿ ಕಟ್ಟಿಕೊಡುವ ಪ್ರಯತ್ನದ ಹಿನ್ನಲೆಯಲ್ಲಿ ವ್ಯಾಪಕವಾದ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು.

ಕ್ಷೇತ್ರಕಾರ್ಯದ ಮೂಲಕ ಪರಿಸರದಲ್ಲಿನ ಪ್ರಾಗಿತಿಹಾಸ ಕಾಲದ ನೆಲೆಗಳು, ಚಾರಿತ್ರಿಕ ಕಾಲಘಟ್ಟದ ದೇವಾಲಯಗಳು, ಮೂರ್ತಿಶಿಲ್ಪಗಳು, ಶಾಸನಗಳು, ರಕ್ಷಣಾ ವಾಸ್ತುಶಿಲ್ಪ, ಕೆರೆ-ಕಟ್ಟೆಗಳು ಕುರಿತು ಅಧ್ಯಯನ ನಡೆಸಲಾಯಿತು. ಒಟ್ಟಾರೆಯಾಗಿ ಈ ಪರಿಸರದ ಚರಿತ್ರೆಯನ್ನು ಸಮಗ್ರವಾಗಿ ರಚಿಸುವ ಸಲುವಾಗಿ ಸೂಕ್ಷ್ಮ ಸಂಗತಿಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಪ್ರಾಗಿತಿಹಾಸ ಕಾಲದಿಂದಲೂ ಇತ್ತೀಚಿನ ಕಾಲದವರೆಗೆ ಈ ಪ್ರದೇಶದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಮಾನವ ತನ್ನ ಪ್ರಭಾವ ಬೀರಿರುವುದು ಈ ಪರಿಸರದ ಅಧ್ಯಯನದಿಂದ ತಿಳಿದುಬರುತ್ತದೆ.

ಪ್ರಸ್ತುತ ಅಧ್ಯಯನದ ವಿಷಯವನ್ನು ಆಯ್ದುಕೊಂಡು ವಿವರವಾದ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಈ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದಿಂದ ಹಿಡಿದು ಇತಿಹಾಸ ಆರಂಭ ಕಾಲದವರೆಗಿನ ನೆಲೆಗಳಿದ್ದು, ಅವುಗಳನ್ನು ಈಗಾಗಲೇ ಪತ್ತೆ ಹಚ್ಚುವ ಕಾರ್ಯ ನಡೆದಿದೆ. ಈ ಪರಿಸರದ ಬೆಟ್ಟಗಳಲ್ಲಿ ಪ್ರಾಚೀನ ಮಾನವನು ಬಿಡಿಸಿದ ಬಯಲು ಬಂಡೆ ರೇಖಾ ಚಿತ್ರಗಳನ್ನು ನಾವು ಕಾಣಬಹುದಾಗಿದೆ. ನನ್ನ ಅಧ್ಯಯನದ ಸಂದರ್ಭದಲ್ಲಿ ಒಂದು ನೂತನ ಶಿಲಾಯುಗದ ನೆಲೆಯನ್ನು ಹುಡುಕುವ ಪ್ರಯತ್ನ ಮಾಡಲಾಗಿದೆ. ಈ ಪ್ರದೇಶದಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದ ಆಯುಧಗಳು ಹಾಗೂ ಮಡಿಕೆ ಚೂರುಗಳನ್ನು ಸಂಗ್ರಹಿಸಲಾಗಿದೆ. ಈ ನೆಲೆಯು ಬಹುತೇಕ ಹಾಳಾಗಿದ್ದು ಆಧುನಿಕ ಮಾನವನ ವಿಸ್ತೃತ ಕೃಷಿ ಚಟುವಟಿಕೆಗಳಿಂದ ತಮ್ಮ ಮೂಲ ಸ್ವರೂಪ ಕಳೆದುಕೊಂಡಿವೆ. ಇದರಿಂದ ಈ ಪ್ರದೇಶದಲ್ಲಿ ಸೂಕ್ಷ್ಮ ಶಿಲಾಯುಗದಿಂದ ಮಾನವನು ನೆಲೆಸಿರುವುದನ್ನು ಗಮನಿಸಬಹುದಾಗಿದೆ.

ಚಾರಿತ್ರಿಕ ಕಾಲಘಟಕ್ಕೆ ಸಂಬಂಧಿಸಿದಂತೆ ಮೌರ್ಯರು, ಶಾತವಾಹನರು, ಚಾಲುಕ್ಯರು, ಚೋಳರು, ನೊಳಂಬರು, ಹೊಯ್ಸಳರು, ವಿಜಯನಗರದ ಅರಸರು ಹಾಗೂ ಸ್ಥಳೀಯ ಪಾಳೆಯ

ಪಟ್ಟುಗಳು, ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿರುವುದು ಕಂಡುಬಂದಿದೆ. ಇದಕ್ಕೆ ಪುರಾವೆಯಾಗಿ ಅವರ ಕಾಲದ ಶಾಸನಗಳು, ದೇವಾಲಯಗಳು, ಕೋಟೆ, ಕೊತ್ತಲುಗಳು ನಮಗೆ ಕಂಡುಬರುತ್ತಿವೆ. ಪ್ರಸ್ತುತ ಅಧ್ಯಯನದಲ್ಲಿ ಈ ಪರಿಸರದ ಚರಿತ್ರೆಯನ್ನು ವಿವರಣಾತ್ಮಕವಾಗಿ ತಿಳಿಸುವ ಪ್ರಯತ್ನಮಾಡಲಾಗಿದೆ.

ಈ ಪರಿಸರದಲ್ಲಿ ಸಿಕ್ಕಿರುವ ಶಾಸನಗಳು ಮಾತ್ರ ವಿರಳವೆನ್ನಬಹುದು. ಆದರೂ ಶಾಸನಗಳಿಂದ ಈ ಭಾಗದ ಆಡಳಿತ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಹಾಗೂ ಇನ್ನಿತರ ಚಟುವಟಿಕೆಗಳನ್ನು ತಿಳಿಯಬಹುದಾಗಿದೆ. ಇಲ್ಲಿ ಲಭ್ಯವಾದ ಅತಿ ಪ್ರಾಚೀನ ಶಾಸನವೆಂದರೆ ಚಿಕ್ಕಮಧುರೆ ಶಾಸನ. ಇಲ್ಲಿ ದೊರಕಿರುವ ಶಾಸನಗಳು ರಾಷ್ಟ್ರಕೂಟರ ಸಾಮಂತರಾಗಿ ನೊಳಂಬವಾಡಿ ೩೨೦೦೦ವನ್ನು ಆಳುತ್ತಿದ್ದ ನೊಳಂಬರೆಂದು, ಹಿಂದೆ ಈ ಚಿಕ್ಕ ಮಧುರೆ ಮತ್ತು ಹಿರೆಮಧುರೆ ಪ್ರಾದೇಶವನ್ನು 'ಮದರಿಕಲ್ಲು' ಎಂದು ಕರೆಯುತ್ತಿದ್ದದು ಶಾಸನದಲ್ಲಿ ಉಲ್ಲೇಖವಿರುವ ವಿವರದಿಂದ ತಿಳಿಯಬಹುದಾಗಿದೆ. ಇಲ್ಲಿ ಲಭ್ಯವಿರುವ ಶಾಸನಗಳು ನೊಳಂಬರು, ಕಲ್ಯಾಣ ಚಾಲುಕ್ಯರು, ಚೋಳರು ಹಾಗೂ ವಿಜಯನಗರದ ಅರಸರಿಗೆ ಸಂಬಂಧಿಸಿದ್ದು ಅವರ ಆಡಳಿತ ಅವಧಿಯ ಮಾಹಿತಿಯನ್ನು ತಿಳಿಸಿಕೊಡುತ್ತವೆ. ಅಲ್ಲದೆ ಈ ಶಾಸನಗಳು ಆಡಳಿತ ವ್ಯವಸ್ಥೆಯಲ್ಲಿ ಸಹಾಯ ಮಾಡಿದ ಮಹಾ ಮಂಡಳೇಶ್ವರರು, ಮಂಡಳೇಶ್ವರರು, ಸಾಮಂತ ಅಧಿಕಾರಿಗಳ ಕುರಿತು ವಿವರಣೆಯನ್ನು ತಿಳಿಸಿಕೊಡುತ್ತವೆ.

ಪ್ರಸ್ತುತ ಪರಿಸರದ ಸುತ್ತಮುತ್ತಲಿನ ಪ್ರದೇಶದಲ್ಲಿ ಹಲವಾರು ವೀರಗಲ್ಲು, ಮಾಸ್ತಿಕಲ್ಲುಗಳು ಲಭ್ಯವಿದ್ದು ಅವುಗಳನ್ನು ಪ್ರಾದೇಶಿಕ ಸ್ಥಳೀಯ ಚರಿತ್ರೆಗೆ ಆಕರಗಳಾಗಿ ಗಮನಿಸಲಾಗಿದೆ. ಈ ವೀರಗಲ್ಲುಗಳು ಅಂದಿನ ಸಾಮಾಜಿಕ ಜೀವನದ ಚಿತ್ರಣವನ್ನು ನೀಡುತ್ತವೆ. ಜೊತೆಗೆ ಅಂದಿನ ರಾಜ್ಯ ವ್ಯವಸ್ಥೆಯಲ್ಲಿ ಯುವಕರು ಮಾಡಬೇಕಾದ ಮೂಲಭೂತ ಕರ್ತವ್ಯಗಳನ್ನು ಪ್ರತಿಪಾದಿಸುತ್ತಾ, ಮುಂದಿನ ಪೀಳಿಗೆಯ ಯುವಕರ ಪಾತ್ರವೇನೆಂಬುದನ್ನು ತಿಳಿಸುತ್ತವೆ. ಮಾಸ್ತಿಕಲ್ಲುಗಳು ಅಂದಿನ ಸಮಾಜದಲ್ಲಿದ್ದ ಸಾಮಾಜಿಕ ಪದ್ಧತಿ, ಸ್ತ್ರೀಯರ ಸ್ಥಾನಮಾನ ಮುಂತಾದವುಗಳನ್ನು ಬೋಧಿಸುತ್ತವೆ.

ಪ್ರಸ್ತುತ ಪರಿಸರದಲ್ಲಿ ಆಡಳಿತ ನಡೆಸಿದ ರಾಜ ಮನೆತನಗಳೆಲ್ಲಾ ಕೂಡ ಧರ್ಮಶ್ರದ್ಧೆ ಮತ್ತು ಧಾರ್ಮಿಕ ಸಹಿಷ್ಣುತೆಯನ್ನು ಪಾಲಿಸಿಕೊಂಡು ಬಂದಿರುವುದು ಶಾಸನಾಧಾರಗಳಿಂದ ನಮಗೆ ಗೊತ್ತಾಗುತ್ತದೆ. ಇಲ್ಲಿ ಶೈವ ಪ್ರಭಾವ ಹೆಚ್ಚಿದ್ದರೂ ಕೂಡ ವೈಷ್ಣವ, ಜೈನ ಪಂಥಾಚರಣೆಗಳು ಅಸ್ತಿತ್ವದಲ್ಲಿರುವುದು ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳಲ್ಲಿ ಅಭಿವ್ಯಕ್ತವಾಗಿದೆ. ಇವುಗಳ ಅಧ್ಯಯನದಿಂದ ಮೊದಲು ಶೈವ ಧರ್ಮದ ಪ್ರಭಾವಾವಿದ್ದರೂ ಅನಂತರ ಹೊಯ್ಸಳರ, ವಿಜಯನಗರದ ಅರಸರ ಕಾಲದಲ್ಲಿ ವೈಷ್ಣವ ಧರ್ಮ ಹೆಚ್ಚು ಪ್ರಭಾವ ಶಾಲಿಯಾಗಿದ್ದಿತೆಂದು ತಿಳಿಯಬಹುದಾಗಿದೆ. ಶೈವ, ಕಾಳಾಮುಖ, ವೈಷ್ಣವ ಶಕ್ತಿ ಧರ್ಮಗಳಿಗೂ ದೇವತೆಗಳಿಗೂ ಭಕ್ತಿಯಿಂದ ನಡೆದುಕೊಂಡು ಆ ಧರ್ಮಗಳ ಸಂರಕ್ಷಣೆ ಹಾಗೂ ಪುರೋಭಿವೃದ್ಧಿಯನ್ನು ಸಾಧಿಸಿದಂತೆ ಕಾಣುತ್ತದೆ.

ಪಾಳೆಯಗಾರರು ಬೇಡರಾಗಿದ್ದಾಗ್ಯೂ ಸಹ ಬ್ರಾಹ್ಮಣರನ್ನು ತಮ್ಮ ಗುರುಗಳನ್ನಾಗಿ ಒಪ್ಪಿ ಅವರನ್ನು ಅನುಸರಿಸುತ್ತಿದ್ದರೆಂದು ತಿಳಿದು ಬರುತ್ತದೆ. ಇವರ ಕಾಲದಲ್ಲಿ ಕಟ್ಟಲ್ಪಟ್ಟ ದೇವಾಲಗಳಲ್ಲಿ ಶೈವ ಮತವನ್ನು ಪ್ರತಿನಿಧಿಸುವ ಕೆಲವು ಶಿಲ್ಪಗಳು ಕಂಡುಬರುತ್ತವೆ. ಈ ಪರಿಸರದಲ್ಲಿ ಲಭ್ಯವಿರುವ ಶಾಸನಗಳಿಂದ ಅಂದಿನ ಆರ್ಥಿಕ ಸ್ಥಿತಿಗತಿಯನ್ನು ತಿಳಿಯಲಾಗಿದೆ. ಅಂದು ಪ್ರಚಲಿತದಲ್ಲಿದ್ದ ಕೃಷಿ ಪದ್ಧತಿ, ನೀರಾವರಿ ವ್ಯವಸ್ಥೆ, ಕೆರೆ ಕಾಲುವೆಗಳ ಪಾತ್ರ, ವ್ಯಾಪಾರ ವಹಿವಾಟು, ತೂಕ–ಅಳತೆಗಳ ಸಹಾಯದಿಂದ ಅವರ ಆರ್ಥಿಕ ಪದ್ಧತಿಯನ್ನು ತಿಳಿಯಲಾಯಿತು. ಈ ಪ್ರದೇಶವು ಬಯಲು ಸೀಮೆಯಾದ್ದರಿಂದ ಪ್ರಾಚೀನ ಕಾಲದಿಂದಲೂ ಈ ಭಾಗದಲ್ಲಿ ಕೃಷಿಗೆ ಕೆರೆ, ಕಟ್ಟೆ, ಬಾವಿಗಳನ್ನು ಅವಲಂಭಿಸಿರುವುದುನ್ನು ಕಾಣಬಹುದಾಗಿದೆ.

ಈ ಪರಿಸರದಲ್ಲಿ ಆಳ್ವಿಕೆ ಮಾಡಿದಂತಹ ಅರಸರು ಸಾಕಷ್ಟು ದೇವಾಲಯಗಳನ್ನು ನಿರ್ಮಿಸುವಲ್ಲಿ ಹಿಂದೇಟು ಹಾಕಿರುವುದು ಕಂಡುಬರುತ್ತದೆ. ಇಲ್ಲಿನ ದೇವಾಲಯಗಳು ಹೆಚ್ಚಾಗಿ ಪಾಳೆಯಗಾರರ ಅವಧಿಯಲ್ಲಿ, ದ್ರಾವಿಡ ವಾಸ್ತುಶೈಲಿಯಲ್ಲಿ ನಿರ್ಮಾಣಗೊಂಡಿವೆ. ಈ ಅಧ್ಯಯನದಲ್ಲಿ ಆ ದೇವಾಲಯಗಳ ರಚನೆ, ವಾಸ್ತುಶೈಲಿ ಮುಂತಾದ ಸೂಕ್ಷ್ಮ ವಿಷಯಗಳನ್ನು ಅರಿಯುವ ಪ್ರಯತ್ನ ಮಾಡಲಾಗಿದೆ. ಅದೇ ರೀತಿ ಈ ಪರಿಸರದಲ್ಲಿ ಮೂರ್ತಿಶಿಲ್ಪಗಳು ಲಭ್ಯವಾದ ಪ್ರಮಾಣದಿಂದ ಇವುಗಳು ಕಲ್ಯಾಣಿ ಚಾಲುಕ್ಯರ ಕಾಲದಿಂದ ಪಾಳೆಯಗಾರರ ಕಾಲದಲ್ಲಿ ನಿರ್ಮಿಸಲ್ಪಟ್ಟ ಶಿಲ್ಪಾವಶೇಷಗಳಾಗಿವೆ. ಇವುಗಳ ರಚನೆಯಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಒಂದು ರಾಜ್ಯಾಂಗದ ಸಪ್ತಾಂಗಗಳಲ್ಲಿ ಕೋಟೆಯು ಒಂದಾಗಿದೆ. ಈ ಪರಿಸರದಲ್ಲಿ ಕೋಟೆ–ಕೊತ್ತಲುಗಳನ್ನು ಗಮನಿಸಲಾಗಿದೆ. ಇವುಗಳಲ್ಲಿ ಗಿರಿದುರ್ಗಗಳೂ ಸೇರಿವೆ. ಅದರಲ್ಲಿ ಸಾಣಿಕೆರೆಯ ಕೋಟೆ, ರಾಮದುರ್ಗದ ಕೋಟೆ ತಕ್ಕಮಟ್ಟಿಗೆ ಸುಸ್ಥಿತಿಯಲ್ಲಿವೆ. ಕೋಟೆಗಳು ಬೇಚಾರಕ್ ಗ್ರಾಮದ ಮತ್ತು ಪ್ರಸ್ತುತ ಜನವಸತಿಗಳಿರುವ ಗ್ರಾಮಗಳಲ್ಲಿಯೂ ಇವೆ. ಅಂದು ರಾಜ್ಯದ ಕೊನೆಯ ಘಟಕ ಗ್ರಾಮವಾಗಿದ್ದು, ರಕ್ಷಣೆಗೆ ಕೋಟೆ ಕೊತ್ತಲಗಳನ್ನು ಕಟ್ಟಿ ಅದರಿಂದ ವಿರೋಧಿಗಳ ಚಲನವಲನಗಳನ್ನು ಗಮನಿಸುತ್ತಿದ್ದರು.

ಪ್ರಸ್ತುತ ಅಧ್ಯಯನ ಪ್ರದೇಶದಲ್ಲಿ ಎರಡು ಪ್ರಧಾನವಾದ ಬುಡಕಟ್ಟು ಸಮುದಾಯಗಳು ನೆಲೆಸಿದ್ದು ಅವರು ತಮ್ಮ ಪೂರ್ವಿಕರ ಕುರಿತು ಹಲವು ಮೌಖಿಕ ಕಥನಗಳನ್ನು, ಐತಿಹ್ಯಗಳನ್ನು ಕಟ್ಟಿ ಉಳಿಸಿಕೊಂಡು ಬಂದಿದ್ದಾರೆ. ಈ ಪ್ರದೇಶದಲ್ಲಿ ಮ್ಯಾಸಬೇಡರ ಮತ್ತು ಕಾಡುಗೊಲ್ಲರ ಬುಡಕಟ್ಟು ಸಮುದಾಯಗಳು ನೆಲೆಗೊಂಡಿವೆ. ಈ ಬುಡಕಟ್ಟಿನ ಜನ ಇತರರಿಗಿಂತಲೂ ಭಿನ್ನವಾಗಿ ಗುರುತಿಸಿಕೊಂಡಿದ್ದಾರೆ. ಜೊತೆಗೆ ಅವರ ಹಲವು ಸಾಂಸ್ಕೃತಿಕ ಆಚರಣೆಗಳನ್ನು ಇಂದಿಗೂ ಉಳಿಸಿಕೊಂಡು ಬಂದಿರುವುದನ್ನು ಗಮನಿಸಲಾಗಿದೆ. ಈ ಪ್ರದೇಶದಲ್ಲಿ ನಾಡಿನಲ್ಲಿ ಹೆಸರು ಪಡೆದಿರುವ ವ್ಯಕ್ತಿಗಳು ನೆಲೆಸಿದ್ದು, ಅಧ್ಯಯನದ ಸಂದರ್ಭದಲ್ಲಿ ಅವರನ್ನು ಸಂದರ್ಶಿಸಿ ನಿಖರವಾದ ಮಾಹಿತಿಯನ್ನು ಪಡೆದು ವಿಶ್ಲೇಷಿಸಲಾಗಿದೆ. ಅಲ್ಲದೆ ಐತಿಹ್ಯ ಹಾಗೂ ಮೌಖಿಕ ಕಥನಗಳಲ್ಲಿ ಅಡಗಿರುವ ಐತಿಹಾಸಿಕ ವಿಷಯವನ್ನು ಪ್ರಸ್ತುತಪಡಿಸಲಾಗಿದೆ.

೧ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಫಲಿತಗಳು ಅಧ್ಯಯನ ಸಂದರ್ಭದಲ್ಲಿ ಕಂಡುಬಂದವು ವಿಶೇಷವಾಗಿ ಹೊಸ ಪ್ರಾಚೀನ ನೆಲೆಗಳನ್ನು ಗುರುತಿಸಲಾಯಿತು. ಜೊತೆಗೆ ಇಲ್ಲಿರುವ ಶಾಸನಗಳು, ದೇವಾಲಯಗಳು ಮೂರ್ತಿಶಿಲ್ಪ, ಕೋಟೆ ಕೊತ್ತಲುಗಳು ಹಾಗೂ ಕೆರೆ, ಕಟ್ಟೆಗಳನ್ನು ಸಮಗ್ರ ಅಧ್ಯಯನಕ್ಕೆ ಒಳಪಡಿಸಲಾಯಿತು. ಈ ಹಿಂದಿನ ಅಧ್ಯಯನಗಳು ಹೆಚ್ಚಿನ ಸಮಗ್ರತೆಯನ್ನು ಪಡೆದಿಲ್ಲ ಎಂಬ ಹಿನ್ನಲೆಯಿಂದ ಇಂತಹ ಕೊರತೆಯನ್ನು ನೀಗಿಸುವ ಪ್ರಯತ್ನವನ್ನು ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದ ಮೂಲಕ ಲಭ್ಯವಿರುವ ಪುರಾತತ್ವ ಆಕರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಚರಿತ್ರೆಯನ್ನು ನಿರ್ಮಿಸುವ ಪ್ರಯತ್ನವನ್ನು ಮಾಡಲಾಗಿದೆ. ಚಾರಿತ್ರಿಕ ಘಟ್ಟಕ್ಕೆ ಸಂಬಂಧಿಸಿದಂತೆ ಶಾಸನಗಳನ್ನು ಕ್ರಮಬದ್ಧವಾದ ಹಾಗೂ ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಲಾಗಿದೆ. ದೇವಾಲಯಗಳು, ಕೋಟೆ ಕೊತ್ತಲುಗಳು, ಕೆರೆ, ಕಟ್ಟೆಗಳ ಕುರಿತು ವ್ಯವಸ್ಥಿತ ಅಧ್ಯಯನ ಕೈಗೊಳ್ಳಲಾಗಿದೆ. ಅಧ್ಯಯನದ ಮುಖ್ಯ ಉದ್ದೇಶವೆಂದರೆ ಚಳ್ಳಕೆರೆ ತಾಲ್ಲೂಕು ಪರಿಸರದ ಸಾಂಸ್ಕೃತಿಕ ಮಹತ್ವವನ್ನು, ಮರೆತು ಹೋಗಿರುವ ಚಾರಿತ್ರಿಕ ವಿಷಯಗಳನ್ನು ಪುನರ್ ಪರಿಶೀಲಿಸಿ ಈ ಪ್ರದೇಶದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಾಗೂ ಸ್ಥಳೀಯ ಚರಿತ್ರೆಯ ಮಹತ್ವವನ್ನು ತಿಳಿಸಲು ಈ ಸಂಪ್ರಂಬಂಧದ ರಚನೆಯಲ್ಲಿ ಪ್ರಯತ್ನ ಮಾಡಲಾಗಿದೆ.

ಆದರೆ ಪ್ರಸ್ತುತ ಅಧ್ಯಯನವೇ ಅಂತಿಮವಲ್ಲ. ಏಕೆಂದರೆ ಈ ಅಧ್ಯಯನದಲ್ಲಿ ವಿವರಿಸಿರುವ ಹೊಸ ಪ್ರಾಗಿತಿಹಾಸದ ಶಿಲಾಯುಗದ ನೆಲೆಗಳನ್ನು ಕೇವಲ ಸ್ಥಳ ಪರಿಶೋಧನೆಯಿಂದ ಮಾತ್ರ ಗುರುತಿಸಿ ಅಲ್ಲಿ ದೊರೆತ ಅವಶೇಷಗಳನ್ನು ವಿವರಿಸಲಾಗಿದೆ. ಈ ನೆಲೆಗಳನ್ನು ಉತ್ಖನನ ಮಾಡಿದರೆ ಹೆಚ್ಚಿನ ಮಾಹಿತಿಯು ದೊರೆಯಬಹುದು. ಈ ಪರಿಸರದಲ್ಲಿನ ಶಿಲಾಯುಗದ ಬಗ್ಗೆ ವ್ಯಾಪಕ ಕ್ಷೇತ್ರಕಾರ್ಯವನ್ನು, ಸೂಕ್ಷ್ಮವಾಗಿ ಸಂಶೋಧನೆಯನ್ನು ಕೈಗೊಳ್ಳುವ ಅವಶ್ಯಕತೆಯಿದೆ. ಈ ಪರಿಸರದಲ್ಲಿರುವ ಧಾರ್ಮಿಕ ವ್ಯವಸ್ಥೆ ಮತ್ತು ಬುಡಕಟ್ಟು ಸಮುದಾಯಗಳ ಕುರಿತು ಹೇರಳವಾಗಿ ಲಭ್ಯವಿರುವ ಮೌಖಿಕ ಕಥನಗಳು ಹಾಗೂ ಐತಿಹ್ಯಗಳ ಕುರಿತು ಅಧ್ಯಯನದ ಅವಶ್ಯಕತೆಯಿದೆ. ಈ ಪರಿಸರದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಯಾದ ಸಮಾಜೋ–ಆರ್ಥಿಕ ಸ್ಥಿತಿಗತಿಗಳನ್ನು ಕುರಿತು ಇನ್ನೂ ವ್ಯಾಪಕವಾದ ಅಧ್ಯಯನ ಕೈಗೊಳ್ಳುವ ಅಗತ್ಯವಿದೆ. .

ಅನುಬಂಧ

- ಗ್ರಂಥಋಣ
- ವಕ್ತೃಗಳ ವಿವರ
- ನಕ್ಷೆಗಳು
- ಛಾಯಾಚಿತ್ರಗಳು

ಗ್ರಂಥ ಋಣ

೧ ಅಪರ್ಣಾ .ಕೂ.ಸ : ದೇವಾಲಯದ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೨ ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ: ಸಂಪುಟ–೧, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೫

೩ ಕಲಬುರ್ಗಿ .ಎಂ.ಎಂ: ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೪

೪ ಕೃಷ್ಣಮೂರ್ತಿ ಹನೂರು: ಮ್ಯಾಸಬೇಡರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೩

೫ ಕೃಷ್ಣಮೂರ್ತಿ ಹನೂರು: ಸಾವಿರದ ಸಿರಿಬೆಳಗು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೫

೬ ಕಾಮತ್ .ಎಸ್.ಯು: ಕರ್ನಾಟಕ ರಾಜ್ಯ ಗೆಜಟಿಯರ್, ಭಾಗ–೩, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೬

೭ ಗಿರಿಜಾ .ಟಿ: ಚಿತ್ರದುರ್ಗಜಿಲ್ಲಾ ದರ್ಶಿನಿ, ರೇಖಾ ಪ್ರಕಾಶನ, ಮೈಸೂರು ಮಠದ ರಸ್ತೆ, ದಾವಣಗೆರೆ, ೧೯೯೧

೮ ಗೋಪಾಲ್ .ಆರ್ (ಸಂ): ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೋಸಪೇಟೆ, ೨೦೦೫

೯ ಚಿದಾನಂದ ಮೂರ್ತಿ .ಎಂ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ, ಮೈಸೂರೂ, ೧೯೭೯

೧೦ ಚಿದಾನಂದ ಮೂರ್ತಿ .ಎಂ: ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು, ಐ.ಬಿ.ಹೆಚ್, ಪ್ರಕಾಶನ, ಬೆಂಗಳೂರು, ೧೯೮೩

೧೧ ತಂಬಂಡ ವಿಜಯ ಪೂಣಚ್ಚ (ಸಂ): ವಿಶ್ವಕೋಶ–೪, ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೧೨ ತಿಪ್ಪಣ್ಣಮರಿಕುಂಟೆ ಬಿ: ಒಂದು ಊರಿನ ಕತೆ, ಬ್ಯಾಲದಕೆರೆ ಪ್ರಕಾಶನ, ನಾಗಮಂಗಲ ತಾ, ಮಂಡ್ಯಜಿಲ್ಲೆ, ೨೦೦೫

೧೩ ತಿಪ್ಪೇರುದ್ರಸ್ವಾಮಿ .ಹೆಚ್: ಕರ್ನಾಟ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು, ೧೯೯೭

೧೪ ದೀಕ್ಷಿತ .ಜಿ.ಎಸ್, ಕುಪ್ಪಸ್ವಾಮಿ ಜಿ.ಆರ್, ಮೋಹನ್ ಎಸ್.ಕೆ: ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦

೧೫ ಪರಶಿವಮೂರ್ತಿ .ಡಿ.ವಿ: ಕನ್ನಡ ಶಾಸನಶಿಲ್ಪಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

೧೬ ಪ್ರಭಾಕರ .ಎಂ.ಎನ್: ದೇವಾಲಯಗಳ ವಾಸ್ತು ಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೨

೧೭ ಪ್ರಭಾಕರ್ .ಎ.ಎಸ್(ಸಂ): ವ್ಯಾಸಬೇಡರ ಕಥನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೯

೧೮ ಬಸವರಾಜಪ್ಪ .ಜೆ.ಎನ್: ದೊಡ್ಡೇರಿ ಇತಿಹಾಸದರ್ಶನ, ಶ್ರೀಬಸವ ಪ್ರಿಯ ಪ್ರಕಾಶನ, ಭದ್ರಾವತಿ, ೨೦೦೩

೧೯ ಮಹದೇವ .ಸಿ: ಕರ್ನಾಟಕದಲ್ಲಿ ಪುರಾತತ್ವ ಶೋಧ, ಶ್ರೀಲಕ್ಷ್ಮಿ ಪ್ರಕಾಶನ, ಶ್ರೀರಂಗಪಟ್ಟಣ, ೨೦೦೧

೨೦ ಮೀರಸಾಬಿಹಳ್ಳಿ ಶಿವಣ್ಣ: ವ್ಯಾಸ ಮಂಡಲ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೧೯೯೫

೨೧ ರಮೇಶನಾಯಕ (ಸಂ): ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೦೭

೨೨ ರಹಮತ್ ತರೀಕೆರೆ: ಕರ್ನಾಟಕದಲ್ಲಿ ನಾಥಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೨೩ ರಹಮತ್ ತರೀಕೆರೆ: ಸಾಂಸ್ಕೃತಿಕ ಅಧ್ಯಯನ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೮

೨೪ ರಾಜಾರಾಮ್ ಹೆಗಡೆ (ಸಂ): ಕೆರೆ ನೀರಾವರಿ ನಿರ್ವಹಣೆ, ಚಾರಿತ್ರಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

೨೫ ರಾಮದಾಸರೆಡ್ಡಿ .ಎಸ್.ಜಿ: ಚಿತ್ರದುರ್ಗ ಜಿಲ್ಲೆಯ ಪ್ರಾಕ್ಚಾರಿತ್ರಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೯

೨೬ ಲಕ್ಷ್ಮಣ್ ತೆಲಗಾವಿ (ಸಂ): ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹಿರಿಯೂರು (ತಾ), ೧೯೮೭

೨೭ ಲಕ್ಷ್ಮಣ್ ತೆಲಗಾವಿ (ಸಂ): ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ಹರಿಯೂರು (ತಾ), ೨೦೦೮

೨೮ ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ ಎಂ.ವಿ (ಸಂ): ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ, ೧೯೭೬

೨೯ ಲಕ್ಷ್ಮಣ್ ತೆಲಗಾವಿ (ಸಂ): ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸರ ಗ್ರಂಥ ಪ್ರಕಟಣಾ ಸಮಿತಿ, ಚಿತ್ರದುರ್ಗ,

೩೦ ಲಕ್ಷ್ಮಣ್ ತೆಲಗಾವಿ (ಸಂ): ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೩೧ ಲಕ್ಷ್ಮಣ್ ತೆಲಗಾವಿ (ಸಂ): ಚರಿತ್ರೆ ಅಧ್ಯಯನ, ಸಂಪುಟ-೧, ಸಂಚಿಕೆ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೬

೩೨ ಲಕ್ಷ್ಮಣ್ ತೆಲಗಾವಿ (ಸಂ): ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪

೩೩ ಲಕ್ಷ್ಮಣ್ ತೆಲಗಾವಿ, ಶ್ರೀನಿವಾಸ .ಎಂ.ವಿ(ಸಂ): ಚಂದ್ರವಳ್ಳಿ, ಜಿಲ್ಲಾ ಇತಿಹಾಸ ಸಂಶೋಧನಾ ಮಂಡಳಿ, ಚಿತ್ರದುರ್ಗ, ೧೯೭೬

೩೪ ವಸು .ಎಂ.ವಿ: ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೩೫ ವಸು .ಎಂ.ವಿ: ಮೌಖಿಕ ಇತಿಹಾಸ, ಅಂಕಿತ ಪುಸ್ತಕ ಬಸವನಗುಡಿ, ಬೆಂಗಳೂರು, ೨೦೦೪

೩೬ ವಾಸುದೇವ ಬಡಿಗೇರ (ಸಂ): ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

೩೭ ವಾಸುದೇವನ್ ಸಿ.ಎಸ್: ಹಂಪಿ ಪರಿಸರದ ಕೆರೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೩೮ ವಿರೂಪಾಕ್ಷಿ ಪೂಜಾರಹಳ್ಳಿ: ಬೇಟೆ ಮತ್ತು ಬೇಡರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ಕೂಡ್ಲಿಗೆ (ತಾ), ೨೦೦೭

೩೯ ವಿರೂಪಾಕ್ಷಿ ಪೂಜಾರಹಳ್ಳಿ: ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೭

೪೦ ವಿರೂಪಾಕ್ಷಿ ಪೂಜಾರಹಳ್ಳಿ: ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

೪೧ ವಿರೂಪಾಕ್ಷಿ ಪೂಜಾರಹಳ್ಳಿ: ವಾಲ್ಮೀಕಿ ಸಿರಿ, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ, ಕೂಡ್ಲಿಗಿ ತಾ, ೨೦೦೬

೪೨ ಶಂಭಾಜೋಷಿ: ಸಂಸ್ಕೃತಿ ಆರಂಭವಾದ ಬಗೆ, ಶಂಭ ಸಂಸ್ಕೃತಿ ಸಂಪುಟ, ಕರ್ನಾಟಕ ಸಂಸ್ಕೃತಿ, ಬೆಂಗಳೂರು, ೧೯೭೬

೪೩ ಶ್ಯಾಮಲ ಸಿ.ಆರ್: ಪೂರ್ವ ಕರ್ನಾಟಕದ ಪಾಳೆಯಗಾರರು, ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೮

೪೪ ಶಿವತಾರಕ ಕೆ.ಬಿ: ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧

೪೫ ಶ್ರೀನಿವಾಸ ಪಾಡಿಗಾರ: ಪುರಾತತ್ವಶಾಸ್ತ್ರ ಪರಿಚಯ, ರಾಮಾಶ್ರಮ ಪಬ್ಲಿಕೇಷನ್ಸ್, ಧಾರವಾಡ, ೧೯೯೭

೪೬ ಶೇಷಶಾಸ್ತ್ರಿ ಆರ್: ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೨

೪೭ ಸಾಣಿಕೆರೆ ರಘು: ಐತಿಹಾಸಿಕ ಕ್ಷೇತ್ರ ಸಾಣಿಕೆರೆ, ಎ.ಕೆ.ಕುದುರಪ್ಪ ಗಾಂಧಿನಗರ, ಚಳ್ಳಕೆರೆ, ೨೦೦೨

೪೮ ಸಿಂದಿಗಿ ರಾಜಶೇಖರ: ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಷನ್ಸ್, ಧಾರವಾಡ, ೧೯೮೮

೪೯ ಸುಂದರ ಅ (ಸಂ): ಕರ್ನಾಟಕ ಚರಿತ್ರೆ ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೭

೫೦ ಸುರೇಶ ಬಿ: ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನಾ ಪ್ರಕಾಶನ, ಬಾಲೇನಹಳ್ಳಿ ಚಳ್ಳಕೆರೆ (ತಾ), ೨೦೦೯

೫೧ ಸೋಮಶೇಖರ ಎಸ್.ವೈ: ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧ ನೀತಿ, ಸಂಚಿಕೆ ಪ್ರಕಾಶನ, ಚಿತ್ರದುರ್ಗ, ೨೦೦೯

೫೨ ಸೋಮಶೇಖರ ಎಸ್.ವೈ: ಜಟಿಂಗ ರಾಮೇಶ್ವರ ದರ್ಶನ, ಸುಮೇಧ ಪ್ರಕಾಶನ, ದೇವಸಮುದ್ರ, ಚಿತ್ರದುರ್ಗ ಜಿಲ್ಲೆ

ಅಪ್ರಕಟಿತ ಸಂಶೋಧನಾ ಪ್ರಬಂಧಗಳು

೧. ತಿಪ್ಪೇಸ್ವಾಮಿ ಎಸ್: ರಕ್ಷಣಾ ವಾಸ್ತುಶಿಲ್ಪ: ಚಿತ್ರದುರ್ಗ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೪

೨. ಸುರೇಶ ಬಿ: ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಗಳ ಪುರಾತತ್ವ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

ಪತ್ರಿಕೆ ಮತ್ತು ವರದಿಗಳು

ಪ್ರಜಾವಾಣಿ

ತುಷಾರ

ಇತಿಹಾಸದರ್ಶನ ಸಂಪುಟಗಳು (ಬೆಂಗಳೂರು)

ಚರಿತ್ರೆ ಅಧ್ಯಯನ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೮

ಚಿತ್ರದುರ್ಗ ಜಿಲ್ಲೆಯ ಅಂಕಿ ಅಂಶಗಳ ನೋಟ ೨೦೦೪-೦೫, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ, ಚಿತ್ರದುರ್ಗ

ವೀರ ಸಂಕಲ್ಪ, ಸ್ಮರಣ ಸಂಚಿಕೆ, ಶ್ರೀ ವೀರಭದ್ರಸ್ವಾಮಿ ದೇವಸ್ಥಾನ, ಚಳ್ಳಕೆರೆ, ೨೦೦೧

ಆಂಗ್ಲಭಾಷೆಯ ಪುಸ್ತಕಗಳು

1 Bukanan: A Journey from Madras Throgh the Countries of Mysore, Canara and Malabar, Vol-III, Londan, 1807

2 Hayavadana Rao C: Mysore Gazetteer, B.R.Publishing corporation, Delhi, 1984

3 Mysore Archaeological Reports, 1928-1946, Mysore State, Mysore.

4 Rice B.L: Mysore Gazetteer, Vol-II, Govt of Mysore, Mysore, 1897

5 Rice B.L: Ephigraphia Carnatica -XI, 1903

6 Sri Sathyan B.N: Mysore State Gazetteer, Chitradurga District, The Governament press, Bangalore, 1967

7 Suryanath U. Kamath (Editor): Karnataka State Gazetteer, part-3 Government of Karnataka, Publications, Bangalore, 1986

ವಕ್ತೃಗಳ ವಿವರ


ಕ್ರಸಂ.	ಹೆಸರು	ವಯಸ್ಸು	ವೃತ್ತಿ	ಊರು
೧.	ಬೆಳೆಗೆರೆ ಕೃಷ್ಣಶಾಸ್ತ್ರಿಗಳು	೯೪	ಸಾಹಿತಿಗಳು	ಬೆಳೆಗೆರೆ
೨.	ವೀರಣ್ಣ ಬಿ	೭೫	ಮಾಜಿಪ್ರಧಾನರು	ದೊಡ್ಡೇರಿ
೩.	ತಿಪ್ಪಣ್ಣ ಬಿ	೫೫	ಸಾಹಿತಿ	ದೇವರ ಮರಿಕುಂಟೆ
೪.	ರಘು	೪೦	ಗ್ರಂಥಪಾಲಕರು	ಸಾಣಿಕೆರೆ
೫.	ರಂಗಧಾಮರೆಡ್ಡಿ ಎಂ.ಕೆ	೬೩	ಅರ್ಚಕರು	ಚಿಕ್ಕಮಧುರೆ
೬.	ರಾಮರೆಡ್ಡಿ	೮೪	ಸ್ವಾತಂತ್ರ ಹೋರಾಟಗಾರರು	ಚಿಗತನಹಳ್ಳಿ
೭.	ಮರುಳಪ್ಪ ಎಸ್	೭೨	ವ್ಯವಸಾಯ	ಗಂಜಿಗುಂಟೆ
೮.	ಮಡಿವಾಳರ ಲಕ್ಷ್ಮಣಪ್ಪ	೭೦	ವ್ಯವಸಾಯ	ಮೀರಸಾಬಿಹಳ್ಳಿ
೯.	ರಾಮಪ್ಪ ವಿ.ಹೆಚ್	೭೬	ನಿವೃತ್ತ ಶಿಕ್ಷಕರು	ವಿರುಪನಕುಂಟೆ
೧೦.	ಸಣ್ಣಹನುಮಂತರೆಡ್ಡಿ	೮೫	ವ್ಯವಹಾರಸ್ಥರು	ಕರೀಕೆರೆ
೧೧.	ಕೆಂಚಪ್ಪ	೫೦	ವ್ಯವಸಾಯ	ರೆಡ್ಡಿಹಳ್ಳಿ
೧೨.	ಜಗನ್ನಾಥ	೪೮	ವ್ಯವಸಾಯ	ಜಡೇಕುಂಟೆ
೧೩.	ತಿಪ್ಪೇಸ್ವಾಮಿ	೪೫	ವ್ಯವಹಾರಸ್ಥರು	ಉಪ್ಪಾರಹಟ್ಟಿ
೧೪.	ಸಿದ್ಧಲಿಂಗಪ್ಪ	೬೦	ವ್ಯವಹಾರಸ್ಥರು	ಚಳ್ಳಕೆರೆ
೧೫.	ಪೂಜಾರಿ ಬೋರಯ್ಯ	೩೮	ಪೂಜಾರಿ	ಬಂಗಾರದೇವರಹಟ್ಟಿ
೧೬.	ಬಸವರಾಜ್ ಎಂ.ವಿ.	೪೫	ಅರ್ಚಕರು	ಚಳ್ಳಕೆರೆ
೧೭.	ಸೂರಮ್ಮ	೮೦	–	ಕುಧಾಪುರ

[illegible]


[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
	[illegible]		[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
[illegible]		[illegible]	[illegible]

ನಕ್ಷೆಗಳು

ಚಿತ್ರದುರ್ಗ ಜಿಲ್ಲಾ ನಕ್ಷೆ



ಚಳ್ಳಕೆರೆ ತಾಲ್ಲೂಕು



ಛಾಯಾಚಿತ್ರಗಳು



ರಾಮದುರ್ಗದ ರಾಮಲಿಂಗೇಶ್ವರ ಗುಹಾಲಯ



ಚಳ್ಳಕೆರೆಯ ಚಳ್ಳಕೇರಮ್ಮನ ದೇವಾಲಯ



ಚಳ್ಳಕೆರೆಯ ವಿರಭದ್ರಸ್ವಾಮಿ ದೇವಾಲಯ









ಲಕ್ಷ್ಮಿನಾರಾಯಣ ದೇವಾಲಯದ ಅಧಿಷ್ಠಾನದ ಮೇಲಿರುವ ನೊಳಬಂರ ಕಾಲದ ಶಾಸನಗಲ್ಲು



ದೊಡ್ಡೇರಿಯಲ್ಲಿರುವ ನೊಳಂಬರಿಗೆ ಸೇರಿದ ದೇವಾಲಯದ ಸ್ತಂಭದ ಅವಶೇಷ



ದೊಡ್ಡೇರಿಯಲ್ಲಿರುವ ನೊಳಂಬರಿಗೆ ಸೇರಿದ ಸ್ತಂಭ



[illegible]



[illegible]



[illegible]



ದೊಡ್ಡೇರಿ ಗ್ರಾಮದಲ್ಲಿರುವ ವೀರಗಲ್ಲು



ಚಿಕ್ಕಮಧುರೆ ಗ್ರಾಮದ ಹೊಲದಲ್ಲಿ ಬಿದ್ದಿರುವ ಶಾಸನ ವೀರಗಲ್ಲು



ಚಿಕ್ಕಮಧುರೆ ಗ್ರಾಮದ ಹೊಲದಲ್ಲಿ ಬಿದ್ದಿರುವ ಶಾಸನ ವೀರಗಲ್ಲು








ಚಿಕ್ಕಮಧುರೆ ಗ್ರಾಮದ ಮಲ್ಲೇಶ್ವರ ದೇವಾಲಯದ ಪ್ರಾಂಗನದಲ್ಲಿರುವ
ಭಗ್ನ ಗಣಪತಿ ಶಿಲ್ಪ


ಚಿಕ್ಕಮಧುರೆ ಗ್ರಾಮದ ಮಲ್ಲೇಶ್ವರ ದೇವಾಲಯದ ಹತ್ತಿರ ವಿರುವ
ಮಹಿಷಾಸುರ ಮರ್ಧಿನಿ



ರಾಮಲಿಂಗೇಶ್ವರ ಗುಹಾಲಯಕ್ಕೆ ಅಭಿಮುಖವಾಗಿರುವ ನಂದಿ ಶಿಲ್ಪ



ಹಳೆದೊಡ್ಡೇರಿಯ ಬಯಲು ಪ್ರದೇಶಲ್ಲಿ ಬಿದ್ದಿರುವ ಶಾನ ವೀರಗಲ್ಲು



ದೊಡ್ಡೇರಿಯ ಕನ್ನೇಶ್ವರ ದೇವಾಲಯದಲ್ಲಿರುವ ವೀರಗಲ್ಲು



ರೆಡ್ಡಿಹಳ್ಳಿಯಲ್ಲಿರುವ ಅಂಜನೆಯನ ಮೂರ್ತಿ









ದೊಡ್ಡೇರಿಯ ಕನ್ನೇಶ್ವರ ದೇವಾಲಯದ ಗರ್ಭಗೃಹದಲ್ಲಿರುವ ಶಿವಲಿಂಗ



ಕಮ್ಮತ್ ಮರಿಕುಂಟೆ ಗ್ರಾಮದಲ್ಲಿರುವ ಸಪ್ತ ಮಾತೃಕೆಯರ ಶಿಲ್ಪ



ರಾಮಲಿಂಗೇಶ್ವರ ಗುಹಾಲಯದ ಭುವನೇಶ್ವರಿ









ಕರೀಕೆರೆಯಲ್ಲಿರುವ ನೂತನ ಶಿಲಾಯುಗದ ನೆಲೆ



ಮೀರಾಸಾಬಿಹಳ್ಳಿ ಹತ್ತಿರವಿರುವ ರಾಣಿಕೆರೆ



ರಾಮದುರ್ಗದ ಕೋಟೆಯಲ್ಲಿರುವ ಪುಷ್ಕರಣಿಗಳು









ಚಿಕ್ಕ ಮಧುರೆಯಲ್ಲಿರುವ ಸ್ತಂಭ ಶಾಸನ



ರಾಮಲಿಂಗೇಶ್ವರ ಗುಹಾಲಯ ಸ್ತಂಭದ ವಾಸ್ತುಶಿಲ್ಪ



ದೊಡ್ಡೇರಿಯಲ್ಲಿರುವ ನೊಳಂಬರಿಗೆ ಸೇರಿದ ಸ್ತಂಭ ಶಾಸನ



ದೊಡ್ಡೇರಿಯಲ್ಲಿರುವ ಉಳಿದಿರುವ ಬುರುಜಿನ ಅವಶೇಷ



ಸಾಣಿಕೆರೆ-ಶಿಥಿಲಾವಸ್ಥೆಯಲಿರುವ ಕೋಟೆ ಗೋಡೆ



ರಾಮದುರ್ಗ ಗುಡ್ಡದಲ್ಲಿರುವ ಕೋಟೆ ಗೋಡೆಯ ಅವಶೇಷ









ದೇವರ ಮರಿಕುಂಟೆಯಲ್ಲಿರುವ ಗರುಡ ಸ್ತಂಭ



ಸಾಣೆಕೆರೆ ಗ್ರಾಮದಲ್ಲಿ ಸಂಗ್ರಹಿಸಿಟ್ಟಿರುವ ಪ್ರಾಚಿನ ನಾಣ್ಯಗಳು



ಬೊಮ್ಮ ಸಮುದ್ರ ಗ್ರಾಮದ ಸ್ತಂಭದ ಅದಿಷ್ಠಾನದಲ್ಲಿ ಕೆತ್ತಿರುವ
ನಾಗರ ಹಾವು



ಸಾಣೆಕೆರೆ ಗ್ರಾಮದ ಹೊಲದಲ್ಲಿರುವ ವೀರ ಸತಿಗಲ್ಲು



ಚಳ್ಳಕೇರಮ್ಮ ದೇವಾಲಯದ ನವರಂಗದಲ್ಲಿರುವ ಸ್ತಂಭ



ಚಿಗತನಹಳ್ಳಿ ಗ್ರಾಮದ ಹೊಲದಲ್ಲಿರುವ ಹಾವಾಡದಮ್ಮ ಶಿಲ್ಪ









ಚಳ್ಳಕೇರಮ್ಮ ದೇವಾಲಯದ ಮುಖಮಂಟಪದಲ್ಲಿರುವ ಸ್ತಂಭಗಳು



ಸಾಣಿಕೆರೆಯ ಗ್ರಾಮದಲ್ಲಿ ಸಂಗ್ರಹಿಸಿಟ್ಟಿರುವ ಪ್ರಾಚೀನ ವಸ್ತುಗಳು



ಬಂಗಾರದೇವರ ಹಟ್ಟಿಯಲ್ಲಿರುವ ಮ್ಯಾಸಬೇಡ ಸಮುದಾಯದ
ಬಂಗಾರದೇವರ ಗುಡಿ





